ಕರ್ಣಾಟಕಪಂಚತಂತ್ರಂ

ಮಿತ್ರಸಂಪ್ರಾಪ್ತಿ

ಎಂಬ

ದ್ವಿತೀಯತಂತ್ರಂ

ಮೈಸೂರ್ ದೇಶದ ವಿದ್ಯಾಭ್ಯಾಸದಿಲಾಖೆಯ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ

ಅಪ್ಪಣೆಯ ಪ್ರಕಾರ

IV, V ಫಾರಂ ಮುಂತಾದ ತರಗತಿಗಳ ಉಪಯೋಗಕ್ಕೋಸ್ಕರ

ಮೈಸೂರು ಟ್ರೈನಿಂಗ್ ಕಾಲೇಜ್ ಕರ್ಣಾಟಪಂಡಿತರಾದ

ಮೈಸೂರ್ ಸೀತಾರಾಮಶಾಸ್ತ್ರಿಗಳಿಂದ

ವಿರಚಿತವಾದುದು.

ಮೈಸೂರು:

ಶ್ರೀನಿವಾಸ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.

1915

(Registered according to Act XXV of 1867.)

ಪೀಠಿಕೆ.

ಪಂಚ (ಐದು) ತಂತ್ರಗಳುಳ್ಳುದರಿಂದ ಇದಕ್ಕೆ ಪಂಚತಂತ್ರವೆಂದು ಹೆಸರು. ಆ ಐದುತಂತ್ರಗಳು—ಮಿತ್ರಭೇದ, ಮಿತ್ರಸಂಪ್ರಾಪ್ತಿ, ಕಾಕೋಲೂಕೀಯ, ಲಬ್ಧಪ್ರಣಾಶ, ಅಪರೀಕ್ಷಿತಕಾರಕ-ಎಂಬುವು. ಎರಡನೆಯ ತಂತ್ರಕ್ಕೆ ಮಿತ್ರಪ್ರಾಪ್ತಿ, ಮಿತ್ರಪ್ರಾಪಕ, ಸುಹೃಲ್ಲಾಭ-ಎಂದೂ, ಮೂರನೆಯದಕ್ಕೆ ಸಂಧಿವಿಗ್ರಹ—ಎಂದೂ, ಐದನೆಯದಕ್ಕೆ ಅಸಂಪ್ರೇಕ್ಷ್ಯಕಾರಿತ್ವ—ಎಂದೂ ಕೆಲವು ಪುಸ್ತಕಗಳಲ್ಲಿ ಹೆಸರುಗಳಿವೆ. ಆದರೆ ಮೊದಲು ವಿವರಿಸಿದ ಐದುಹೆಸರುಗಳೇ ಪ್ರಖ್ಯಾತಗಳು.

ಈ ಪಂಚತಂತ್ರವು—ಹಿಂದೆ ಮಹಿಲಾರೋಪ್ಯವೆಂಬ ಪಟ್ಟಣದಲ್ಲಿ ರಾಜ್ಯಭಾರ ಮಾಡುತಿದ್ದ ಅಮರಶಕ್ತಿಯೆಂಬ ರಾಜನ ಪುತ್ರರಾದ ದುಷ್ಟಬುದ್ಧಿಯುಳ್ಳ ಬಹುಶಕ್ತಿ, ಉಗ್ರಶಕ್ತಿ, ಅನಂತಶಕ್ತಿಯೆಂಬ ಮೂವರನ್ನು ಆರುತಿಂಗಳೊಳಗೆ ನೀತಿಶಾಸ್ತ್ರದಲ್ಲಿ ನಿಪುಣರನ್ನಾಗಿ ಮಾಡುವೆನೆಂದು ಸಭೆಯಲ್ಲಿ ಪ್ರತಿಜ್ಞೆಮಾಡಿ ಆ ರಾಜಕುಮಾರರಂ ನಿಮಿತ್ತ ಮಾಡಿಕೊಂಡು ಲೋಕೋಪಕಾರಕ್ಕೋಸ್ಕರ ಪಂಡಿತೋತ್ತಮನಾದ ವಿಷ್ಣುಶರ್ಮನೆಂಬ ಬ್ರಾಹ್ಮಣನಿಂದ ಸಂಸ್ಕೃತದಲ್ಲಿ ವಿರಚಿತವಾದುದೆಂಬುದು ಸುಪ್ರಸಿದ್ಧವಾಗಿಯೇ ಇದೆ.

ಅನೇಕನೀತಿವಿಷಯಗಳಿಂದ ಗರ್ಭಿತವಾಗಿರುವ ಈ ಗ್ರಂಥವು ಬಹುಕಾಲದಿಂದ ಪ್ರಚಾರದಲ್ಲಿರುತ್ತ ಅನೇಕಪರೀಕ್ಷೆಗಳಲ್ಲಿ ಪಠನೀಯವಾಗಿ ನಿಯಮಿಸಲ್ಪಡುತಿದೆ. ಸಕಲರಿಂದಲೂ ಆದರಣೀಯವಾದ ಸರ್ವೋತ್ತಮವೆನಿಸಿದ ಈ ಗ್ರಂಥವು "ಮೊದಲು ಆರನೆಯ ಶತಮಾನದಲ್ಲಿ ಪಾರ್ಸಿಭಾಷೆಗೂ, ಒಂಬತ್ತನೆಯ ಶತಮಾನದಲ್ಲಿ ಪಾರ್ಸಿಭಾಷೆಯಿಂದ ಅರಬ್ಬಿಭಾಷೆಗೂ, ಅನಂತರ ಹೀಬ್ರೂ, ಗ್ರೀಕ್, ಲ್ಯಾಟಿಂಗ್, ಸಿರಿಯಕ್ ಭಾಷೆಗಳಿಗೂ ಇವುಗಳಿಂದ ಯೂರೋಪ್ ಖಂಡದ ಇತರವಾದ ಎಲ್ಲಾಭಾಷೆಗಳಿಗೂ ಪರಿವರ್ತಿಸಲ್ಪಟ್ಟಿದೆ. ಹದಿನಾರನೆಯ ಶತಮಾನದಲ್ಲಿ ಮತ್ತೆ ಪಾರ್ಸಿಭಾಷೆಗೆ ಪರಿವರ್ತಿತವಾಗಿ ಮೊದಲನೆಯದಕ್ಕಿಂತ ಪ್ರಶಸ್ತಿಯಂ ಪಡೆದಿರುವುದು, ಬಳಿಕ ಇದರಿಂದ ತುರ್ಕೀಭಾಷೆಗೂ ಪರಿವರ್ತಿಸಲ್ಪಟ್ಟಿರುವುದು. ಅಲ್ಲದೆ

ಇಂಡಿಯಾದೇಶದ ಅನೇಕಭಾಷೆಗಳಲ್ಲಿಯೂ ಪರಿವರ್ತಿತವಾಗಿದೆ. ಪ್ರಪಂಚದ ನಾನಾ ಭಾಷೆಗಳಲ್ಲಿ ಪರಿವರ್ತಿಸಲ್ಪಟ್ಟುದು ಬೈಬಲ್ ಒಂದು ಈ ಪಂಚತಂತ್ರವೊಂದು ಅಲ್ಲದೆ ಮತ್ತಾವುದೂ ಇಲ್ಲ —ಎಂದು ಧಾರಾಳವಾಗಿ ಹೇಳಬಹುದು. ಪ್ರಖ್ಯಾತರಾದ ಸರ್ ವಿಲಿಯಂ ಜೋನ್ಸ್, ಮತ್ತು ಸರ್‌ಛಾರಲ್ಸ್ ವಿಲ್‌ಕಿನ್ಸ್ ಇವರಿಂದ ಇಂಗ್ಲೀಷಿಗೂ ಪರಿವರ್ತಿಸಲ್ಪಟ್ಟಿದೆ " ಎಂದೂ ತಿಳಿಯಬರುವುದು

ಕನ್ನಡದಲ್ಲಿ—ದುರ್ಗಸಿಂಹನ ಪಂಚತಂತ್ರವೆಂಬುದೊಂದು ಮುದ್ರಿತವಾಗಿರುವುದು. ಇದು ಹಳೆಗನ್ನಡದ ಶೈಲಿಯುಳ್ಳ ಪದ್ಯಗಳಿಂದಲೂ ವಚನಗಳಿಂದಲೂ ಕೂಡಿದೆ. ಇದು ಪ್ರಖ್ಯಾತವಾದ ವಿಷ್ಣುಶರ್ಮನ ಪಂಚತಂತ್ರವನ್ನು ಅನುಸರಿಸಿ ರಚಿತವಾದುದಲ್ಲ ವಿಷ್ಣುಶರ್ಮನ ಪಂಚತಂತ್ರದ ಕಥಾಭಾಗಕ್ಕೂ ಇದಕ್ಕೂ ಅನೇಕವ್ಯತ್ಯಾಸಗಳಿವೆ. ದುರ್ಗಸಿಂಹನ ಪಂಚತಂತ್ರವು ವಸುಭಾಗಭಟ್ಟನ ಪಂಚತಂತ್ರವನ್ನು ಅನುಸರಿಸಿದುದೆಂದು ಆತನ ಗ್ರಂಥದಿಂದಲೇ ತಿಳಿಯಬರುವುದು.

ಹಿಂದೆ ಮೈಸೂರು ವಿದ್ಯಾಭ್ಯಾಸದಿಲಾಖೆಯ ಮುಖ್ಯಾಧ್ಯಕ್ಷರಾಗಿದ್ದ ಮೆ|| ಜಿ ಗ್ಯಾರೆಟ್‌ಸಾಹೇಬರವರು ಮದ್ರಾಸ್ ಗವರ್ನಮೆಂಟ್ ಟ್ರಾನ್ಸ್ಲೇಟರವರ ಮುನಷಿ ಎಂ ಡಿ ಶಿಂಗರಾಚಾರ್ಯರ ಸಾಹಾಯ್ಯದಿಂದ, ೧೮೯೦ ರಲ್ಲಿ ಮುದ್ರಿಸಿದ ಕನ್ನಡದ ಪಂಚತಂತ್ರವೊಂದಿರುವುದು. ಇದರೊಳಗೆ ಅಲ್ಲಲ್ಲಿ ಸಂಸ್ಕೃತಮೂಲಗ್ರಂಥದ ಒಂದೊಂದು ಶ್ಲೋಕವೂ ಲಕ್ಷಣಬದ್ಧವಲ್ಲದ ಕೆಲವು ಕನ್ನಡದ ಪದ್ಯಗಳೂ ಇವೆ ಸಂಸ್ಕೃತಶ್ಲೋಕಗಳೆಲ್ಲವೂ ಪರಿವರ್ತಿಸಲ್ಪಟ್ಟಿಲ್ಲ. ಮಾತುಗಳು ಸಾಧಾರಣವಾಗಿವೆ. ಕಥಾಭಾಗವು ಕೇವಲಸಂಗ್ರಹವುಳ್ಳುದಾಗಿದೆ. ಇದು ವಿದ್ಯಾರ್ಥಿಗಳಿಗೆ ಈಗ ಅಷ್ಟೊಂದು ಪ್ರಯೋಜನಕರವಾಗಿಲ್ಲ.

"ಸಟೀಕ ವಿಷ್ಣುಶರ್ಮ ಪಂಚತಂತ್ರವು" ಎಂದು ಇನ್ನೊಂದು ಪ್ರತಿ ೧೮೮೯ ರಲ್ಲಿ ಮದ್ರಾಸ್ ಪಟ್ಟಣದಲ್ಲಿ ಮುದ್ರಿತವಾಗಿದೆ. ಇದರೊಳಗೆ ಅಲ್ಲಲ್ಲಿ ಒಂದೊಂದು ಸಂಸ್ಕೃತಶ್ಲೋಕವೂ ಅದರ ಕೆಳಗೆ ಟೀಕೆಯೂ ಕಥಾಭಾಗವೂ ಇದೆ. ಶ್ಲೋಕಗಳು ಅಸಂಬದ್ಧಗಳು ಮತ್ತು ಅಶುದ್ಧಗಳು. ಟೀಕೆ ಅಸಮಂಜಸವಾದುದು. ಕಥಾಭಾಗ ಮೂಲಕ್ಕೆ ವಿರುದ್ಧವಾಗಿಯೂ ಅಸಂಗತವಾಗಿಯೂ ಇದೆ. ಈ ಪ್ರತಿ ವಿದ್ಯಾರ್ಥಿಗಳಿಗೆ ಸ್ವಲ್ಪವೂ ಉಪಯೋಗಕರವಾಗಿಲ್ಲ.

೧೯೧೧ ರಲ್ಲಿ ಬಳ್ಳಾರಿಯಲ್ಲಿ ಒಂದು ಪ್ರತಿ ಮುದ್ರಿತವಾಗಿದೆ. ಮೇಲಣದಕ್ಕೂ ಇದಕ್ಕೂ ಏನೂ ಭೇದವಿಲ್ಲ.

ಬಹುನೀತಿರಂಜಿತವೂ ವ್ಯುತ್ಪಾದಕವೂ ಅರ್ಥಸಾಧಕವೂ ಆದ ವಿಷ್ಣುಶರ್ಮನ ಪಂಚತಂತ್ರವು ಪ್ರಪಂಚದ ನಾನಾಭಾಷೆಗಳಲ್ಲಿ ಪರಿವರ್ತಿತವಾಗಿ ಪ್ರಖ್ಯಾತವಾಗಿದ್ದರೂ ಇದುವರೆಗೆ ಕನ್ನಡದಲ್ಲಿ ತಕ್ಕ ರೀತಿಯಿಂದ ಪರಿವರ್ತಿಸಲ್ಪಡದೆ ಇರುವುದು ಅದೊಂದು ಕೊರತೆಯೇ ಸರಿ ಇದರಿಂದ ಪರೀಕ್ಷೆಗಳಲ್ಲಿ ಸಂಸ್ಕೃತಭಾಗವಂ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಪಂಚತಂತ್ರವು ಆಗಾಗ ಪಠನೀಯಗ್ರಂಥವಾಗಿ ನಿಯಮಿಸಲ್ಪಡುತಿದ್ದರೂ ಪರೀಕ್ಷೆಗಳಲ್ಲಿ ಕನ್ನಡದ ಭಾಗವಂ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಅದನ್ನು ಪಠನೀಯವಾಗಿ ನಿಯಮಿಸಲು ಅವಕಾಶವಿಲ್ಲ.

ನಮ್ಮ ಸಂಸ್ಥಾನದ ವಿದ್ಯಾಭ್ಯಾಸದಿಲಾಖೆಯ ಇನ್ಸ್ಪೆಕ್ಟರ್ ಜನರಲ್ ಸಾಹೇಬರ್, ರಾವ್ ಬಹುದೂರ್. ಎಮ್. ಶ್ಯಾಮರಾವ್ ಎಮ್. ಎ. ಯವರು ಈ ವಿಷಯವನ್ನು ಪರ್ಯಾಲೋಚಿಸಿ ಸಂಸ್ಕೃತಪಂಚತಂತ್ರವನ್ನು ಕನ್ನಡಿಸುವಂತೆ ನನಗೆ ಅಪ್ಪಣೆಯನ್ನಿತ್ತರು. ದೊಡ್ಡದಾದ ಈ ಗ್ರಂಥವನ್ನು ಕ್ಷಿಪ್ರದಲ್ಲಿ ಒಟ್ಟಿಗೆ ಕನ್ನಡಿಸಿ ಪ್ರಕಟಿಸಲು ಆಗದಿದ್ದರೂ. ಒಂದೊಂದುಭಾಗವನ್ನಾದರೂ ಪೂರೈಸಿ ಪ್ರಕಟಿಸಬೇಕೆಂದು ಪ್ರೋತ್ಸಾಹಿಸಿದರು. ವಿದ್ಯಾಭಿಮಾನಿಗಳೂ ಮಹಾಶಯರೂ ಆದ ಇವರ ಪ್ರೋತ್ಸಾಹದಿಂದ ಪ್ರೇರಿತನಾದ ನಾನು ಪಂಚತಂತ್ರವನ್ನು ಕನ್ನಡಿಸಲು ಪ್ರಾರಂಭಿಸಿದೆನು. ಮೊದಲು ಮಿತ್ರಭೇದವೆಂಬ ಮೊದಲನೆಯ ತಂತ್ರದಲ್ಲಿ ಕೆಲವು ಭಾಗಗಳನ್ನು ಬರೆದೆನು. ಈತಂತ್ರವು ದೊಡ್ಡದಾದುದರಿಂದ ಕ್ಷಿಪ್ರದಲ್ಲಿ ಪೂರೈಸಲು ಆಗಲಿಲ್ಲ. ಎರಡನೆಯದಾದ ಮಿತ್ರಸಂಪ್ರಾಪ್ತಿಯೆಂಬ ಈತಂತ್ರವನ್ನು ಕನ್ನಡಿಸಿ ಪೂರೈಸಿದೆ. ಶ್ರೀಯುತರಾದ ಈ ನಮ್ಮ ವಿದ್ಯಾಪ್ರಭುಗಳು ಈತಂತ್ರದ ಎಲ್ಲಾ ಪದ್ಯಗಳನ್ನೂ ಮೊದಲನೆಯತಂತ್ರದ ನೂರಾರು ಪದ್ಯಗಳನ್ನೂ ಕೇವಲಸಾವಧಾನತೆಯಿಂದ ಓದಿಸಿ ಕೇಳಿ ಸಂತೋಷಗೊಂಡು ಮುದ್ರಣಗೊಳಿಸಲು ಅನುಜ್ಞೆಯನಿತ್ತರು.

ಗ್ರಂಥವು ಸುಲಭಶೈಲಿಯಲ್ಲಿರಬೇಕೆಂಬ ಇವರ ಅಭಿಪ್ರಾಯವನ್ನು ಅನುಸರಿಸಿ ವಚನಗಳನ್ನು ಸುಲಭವಾದ ಶೈಲಿಯಲ್ಲಿಯೂ ಪದ್ಯಗಳನ್ನು ಸರಳವಾದರೀತಿಯಲ್ಲಿಯೂ ಬರೆದಿರುವೆನು. ಆದರೂ ಲಕ್ಷಣವಂ ಮೀರಿ ಪದ್ಯಗಳನ್ನು ರಚಿಸಿಲ್ಲ. ಪದ್ಯಗಳು ಲಕ್ಷಣಬದ್ಧವಾಗಿರಬೇಕೆಂಬುದೇ ನನಗೂ ಅಭಿಮತ. ಆದರೆ ಪ್ರಾಸವಿಷಯದಲ್ಲಿ ರೇಫಱಕಾರಂಗಳನ್ನೂ ೞಕುಳಕ್ಷಳಂಗಳನ್ನೂ ಸಮತೆಯಿಂದ ಸೇರಿಸಿರುವೆನು. ಇದು ಶಬ್ದಮಣಿದರ್ಪಣಕಾರನಾದ ಕೇಶಿರಾಜನಿಗೆ ಅನಭಿಮತವಾದುದಾದರೂ ಶಬ್ದಾನುಶಾಸನಕಾರನಾದ ಭಟ್ಟಾಕಳಂಕನಿಗೆ ಸಂಮತವಾದುದು. ಇಂತು ಅನುಸರಿಸಿ ಹೋಗದಿದ್ದರೆ ಅಂತಹ ಪ್ರಾಸನಿರ್ಬಂಧದಿಂದ ಬಂಧವು ಕಟುವಾದೀತೆಂದು ಎಣಿಸಿ ಗೌಣಪಕ್ಷವಂ ವಹಿಸಿರುವೆನು.

ಪದ್ಯಗಳನ್ನು ಸರಳವಾದ ರೀತಿಯಲ್ಲಿ ಬರೆದಿರುವೆನೆಂದು ನಾನು ತಿಳಿದಿರುವೆನು. ಆದರೂ ಶೈಲಿಯನ್ನು ಅನುಸರಿಸಿ ಅಲ್ಲಲ್ಲಿ ಪ್ರೌಢವಾದ ಶಬ್ದಗಳು ಬೀಳದಿರವು. ವ್ಯುತ್ಪಾದಕವಾದ ಅಂತಹಶಬ್ದವೊಂದೊಂದೂ ಇಲ್ಲದಿದ್ದರೆ ಪದ್ಯವು ಕೇವಲಪೇಲವವೆನಿಸುವುದು. ಆದಕಾರಣ ಅಂತಹಶಬ್ದಗಳ ಪ್ರಯೋಗವು ಪದ್ಯಗಳಲ್ಲಿ ಆವಶ್ಯಕವೆನಿಸಿರುವುದು. ವಿದ್ಯಾರ್ಥಿಗಳ ಉಪಯೋಗಕ್ಕೋಸ್ಕರ ಟಿಪ್ಪಣಿಯನ್ನು ರಚಿಸಿ ಕಡೆಯಲ್ಲಿ ಸೇರಿಸಿರುವೆನು. ಇದರಲ್ಲಿ ಪ್ರತಿಪದ್ಯದ ಕೆಲವುಶಬ್ದಗಳಿಗೆ ಅರ್ಥವು ಬರೆಯಲ್ಪಟ್ಟಿದೆ. ಅಲ್ಲಲ್ಲಿ ವ್ಯಾಕರಣ ವಿಚಾರವೂ ತಾತ್ಪರ್ಯವೂ ತಿಳಿಯಿಸಲ್ಪಟ್ಟಿದೆ.

ಈ ಯೆರಡನೆಯ ತಂತ್ರದಲ್ಲಿ:—

ಶ್ಲೋ॥ ಪ್ರಾಪ್ತವ್ಯಮರ್ಥಂ ಲಭತೇ ಮನುಷ್ಯಃ
ದೇವೋಪಿ ತಂ ಲಙ್ಘಯಿತುಂ ನ ಶಕ್ತಃ ।
ತಸ್ಮಾನ್ನ ಶೋಚಾಮಿ ನ ವಿಸ್ಮಯೋ ಮೇ
ಯದಸ್ಮದೀಯಂ ನ ಹಿ ತತ್ಪರೇಷಾಮ್ ॥

ಎಂಬ ಶ್ಲೋಕಕ್ಕೆ ಸಂಬಂಧಪಟ್ಟ ನಾಲ್ಕನೆಯಕಥೆ ಅನುಚಿತವಾದ ಶೃಂಗಾರ ವಿಷಯಗಳಿಂ ತುಂಬಿರುವುದರಿಂದಲೂ,

ಶ್ಲೋ॥ ಶಿಥಿಲೌ ಚ ಸುಬದ್ಧೌ ಚ ಪತತಃ ಪತತೋ ನ ವಾ ।
ನಿರೀಕ್ಷಿತೌ ಮಯಾ ಭದ್ರೇ ದಶವರ್ಷಾಣಿ ಪಂಚ ಚ ॥

ಎಂಬ ಶ್ಲೋಕಕ್ಕೆ ಸಂಬಂಧಪಟ್ಟ ಆರನೆಯಕಥೆ ಹಾಸ್ಯಾಸ್ಪದವಾದ ಹೇಯ ವಿಷಯದಿಂ ಕೂಡಿರುವುದರಿಂದಲೂ ಈಯೆರಡುಕಥಾಭಾಗಗಳನ್ನೂ ಇವಕ್ಕೆ ಸಂಬಂಧಪಟ್ಟ ಪದ್ಯಗಳನ್ನೂ, ಹೇಯವಾದ ಉಪಮಾನಾರ್ಥವುಳ್ಳ ಇತರವಾದ ಮೂರುಪದ್ಯಗಳನ್ನೂ ಪರಿವರ್ತಿಸದೆ ಬಿಟ್ಟಿರುವೆನು.

ಇದರಲ್ಲಿರುವ ಪದ್ಯಗಳೆಲ್ಲವನ್ನೂ ಸಂಸ್ಕೃತಶ್ಲೋಕಗಳೊಡನೆ ಸಾವಧಾನತೆಯಿಂದ ಪರಾಮರ್ಶಿಸಿ ಕೆಲವು ತಿದ್ದುಪಾಟಗಳನ್ನು ಸೂಚಿಸಿದ ಸಹೃದಯರೂ ಕರ್ಣಾಟ

ಪಂಡಿತರೂ ಆದ ಮ|| ರಾ|| ರಃ|| ಎಸ್, ತಿಮ್ಮಪ್ಪಯ್ಯಶಾಸ್ತ್ರಿಗಳ ವಿಷಯದಲ್ಲಿ ನಾನು ಅತ್ಯಂತಕೃತಜ್ಞನಾಗಿರುವೆನು.

ಗುಣಜ್ಞರಾದ ವಿದ್ವಾಂಸರು ಈಗ್ರಂಥವನ್ನು ಆದರದಿಂದ ಅವಲೋಕಿಸಿ ತಪ್ಪುಗೆ ತೋರಿದ ನ್ಯೂನತೆಗಳನ್ನು ದಯೆಯಿಟ್ಟು ತಿಳಿಯಿಸಿದರೆ ಅವುಗಳನ್ನು ಅತ್ಯಂತಕೃತಜ್ಞತೆಯಿಂದ ಅಂಗೀಕರಿಸಿ ದ್ವಿತೀಯಮುದ್ರಣದಲ್ಲಿ ಸರಿಪಡಿಸುವೆನು.

ಗುಣಜ್ಞಮಹಾಶಯರ ಪ್ರೋತ್ಸಾಹದಿಂದ ಇತರಭಾಗಗಳನ್ನೂ ಕ್ಷಿಪ್ರದಲ್ಲಿ ಪೂರೈಸಬೇಕೆಂದಿರುವೆನು.

ಮೈಸೂರು
ತಾ|| ೨೦-೫-೧೫

ಮೈಸೂರ್ ಸೀತಾರಾಮಶಾಸ್ತ್ರಿ

ಶುದ್ಧಿ ಪತ್ರ.

ಪುಟ	ಪಙ್ತಿ.	ಅಶುದ್ಧ	ಶುದ್ಧ.
೧	೪-೫	ಸಂಪತ್ತಿ	ಸಂಪ್ರಾಪ್ತಿ
೧೫	೨	ಸಹಜವ್ವೈರಂ	ಸಹಜವೆನಿಪವ್ವೈರಂ
೩೮	೧೩	ಕೇಳಿ	ಹೇಳಿ
[illegible]೪	೧೪	ಮೆಡರ್ಗಳೆ	ನೆಡರ್ಗಳೆ
,,	೧೬	ಳೊಡನೆಯ	ಳೊಡನೆಯೆ

ಶ್ರೀರಸ್ತು.

ಶ್ರೀರಾಮಪ್ರಸೀದ.

ಕರ್ಣಾಟಪಂಚತಂತ್ರಂ

ಮಿತ್ರಸಂಪತ್ತಿಯೆಂಬ ದ್ವಿತೀಯತಂತ್ರಂ

ಮಿತ್ರಸಂಪತ್ತಿಯೆಂಬ ಈ ಯೆರಡನೆಯ ತಂತ್ರವಾರಂಭಿಸಲ್ಪಡುವುದು; ಇದರ ಮೊದಲನೆಯ ಶ್ಲೋಕವಿದು:—

ಕಂ॥ ಮಹಿಯೊಳಸಾಧನರಾದೊಡ ।
ಮಹಹ ಬಹುಶ್ರುತರೆನಿಪ್ಪ ವಿದ್ವಾಂಸರ್ಕಳ್ ॥
ವಹಿಲದೆ ಕಜ್ಜಂಗಳ ನಿ ।
ರ್ವಹಿಪರ್ ಕಾಗೆಯಿಲಿಯೆರಳೆಯಾಮೆಗಳಂತೆವೋಲ್ ॥೧॥

ಅದೆಂತೆನೆ:—

ದಕ್ಷಿಣದೇಶದಲ್ಲಿ ಮಹಿಳಾರೋಪ್ಯವೆಂಬ ಒಂದು ಪಟ್ಟಣವುಂಟು. ಅದರಬಳಿ ಒಂದು ದೊಡ್ಡಾಲದ ಮರವಿದ್ದಿತು. ಅದು ಅತ್ಯುನ್ನತವಾದುದು. ಅನೇಕಪಕ್ಷಿಗಳು ಅದರ ಫಲಗಳಂ ತಿಂದು ಜೀವಿಸುತಿದ್ದುವು. ಅನೇಕಕ್ರಿಮಿಕೀಟಂಗಳು ಅದರ ಪೊಟ್ಟರೆಗಳಂ ಆಶ್ರಯಿಸಿಕೊಂಡಿದ್ದುವು. ದಾರಿಗರು ಅದರ ನೆಳಲಲ್ಲಿ ಕುಳಿತು ವಿಶ್ರಮಿಸಿಕೊಳುತಿದ್ದರು.

ಯುಕ್ತವಿದು:—

ವೃ॥ ನೆಲೆಗೊಳ್ಳದಿದ್ರ್ಸುಗುಂ ಮಿಗಂ ಜೆಗುರ್ಗಳಂ ಮೆಲ್ಲಗಂ
ಖಗಂ ಕೋಟರಂ | ಗಳೊಳಕ್ಕರ್ಗಂ ಪುಟ್ಟು ಕೋಡಿನೊಳ್ನಲವಿ
ಸಿಂದೋಡಾಡುಗುಂ ಕೋಡಗಂ | ಅಳಿ ಪೀಗ್ಗಂ ಸಜ್ಜುವೂವ
ಸೀಪರಿ ಸಮಸ್ತಾಂಗಂಗಳಂ ಪ್ರಾಣಿವಂ | ಡಳಗಾನಂದವೊ
ಡರ್ಚುವಾ ಮರನೆ ಮೇಲ್ ಭೂಭಾರವಿಸ್ಸೆಲ್ಲಮುಂ ||೨||

ಅಲ್ಲಿ "ಲಘುಪತನಕ" ಎಂಬ ಕಾಗೆ ವಾಸಮಾಡುತಿದ್ದಿತು. ಅದು ಬಂದುಕಾಲದಲ್ಲಿ ಉದರಪೂರಣಕ್ಕೋಸ್ಕರ ಊರಿಗೆ ಹೊರಟು ಮುಂದೆ ನೋಡುವಷ್ಟರಲ್ಲಿ, ಕೈಯಲ್ಲಿ ಬಲೆಯಂ ಪಿಡಿದು ಕರಿಯಮೈಯೂ ಒಡೆದ ಕಾಲ್ಗಳೂ ಮೇಲೆತ್ತಿ ಕಟ್ಟದ ಕುರುಳೂ ಉಳ್ಳವನಾಗಿ ಯಮಕಿಂಕರನಂತೆ ಕಾಣುವ ಒಬ್ಬ ಮನುಷ್ಯನು ಇದಿರಾದನು.

ಬಳಿಕ ಅವನಂ ಕಂಡು ಮನದಲ್ಲಿ ಶಂಕಿಸಿ-ಈಗ ಈ ದುರುಳನು ನನಗಾಶ್ರಯವಾದ ಆಲದಮರದ ಕಡೆ ಬರುತಿರುವುದರಿಂದ ಆ ಮರದಲ್ಲಿ ವಾಸಿಸುವ ಪಕ್ಷಿಗಳಿಗೆ ವಿನಾಶವುಂಟಾದೀತೇ ? ಅಥವಾ ಏನೂ ಇಲ್ಲವೋ ? ತಿಳಿಯದಲ್ಲಾ!-ಎಂದು ಚಿಂತಿಸಿತು.

ಇಂತು ಬಹುವಿಧವಾಗಿ ಚಿಂತಿಸಿ ಆಕ್ಷಣವೇ ಹಿಂದಿರುಗಿ ಆ ಆಲದ ಮರವಂ ಸೇರಿ ಎಲ್ಲಾಹಕ್ಕಿಗಳನ್ನೂ ಕುರಿತು--ಎಲೆ ಪಕ್ಷಿಗಳಿರ! ದುರುಳನಾದ ಈ ಬೇಡನು ಕೈಯಲ್ಲಿ ಬಲೆಯನ್ನೂ ಅಕ್ಕಿಗಳನ್ನೂ ಹಿಡಿದುಕೊಂಡು ಬರುತಿರುವನು. ಆದುದರಿಂದ ನೀವೆಂತೂ ಇವನನ್ನು ನಂಬಲಾಗದು. ಇವನು ಬಲೆಯಂ ಬೀಸಿ

ಅಕ್ಕಿಗಳಂ ಚೆಲ್ಲುವನು. ನೀವೆಲ್ಲರೂ ಆ ಅಕ್ಕಿಗಳಂ ಕಾಲಕೂಟವೆಂದು ತಿಳಿಯಬೇಕು—ಎಂದಿತು.

ಅದು ಇಂತು ನುಡಿಯುತಿರುವಾಗಳೇ ಆ ಬೇಡನು ಆ ಆಲದ ಮರದ ಬಳಿಗೆ ಬಂದು ಬಲೆಯಂ ಬೀಸಿ ಲಕ್ಕಿಹೂವಂತಿರುವ ಅಕ್ಕಿಗಳಂ ಚೆಲ್ಲಿ ಸ್ವಲ್ಪ ದೂರ ಹೋಗಿ ಅಲುಗಾಡದೆ ನಿಂತಿದ್ದನು.

ಬಳಿಕ ಅಲ್ಲಿದ್ದ ಆ ಹಕ್ಕಿಗಳು ಲಘುಪತನಕದ ನುಡಿಯೆಂಬ ಅಗಣಿಯಿಂದ ತಡೆಗೊಂಡು ಆ ಅಕ್ಕಿಗಳಂ ನಂಜಿನ ಮೊಳಕೆಗಳಂತೆ ಬಗೆದು ಸುಮ್ಮನಿದ್ದುವು.

ಇಷ್ಟರೊಳಗೆ "ಚಿತ್ರಗ್ರೀವ" ಎಂಬ ಕಪೋತವು ಸಹಸ್ರ ಪರಿವಾರದೊಡನೆ ಉದರಪೂರಣಕ್ಕೆ ಸುತ್ತಾಡುತ್ತ ಆ ಅಕ್ಕಿಗಳಂ ದೂರದಲ್ಲಿ ಕಂಡು ಲಘುಪತನಕದಿಂ ತಡೆಯಲ್ಪಟ್ಟರೂ ಜಿಹ್ವಾಚಾಪಲ್ಯದಿಂದ ತಿನಬೇಕೆಂದು ಬಲೆಗೆ ಬಿದ್ದು ಪರಿವಾರದೊಡನೆ ಸೆರೆಹಿಡಿಯಲ್ಪಟ್ಟಿತು.

ಇದು ತಕ್ಕುದು:—

ಕಂ॥ ಎಳಸುವ ಜಿಹ್ವಾಚಾಪಳ ।
ಮಳವಟ್ಟಿ ನೀರೊಳಗೆ ವಸಿಪ ಮೀಂಗಳ್ಗೆಂತಂ ॥
ತಳ್ತಿವಾಕಸ್ಮಿಕವೆನೆ ಸಂ ।
ಗಳಿಕುಂ ತಿಳಿವಿಲ್ಲದಿರ್ಪ ಗಾಂಪರ್ಗಿಳೆಯೊಳ್ ॥೩॥

ಅಥವಾ ವಿಧಿ ಪ್ರತಿಕೂಲವಾದುದರಿಂದ ಇಂತಾಗುವುದು. ಅದರ ತಪ್ಪಿಲ್ಲ. ಈ ವಿಷಯವಿಂತು ಹೇಳಿದೆ:—

ವೃ॥ ಪೆಱರಾ ಪೆಂಡಿರ ಕಳ್ವುದಲ್ತು ಚಿತಮೆಂದಾರಾವಣಂ ರಾಮ
ಚಂ । ದಿರನುಂ ಪೊಂಮಿಗಮೆಂಬುದಿಲ್ಲವೆನುತೆಂತಾರಯ್ದರಿಲ್ಲಂ

ಯುಧಿಷ್ಠಿರನೀಡಾದನೆಡಗರ್ದೆಂತು ನೆಗಳ್ದಿಕ್ಷ್ವಾಕಿ ನಿಡೆಯುಂ ಕೇಡು ಸಾರ್ದಿರೆ ಗಾಂಪೇಱದ ಚಿತ್ತಮುಳ್ಳವರ್ಗೆ ನೀಡುಂ ಬುದ್ಧಿತಾಂ ಕುಂದುಗುಂ ॥೪॥

ಕಂ॥ ಪತ್ತಿರೆ ಮಿೞ್ತುವ ಪಾಶಂ ।
ಮತ್ತಂ ಬಿದಿಯಿಂದೆ ಕಲುಷಮೊಂದಿರೆ ಚಿತ್ತಂ ।
ಎತ್ತಂ ಕೊಂಕಿಂ ಪಸರಿಕು ।
ಮುತ್ತಮಮೆಂದೆನಿಪ ಪಿರಿಯರಾಬುದ್ಧಿಗಳುಂ ॥೫॥

ಇಷ್ಟರೊಳಗೆ ಬೇಡನು ಅವು ಸೆರೆಗೆ ಸಿಕ್ಕಿದುದನರಿತು ಸಂತೋಷಗೊಂಡು ದೊಣ್ಣೆಯಂ ಎತ್ತಿ ಅವಂ ಕೊಲಲು ಓಡಿ ಬಂದನು. ಚಿತ್ರಗ್ರೀವವು ತಾನು ಪರಿವಾರದೊಡನೆ ಸೆರೆಗೆ ಸಿಕ್ಕಿಕೊಂಡುದಂ ತಿಳಿದು, ಬರುತಿರುವ ಬೇಡನಂ ಕಂಡು ಆ ಕಪೋತಂಗಳಂ ಕುರಿತು-ಇಂತೆಂದಿತು:—

ಎಲೈ ! ಅಂಜದಿರಿ. ಈ ವಿಷಯದಲ್ಲಿ ನೀತಿಯುಂಟು:—

ಕಂ॥ ಆವರಿಸುವ ದುಗುಡಂಗಳೊ ।
ಳಾವನ ಮತಿ ಕುಂದದಿರ್ಕುಮೋ ತಾನಾತಂ ।
ಭಾವಿಸೆ ನಿಕ್ಕುವ ಮದಱನು ।
ಭಾವದಿ ನವಱಂತನೆಯ್ದುವಂ ಗಡ ಜಗದೊಳ್ ॥೬॥

ಸಿರಿಯೊಳಮೆಡಱಿನೊಳಮಹಹಾ ।
ಪರಿಕಿಸೆ ಮಹನೀಯರೊಂದೆತೆಱದಿಂದಿರ್ಪರ್ ।
ತರಣಿ ಮಿಗೆ ಕೆಚ್ಚನಿರ್ಪಂ ।
ನಿರಿಕಿಸೆ ಯುದಯದೊಳಮಸ್ತಮಯದೊಳಮೆಂದುಂ ।

ಆದಕಾರಣ ನಾವೆಲ್ಲರೂ ಪಾಶಜಾಲಂಗಳೊಡನೆ ಲೀಲೆ ಯಿಂದ ಹಾರಿ ಇವನ ಕಣ್ಣಿಗೆ ಬೀಳದಂತೆ ಹೋಗಿ ಬಿಡುಗಡೆಯಂ ಹೊಂದೋಣ. ಭಯಪಟ್ಟುಕೊಂಡು ಅಂತು ಸ್ವಚ್ಛಂದದಿಂದ ಹಾರಿಹೋಗದಿದ್ದರೆ ಮೃತ್ಯುವಿಗೆ ತುತ್ತಾಗುವಿರಿ. ಸಜ್ಜನರು ಒಗ್ಗಟ್ಟನಿಂದ ಎಂತಹ ಕಷ್ಟವನಾದರೂ ಸಹಿಸುವರು. ಹೇಳಿದೆ:—

ಕಂ॥ ತಂತುಗಳಾಯತವೆನಿಪುವು
ಸಂತತವೋರಂತೆ ಪಲವು ಕೂಡಿರ್ಪುದಱಿಂ ॥
ಅಂತುಪಟಳವಮಂ ಸಹಿಸುಗು ।
ಮಂತದಱಿಂ ತಂತುಗಳನೆ ಪೋಲ್ವುಗ್ಗಂ ಸಂತರ್ ॥೮॥

ಬಳಿಕ ಅದೇರೀತಿ ಮಾಡಲು, ಬೇಡನು ಬಲೆಯೊಡನೆ ಆಕಾಶದಲ್ಲಿ ಹಾರಿಹೋಗುತಿರುವ ಆ ಹಕ್ಕಿಗಳ ಹಿಂದೆ ಅನುಸರಿಸುತ್ತ ನೆಲದಲ್ಲಿ ಓಡಿದನು. ಬಳಿಕ ಮೇಲೆನೋಡಿ ಈ ಪದ್ಯವಂ ನುಡಿದನು:—

ಕಂ॥ ಬಲೆಯಂ ಕೊಂಡೊಡಗೂಡುತೆ ।
ಪಲವೊಯ್ಯನೆ ಪಾಱಿಪೋಪುವೀ ಪಕ್ಕಿಗಳುಂ ॥
ಕಲಹಂ ತಮಗೊದವಲೊಡಂ ।
ನೆಲಕ್ಕೆ ಪತಪತನೆ ಬೀೞ್ಗುಮೆಲೆ ಸಂದೆಯಮೇಂ ॥೯॥

ಲಘುಪತನಕವೂ ಉದರಭರಣಕಾರ್ಯವನುಳಿದು "ಇಲ್ಲಿ ಏನಾಗುವುದೋ" ಎಂದು ಕುತೂಹಲದಿಂದ ಆ ಬೇಡನ ಹಿಂದೆಯೇ ಅನುಸರಿಸಿ ಹೋಯಿತು.

ಬಳಿಕ ಬೇಡನು ಆ ಹಕ್ಕಿಗಳು ಕಣ್ಣಿಗೆ ಕಾಣದೆ ಹೋದುದ ನರಿತು ನಿರಾಶನಾಗಿ ಈ ಯೆರಡು ಪದ್ಯಂಗಳಂ ಪಠಿಸಿದನು:—

ಕಂ॥ ಆಗದುದಾಗದದಾವಗ ।
ಮಾಗುವುದಾಗುವುದು ಯತ್ನಮಂ ಗೆಯ್ಯದೊಡಂ ॥
ಆಗುವಯೋಗವದಿಲ್ಲದೊ ।
ಡಾಗಳೆ ಪೋಗುವುದು ಕೈಗೆ ಬಂದೊದವಿದುದುಂ ॥೧೦॥

ಅಂತಲ್ಲದೆ:—

ಕಂ॥ ಬಿದಿಯುನನುಕೂಲವಾಗಿರೆ ।
ಯೊದವಿದೊಡಂ ಕಷ್ಟದಿಂದೆ ಪಣವೆಂತಾನುಂ ॥
ಅದು ತನ್ನೆಡೆಯೊಳ್ ಮುನ್ನಿ
ರ್ದುದುಮಂ ಬಿಸದೀಽಡ್ದುಕೊಂಡು ಪೋಗುವುದಲ್ತೇ ॥

ಅದಿರಲಿ. ನಾನು ಹಕ್ಕಿಗಳ ಮಾಂಸವಂ ಆಶಿಸಿದುದಕ್ಕೆ ಕುಟುಂಬಜೀವನಸಾಧನವಾದ ನನ್ನ ಬಲೆಯೂ ಹೋಯಿತು-ಎಂದು ದುಃಖಿಸುತ್ತ ಹಿಂದಿರುಗಿ ಹೋದನು.

ಚಿತ್ರಗ್ರೀವವೂ ಬೇಡನು ಕಣ್ಣಿಗೆ ಕಾಣದೆ ಹೋದುದಂ ತಿಳಿದು ಪರಿವಾರವಂ ಕುರಿತು ಇಂತೆಂದಿತು:—

ಎಲೈ! ದುರುಳನಾದ ಆಬೇಡನು ಹಿಂತಿರುಗಿದನು. ಅದರಿಂದ ಎಲ್ಲರೂ ಸ್ವಸ್ಥರಾಗಿ ಮಹಿಲಾರೋಪ್ಯನಗರದ ಉತ್ತರದ ಕಡೆಗೆ ಹೊರಡಿ. ಅಲ್ಲಿ ನನ್ನ ಸ್ನೇಹಿತ ಹಿರಣ್ಯಕನೆಂಬ ಮೂಷಿಕನಿರುವನು. ಅವನು ಎಲ್ಲರ ಪಾಶವನ್ನೂ ಛೇದಿಸುವನು. ಈ ವಿಷಯದಲ್ಲಿ ನೀತಿವಚನವುಂಟು:—

ಕಂ॥ ಎಡರ್ಗಳದಾರ್ಗಾನುಂ ಸಂ
ಗಡಿಸಿದ ವೇಳೆಯೊಳೊದಳ್ದು ಮಾಜ್ಯಾತ್ರದಿನಾ ॥
ದೊಡಮೊಯ್ಯನೆ ಸಾಹಾಯ್ಯಮ
ನೊಡರಿಸುವಂ ಕೆಳೆಯನಲ್ಲದಿಂ ಪೆಱನಾವೊಂ ॥೧೨॥

ಇಂತು ಆ ಕಪೋತಂಗಳು ಚಿತ್ರಗ್ರೀವದಿಂ ಬೋಧಿಸಲ್ಪಟ್ಟು ಮಹಿಲಾರೋಪ್ಯನಗರದಲ್ಲಿರುವ ಹಿರಣ್ಯಕವೆಂಬ ಮೂಷಿಕದ ಬಿಲದುರ್ಗವಂ ಸೇರಿದುವು.

ಹಿರಣ್ಯಕವೆಂಬ ಆ ಮೂಷಿಕವೂ ಸಹಸ್ರಮುಖಗಳುಳ್ಳ ಬಿಲದುರ್ಗವಂ ಹೊಕ್ಕು ಯಾರಿಂದಲೂ ಭಯವಿಲ್ಲದೆ ಸುಖದಿಂದ ಇರುತಿದ್ದಿತು.

ಯುಕ್ತಿಯಿದು:—

ಕಂ॥ ಪಲ್ಲಿಲಿವಾವುಂ ಮದರಸ ।
ವಿಲ್ಲದಮಾತಂಗಮುಂ ಧರಿತ್ರೀತಲದೊಳ್ ॥
ಎಲ್ಲರ್ಗಂ ವಶವೆನಿಕುಂ ।
ಸೊಲ್ಲಿಪುದೇಂ ಪೊದ*ಳ್ದು ದುರ್ಗಮಿಲ್ಲದ ನೃಪನುಂ ॥

ಮತ್ತಂ,

ಕಂ॥ ಧುರವೊದವಿದಂದು ದುರ್ಗದೆ ।
ಧರಣೀಶಂಗಾವುದಹಹ ಸಿದ್ಧಿಪ್ರದದು ತಾಂ ॥
ನೆರೆದಿರೆ ಸಾಸಿರವಾನೆಗ ।
ಳರರೇ ಸಿದ್ಧಿಸವು ಲಕ್ಕಗುದುರೆಗಳಿರೆಯುಂ ॥೧೪॥
ಬರೆಯುಂ ಸೂರ್ವರ್ ಕೋಂಟೆಯೊ ।
ಳಿರುತೆಚ್ಚಪನೊರ್ವನಾದೊಡಂ ಬಿಲ್ಲಾರಂ ॥
ತಿರೆಯೊಳ್ ದುರ್ಗವನವಜಿಂ ।
ನೆಪೆ ಪೊ*ಗಳ್ವರ್ ನೀತಿಶಾಸ್ತ್ರದೊಳ್ ತಿಳಿವುಳ್ಳರ್ ॥

ಬಳಿಕ ಚಿತ್ರಗ್ರೀವವು ಬಿಲವಂ ಸೇರಿ—ಎಲೆಎಲೆ ಕೆಳೆಯ ಹಿರಣ್ಯಕ ! ಬೇಗ ಬಾ. ನನಗೆ ಮಹತ್ತರವಾದ ದುಃಖವುಂಟಾಗಿರುವುದು. ಎಂದು ಗಟ್ಟಿಯಾಗಿ ಕೂಗಿತು.

ಅದಂ ಕೇಳಿ ಹಿರಣ್ಯಕವು ಬಿಲದುರ್ಗದ ಒಳಗೇ ಇದ್ದು ಕೊಂಡು, ಎಲೆ! ನೀನು ಯಾರು? ಏಕೆಬಂದೆ? ನಿಮಿತ್ತವೇನು? ನಿನ್ನದುಃಖವೇನು? ಅದಂ ಪೇಳು- ಎಂದಿತು.

ಚಿತ್ರಗ್ರೀವವು ಅದಂಕೇಳಿ, ಅಯ್ಯಾ! ಚಿತ್ರಗ್ರೀವನೆಂಬ ಕಪೋತರಾಜನಾದ ನಾನು ನಿನ್ನ ಕೆಳೆಯನು. ಅದುದರಿಂದ ಬೇಗ ಬಾ. ವಿಶೇಷಪ್ರಯೋಜನವುಂಟು—ಎಂದುದು.

ಹಿರಣ್ಯಕವು ಆ ಮಾತಂ ಕೇಳಿ ರೋಮಾಂಚವಂ ತಾಳಿ ಸಂತೋಷಗೊಂಡು ಸ್ಥಿರವಾದ ಮನಸ್ಸಿನಿಂದ ತ್ವರೆಪಡುತ್ತ ಹೊರ ಟುಬಂದಿತು. ಇದು ಯುಕ್ತವೇ ಸರಿ.

ಕಂ॥ ಎಂದುಂ ನಯನಂಗಳ್ಗಾ ।
ನಂದಮನೊಡರಿಸುವ ನೇಹವೊಂದಿದ ಕೆಳೆಯರ್ ।
ವಂದಿತರೆನಿಸುವ ಗೃಹಿಗಳ ।
ಮಂದಿರಮಂ ಕುಱಿತು ಬರ್ಪರಲ್ತೆ ಡಿಗಡಿಗಂ ॥೧೬॥

ರವಿಯುದಯಂ ವೀಳೆಯಮುಂ ।
ಭುವಿಯೊಳ್ ಭಾರತದ ನೆಗಳ್ದ ಕತೆಯುಂ ಮನಕೊ ॥
ಪ್ಪುವ ಮಡದಿಯು ಮೊಳ್ಗೆಳೆಯಂ ।
ನವನವವೆನಿಸಿದಪುವಯ್ಯ ನಿಚ್ಚಮಿವೆಲ್ಲಂ ॥೧೭॥

ಅನುದಿನಮುಂ ಕೆಳೆಯರದಾ ।
ವನ ಮನೆಯಂ ಕುಱಿತು ಬಂದು ತಾಂ ಸೇರ್ದಪರಾ ।
ಮನುಜನ ಮನದೊಳ್ ಜನಿಸುವ ।
ಘನಸೌಖ್ಯಕೆ ಸಾಟಿಯೆನಿಪ ಸುಖವಿನ್ನಿಲ್ಲಂ ॥೧೮॥

ಬಳಿಕ ಪರಿವಾರದೊಡನೆ ಬಲೆಗೆ ಸಿಕ್ಕಿದ ಚಿತ್ರಗ್ರೀವವಂ ಹಿರಣ್ಯಕವು ನೋಡಿ ವ್ಯಸನಗೊಂಡು--ಎಲೆ! ಇದೇನು ? —

ಎನಲು, ಚಿತ್ರಗ್ರೀವವು—ಅಯ್ಯಾ! ತಿಳದಿದ್ದರೂ ಏಕೆ ಬೆಸಗೊಳುವೆ? ಸೂಕ್ತಿಯಿಂತಿರುವುದು:—

ಕಂ॥ ಒದವಾವುದಱತ್ತಣಿ ನಾ ।
ವುದಱಿಂದೆಂದೆಂತುಟಾವುದೆನಿತೆತ್ತ ಸಮಂ ॥
ತದಱತ್ತಣಿನದಱಿಂದಂ ।
ಮ ದಲಂತುಟದನಿತು ಮತ್ತ ಬಿದಿಯಿಂದಕ್ಕುಂ ॥೧೯॥

ಜಿಹ್ವಾಚಾಪಲದಿಂದ ನಾನು ಈ ಬಂಧನಕ್ಕೊಳಗಾದೆನು. ಈಗ ನೀನು ಥಟ್ಟನೆ ಪಾಶವಂ ಬಿಡಿಸು.

ಅದನಾಲಿಸಿ ಹಿರಣ್ಯಕವಿಂತೆಂದಿತು:—

ಕಂ॥ ನೂಱಱುಂ ಯೋಜನದಿಂ ।
ದೂರದೆ ಕಂಡಪುದು ಪಕ್ಕಿ ಮಾಂಸಮನಹಹಾ ॥
ಆರಯೆ ತನ್ನಯ ಪಕ್ಕದೊ ।
ಳಾರಚಿಸಿದ ಸೆಱೆಯ ಕಾಣದದು ವಿಧಿವಶದಿಂ ॥೨೦॥

ಅಂತಲ್ಲದೆ;—

ರವಿಶಶಿಗಳ್ಗುಪ್ಪಪರಾ ।
ಗವನಾನೆಯು ಪಾವ ಪಕ್ಕಿಯಾ ಬಂಧನಮಂ ॥
ಕವಿಗಳ ಬಡತನಮುಮನಾ ।
ನವಲೋಕಿಸಿ ಬಲ್ಲಿತಹಹ ಬಿದಿಯೆಂದಱಿವೆಂ ॥೨೧॥

ಮತ್ತು:—

ವೃ॥ ಬಾನೊಳ್ ಸುತ್ತುತುಮಿರ್ದೊಡಂ ಹತಿಗೆ ತಾಂ ಪಕ್ಕಾಗುಗುಂ ಪಕ್ಕಿ ಮೇಣ್ । ಮೀನೆಯ್ದಿರ್ದೊಡಮಾಳವುಳ್ಳ ಕಡಲಂ ಜಾಣರ್ಕಳಿಂ ಬಂಧಿಕುಂ । ಏನಕ್ಕುಂ ಗಡ ಪಾಪದಿಂ ಸುಕೃತದಿಂ

ತಾಣಂಗಳಿಂದೇಂಗುಣಂ । ತಾನೀಙ್ಪಂ ಜವನೆಲ್ಲರಂ ಬಿಡದೆ ಕೈ
ಯಂ ನೀಡಿ ಗೆಂಟೆಂದೆಯುಂ ॥೨೨॥

ಎಂದು ಆ ಚಿತ್ರಗ್ರೀವದ ಪಾಶವಂ ಛೇದಿಸಲುಜ್ಜುಗಿಸಿತು:—

ಚಿತ್ರಗ್ರೀವವು ಅದಂ ಕುರಿತು—ಅಯ್ಯಾ ! ಇಂತು ಮಾಡ ಬೇಡ. ಮೊದಲು ನನ್ನ ಭೃತ್ಯರ ಪಾಶವಂ ಛೇದಿಸಿ ಆ ಮೇಲೆ ನನ್ನ ಪಾಶವಂ ಛೇದಿಸು—ಎನಲು, ಅದಕ್ಕೆ ಹಿರಣ್ಯಕವು ಕೋಪಿಸಿ ಕೊಂಡು—ಎಲೆ ! ನೀನಾಡಿದುದು ತಕ್ಕುದಲ್ಲ. ಏಕೆಂದರೆ, ಒಡೆಯನ ಅನಂತರ ಸೇವಕರು—ಎಂದಿತು.

ಅದಕ್ಕೆ ಅದು—ಅಯ್ಯಾ ! ಇಂತು ನುಡಿಯಬೇಡ. ಅಲ್ಪರಿವರಿಲ್ಲರೂ ನನ್ನ ಆಶ್ರಯದಿಂದ ಜೀವಿಸುವವರು. ಮತ್ತು ತಮ್ಮ ಕುಟುಂಬವನುಳಿದು ಬಂದಿರುವರು. ಅದೆಂತು ಇವರಿಗೆ ಇಷ್ಟು ಮಾತ್ರವಾದರೂ ಸನ್ಮಾನವಂ ಮಾಡದಿರುವುದು ? ಈ ವಿಷಯ ದಲ್ಲಿ ನೀತಿವಚನವುಂಟು:—

ಕಂ॥ ಜನಪತಿಯಾವಂ ನಿಚ್ಚವು ।
ಮನುವಿಂ ಸೇವಕರನೆಯ್ದೆ ಸನ್ಮಾನಿಸುವಂ ॥
ಧನವಿತರಣವಿಲ್ಲದೊಡಂ ।
ಮನವೊಲ್ದವರವನ ಕಂಡು ತೊಱೆಯರದೇಂದುಂ ॥೨೩॥

ಮತ್ತು:—

ವಿಭವಕೆ ಮೂಲಂ ನಂಬುಗೆ ।
ಯಿಭವುಂ ಯೂಥಪತಿಯೆನಿಪುದಾನಂಬುಗೆಯಿಂ ।
ಇಭರಿಪು ಮೃಗಜಾಲಕೆ ತಾಂ ।
ಪ್ರಭುವೆನಿಸಿರೆಯುಂ ಮಿಗಂಗಳೆರವದಱಿಂದೆಯೊಳ್ ।

ಅಲ್ಲದೆ ಈಗ ಬಂದುವೇಳೆ ನನ್ನ ಪಾಶವಂ ಭೇದಿಸುವ ನಿನ್ನ ಹಲ್ಲುಗಳು ಭಗ್ನವಾಗುವುವು. ಅಥವಾ ದುರಾತ್ಮನಾದ ಬೇಡನು ಬಳಿಗೈದುವನು. ಅದರಿಂದ ದಿಟವಾಗಿ ನನಗೆ ನರಕಪ್ರಾಪ್ತಿಯೇ ಆಗುವುದು. ಈ ವಿಷಯದಲ್ಲಿ ನೀತಿವಚನವುಂಟು:—

ಕಂ|| ದಂದುಗದಿಂದಿರೆ ಸುಚರಿತ |
ರೆಂದೆನಿಸುವ ತನ್ನ ಭೃತ್ಯರಾವಂ ನೃಪನಾ ||
ನಂದಿಸುವಂ ನರಕಮನವ |
ನೊಂದದಿರಂ ಪರದೊಳಿಹದೆ ಕೋಟಲೆಗೊಳ್ವಂ ||೨೫||

ಅದಂ ಕೇಳಿ ಸಂತೋಷಿಸಿದ ಹಿರಣ್ಯಕವು ಇಂತೆಂದಿತು:— ಅಯ್ಯಾ! ರಾಜಧರ್ಮವಂ ನಾನುಬಲ್ಲೆ. ಆದರೆ ಸುಮ್ಮನೆ ನಿನ್ನಂ ಪರೀಕ್ಷಿಸಿದೆ. ಮೊದಲು ಎಲ್ಲರಪಾಶವನ್ನೂ ಭೇದಿಸುವೆನು. ಇಂತು ಮಾಡುವುದರಿಂದ ನೀನು ಅನೇಕಕಪೋತಪರಿವಾರವುಳ್ಳವನಾಗುವೆ. ನೀತಿವಚನವುಂಟು:—

ಕಂ|| ಆವಂಗಿಕ್ಕುರ್ಗಂ ತೊಟ್ಟಿರೊ |
ಳಾವಗಮೋರಂತೆ ಕುಡುವುದುಂ ಕನಿಕರಮುಂ ||
ಭಾವಿಸೆ ಮೂಱುಂಜಗಮುಮ |
ನೋವಲ್ ತಾಂನೆಱೆವನಾಥರಿತ್ರೀಪಾಲಂ ||೨೬||

ಎಂದು ಎಲ್ಲರ ಪಾಶವನ್ನೂ ಭೇದಿಸಿ ಚಿತ್ರಗ್ರೀವವಂ ಕುರಿತು-ಸಖನೆ! ಈಗ ನಿನ್ನ ಬೀಡಿಗೆ ಹೊರಡು. ಮತ್ತೆ ವ್ಯಸನವೇನಾದರೂ ಉಂಟಾದರೆ ಬರಬೇಕು-ಎಂದು ನುಡಿದು ಅವುಗಳಂ ಕಳುಹಿ ತಿರಿಗಿ ದುರ್ಗವಂ ಪ್ರವೇಶಿಸಿತು.

ಚಿತ್ರಗ್ರೀವವೂ ಪರಿವಾರಸಹಿತವಾಗಿ ತನ್ನ ಬೀಡಿಗೆ ಹೋಯಿತು. ಇದು ಯುಕ್ತವೆನಿಸುವುದು:—

ಕಂ|| ಗಣಿಯಿಸಲರಿದೆನಿಪರ್ಥಂ |
ಗಳುಮಂ ಕೆಳೆಯರ್ಕ್ಕಳುಳ್ಳವಂ ಸಾಧಿಸುವಂ |
ಇಳೆಯುಲ್ಲದರಿಂ ಪುರುಷಂ |
ಗಣಿಯಿಸವೇಳ್ಕುಂ ಸಮಾನರಂ ಕೆಳೆಯರಂನೇ ||೨೭

ಲಘುಪತನಕವು ಚಿತ್ರಗ್ರೀವಕ್ಕೆ ಆದ ಬಂಧದ ಬಿಡುಗಡೆಯಂ ಕಂಡು ಆಶ್ಚರ್ಯಗೊಂಡು ಇಂತು ಚಿಂತಿಸಿತು:—

ಈ ಹಿರಣ್ಯಕನ ಬುದ್ಧಿ, ಶಕ್ತಿ, ದುರ್ಗಸಾಮಗ್ರಿ ಆಶ್ಚರ್ಯಕರವು. ಅದರಿಂದ ಪಕ್ಷಿಗಳು ಬಂಧದಿಂದ ಬಿಡುಗಡೆಹೊಂದಲು ಮಾಡಬೇಕಾದುದು ಈರೀತಿಯೇ. ನಾನು ಯಾವನನ್ನೂ ನಂಬುವನಲ್ಲ. ಮತ್ತು ಚಂಚಲಸ್ವಭಾವನು; ಆದರೂ ಈತನೊಡನೆ ಸ್ನೇಹವಂ ಬಳೆಯಿಸುವೆನು. ಏಕೆಂದರೆ:—

ಕಂ|| ಪರಿಪೂರ್ಣರಾದೊಡಂ ತಾ |
ವಱಿತರ್ ಕೆಳೆಯರನೊಲ್ದುಗಣಿಯಿಸವೇಳ್ಕುಂ |
ಪರಿಪೂರ್ಣತೆವಡೆದಿರ್ದುಂ |
ಶರನಿಧಿಯಿಚ್ಛೈಸುವನಲ್ತೆ ಚಂದ್ರೋದಯಮಂ ||೨೮

ಎಂದು ಇಚ್ಛೈಸಿ ಮರದಿಂದಿಳಿದು ಬಿಲದಬಾಗಿಲಿಗೆ ಬಂದು ಎಲೆ ಹಿರಣ್ಯಕಾ! ಬಾ-ಎಂದು ಚಿತ್ರಗ್ರೀವ ಕೂಗಿದಂತೆ ಕೂಗಿ ಕರೆಯಿತು.

ಹಿರಣ್ಯಕವು ಆಶಬ್ದವಂ ಕೇಳಿ ನನ್ನಂ ಕರೆವುದರಿಂದ ಕಪೋತವಾವುದಾದರೂ ಬಿಡುಗಡೆಹೊಂದದೆ ಸೆರೆಯಲ್ಲಿ ಉಳಿದಿರಬಹುದೋ?-ಎಂದು ಚಿಂತಿಸಿ, ಅಯ್ಯಾ! ನೀನುಯಾರು?-ಎಂದಿತು.

ಅದಕ್ಕೆ ಲಘುಪತನಕವು-ನಾನು "ಲಘುಪತನಕ" ಎಂಬ ಕಾಗೆ-ಎನಲು, ಆಮಾತಂ ಕೇಳಿ ಹಿರಣ್ಯಕವು ವಿಶೇಷದಿಂ ಬಳಗೇ ಅಡಗಿಕೊಂಡು ಅದಂ ಕುರಿತು-ಎಲವೋ! ನೀನು ಈಸ್ಥಳವಂ ಬಿಟ್ಟು ಬೇಗ ಹೊರಟುಹೋಗು-ಎಂದಿತು.

ಕಾಗೆಯೆಂದಿತು:—ನಾನು ನಿನ್ನಬಳಿಯಲ್ಲಿ ದೊಡ್ಡ ಕೆಲಸಕ್ಕೋಸ್ಕರ ಬಂದಿರುವೆನು. ಆದಕಾರಣ ನನಗೆ ದರ್ಶನವಂ ಕುಡುವುದಿಲ್ಲವೇ?

ಹಿರಣ್ಯಕವೆಂದಿತು:—ನಿನ್ನೊಡನೆ ಸೇರುವುದರಿಂದ ನನಗೆ ಆಗಬೇಕಾದ ಪ್ರಯೋಜನವಾವುದೂ ಇಲ್ಲ.

ಕಾಗೆಯೆಂದಿತು:—ಅಯ್ಯಾ! ನಿನ್ನ ಬಳಿಯಲ್ಲಿ ಚಿತ್ರಗ್ರೀವನು ಬಂಧದಿಂ ಬಿಡುಗಡೆಹೊಂದಿದುದಂ ಕಂಡೆ. ಅದರಿಂದ ನನಗೆ ಮಹತ್ತಾದ ಪ್ರೀತಿಯುಂಟಾಯಿತು. ಆದಕಾರಣ ಬಂದುವೇಳೆ ನನಗೇನಾದರೂ ಬಂಧನವುಂಟಾದರೆ ನಿನ್ನಬಳಿಯಲ್ಲಿ ಬಿಡುಗಡೆಯಾಗುವುದು; ಅದರಿಂದ ಸ್ನೇಹವಂ ಮಾಡು.

ಹಿರಣ್ಯಕವೆಂದಿತು:—ಅಯ್ಯಾ! ನೀನು ತಿನ್ನುವನು. ನಾನು ನಿನ್ನಿಂದ ತಿನ್ನಲ್ಪಡುವನು. ಆದಕಾರಣ ನಿನ್ನೊಡನೆ ನನಗೆ ಸ್ನೇಹವಾವುದು? ಹೊರಟುಹೋಗು. ವಿರೋಧವಿದ್ದಕಡೆ ಸ್ನೇಹವೆಂತು ಸಂಘಟಿಸುವುದು? ಈ ವಿಷಯವಿಂತು ಹೇಳಿದೆ:—

ಕಂ॥ ಅವನಿಯೊಳಾರಿರ್ವ್ವರ್ ವೈ।
ಭವದೊಳ್ ಸಮರಂತು ಕುಲದೆ ಸಮರಾರಿರ್ವ್ವರ್॥
ಅವರ್ಗೆಯೆ ಕೆಳೆ ಮೇಣ್ ಕೊಳ್ಕುಡೆ।
ಸವನಿಸಲೊಪ್ಪುವುದು ಕಿಱಿಯಪಿರಿಯುಗ್ಗಳ್ಳಿಂ॥೨೯॥

ಅಂತಲ್ಲದೆ:—

ಕಂ॥ ಪಿರಿಯನನೋ ಕಿಱಿಯನನೋ ।
ಸರಿತನಗೆಂದೆನಿಸದಿರ್ಪನಂ ನರನಾವಂ ॥
ಅಱಿಯದೆ ತಾಂ ಸ್ನೇಹಿಸುವಂ ।
ಧರೆಯೊಳವಂ ನಾಡೆ ನಗೆಗೆ ಪಕ್ಕಾಗಿರ್ಪಂ ॥೩೦॥

ಆದಕಾರಣ ನೀನು ಹೊರಟುಹೋಗು.

ಕಾಗೆಯೆಂದಿತು:—ಎಲೆ ಹಿರಣ್ಯಕ! ಇದೊ ನಾನು ನಿನ್ನ ದುರ್ಗದ ಬಾಗಿಲಲ್ಲಿ ಕುಳಿತುಕೊಂಡಿರುವೆನು. ನೀನು ಸ್ನೇಹವಂ ಮಾಡದಿದ್ದರೆ ನಿನ್ನ ಇದುರಿಗೆ ಪ್ರಾಣಂಗಳಂ ಬಿಡುವೆನು. ಅಥವಾ ಪ್ರಾಯೋಪವೇಶವನಾದರೂ ಮಾಡುವೆನು.

ಹಿರಣ್ಯಕವೆಂದಿತು:—ವೈರಿಯಾದ ನಿನ್ನೊಡನೆ ಎಂತು ಸ್ನೇಹವಂ ಮಾಡಲಿ ? ಈ ವಿಷಯದಲ್ಲಿ ನೀತಿವಚನವುಂಟು:—

ಕಂ॥ ಮಚ್ಚರಿಪ ವೈರಿ ತನ್ನೊಳ್ ।
ಬೆಚ್ಚೊಡ ಮವನೊಡನೆ ಸಂಧಿಗೈವುದಯುಕ್ತಂ ।
ಬೆಚ್ಚನೆ ಕಾಸಿದ ನೀರುಂ ।
ಚೆಚ್ಚರದಿಂ ಬೆಂಕೆಯಂ ನಿವಾರಿಪ್ಪುದಲ್ತೇ ॥೩೧॥

ಕಾಗೆಯೆಂದಿತು:—ಅಯ್ಯಾ ! ನಿನ್ನಂ ನೋಡಿಯೂ ಇಲ್ಲ. ವೈರವೇಕೆ ? ಸ್ನೇಹಮಾಡಬಾರದೆಂದು ಅದೆಂತು ಹೇಳುವೆ ?

ಹಿರಣ್ಯಕವೆಂದಿತು:—ವೈರವೆಂಬುದು ಎರಡುತೆರ; ಸಹಜವೆಂದು ಕೃತ್ರಿಮವೆಂದು. ನೀನು ನಮಗೆ ಸಹಜವೈರಿ. ಈ ವಿಷಯದಲ್ಲಿ ನೀತಿವಚನವುಂಟು:—

ಕಂ॥ ಎಸಗಿದ ಕೃತ್ರಿಮವೈರವ ।
ದಸವಸದಿಂ ನಶಿಪುದಂತು ಕೃತ್ರಿಮಗುಣದಿಂ ॥

ಅಸುದೋರುವುದಱಿಂದಲ್ಲದೆ ।
ನಶಿಸದು ಗಡ ಸಹಜವೈರಂ ಜಗದೊಳ್ ॥೩೦॥

ಕಾಗೆಯೆಂದಿತು:—ಅಯ್ಯಾ ! ಎರಡುತೆರವಾದ ವೈರದ ಲಕ್ಷಣವಂ ಕೇಳಬೇಕೆಂದಿರುವೆನು.

ಹಿರಣ್ಯಕವೆಂದಿತು:—ಎಲೆ! ಕೇಳು. ಕಾರಣದಿಂದ ಉಂಟಾದುದು ಕೃತ್ರಿಮ. ಅದು ಉಚಿತವಾದ ಉಪಕಾರಗಳಿಂದ ಹೋಗುವುದು. ಸಹಜವಾದುದಾದರೋ ಯಾವರೀತಿಯಿಂದಲೂ ಹೋಗುವುದಿಲ್ಲ. ಅದು-ಮುಂಗಸಿ ಹಾವುಗಳಿಗೂ, ಗೋವ್ಯಾಘ್ರಂಗಳಿಗೂ, ನೀರುಬೆಂಕಿಗಳಿಗೂ, ದೇವದೈತ್ಯರಿಗೂ, ನಾಯಿಬೆಕ್ಕುಗಳಿಗೂ, ಶ್ರೀಮಂತರಿಗೂ ಬಡವರಿಗೂ, ಸವತಿಯರಿಗೂ, ಸಿಂಹಗಜಂಗಳಿಗೂ, ಬೇಡರಿಗೂ ಜಿಂಕೆಗಳಿಗೂ, ಶ್ರೋತ್ರಿಯರಿಗೂ ಕ್ರಿಯಾಭ್ರಷ್ಟರಿಗೂ, ಮೂರ್ಖರಿಗೂ ಪಂಡಿತರಿಗೂ, ಹದಿಬದೆಯರಿಗೂ ಸ್ವೈರಿಣಿಯರಿಗೂ, ಸಜ್ಜನದುರ್ಜನರಿಗೂ, ಸಹಜವಾದುದು. ಇವುಗಳಲ್ಲಿ ಬಂದು ಮತ್ತೊಂದಂ ಕೊಲ್ಲದಿದ್ದರೂ ಪ್ರಾಣಸಂಕಟವನುಂಟುಮಾಡುವುವು.

ಕಾಗೆ ಯೆಂದಿತು:—

ಅಯ್ಯಾ ! ಇಂತಹ ಪಗೆತನಕ್ಕೆ ಕಾರಣವಿಲ್ಲ. ಕೇಳು ನನ್ನ ಮಾತಂ:—

ಕಂ॥ ಕಾರಣದಿಂ ಕೆಳೆಗೊಳ್ವಂ ।
ಕಾರಣದಿಂ ಪಗೆಯುನಾಂಪನಂತದಱಿಂದಂ ।
ಧಾರಿಣಿಯೊಳ್ ಕೆಳೆಯನೆ ವಿ ।
ಸ್ತಾರಿಪುದನುಗೊಳಿಸಬಾರದೆಂದುಂ ಪಗೆಯಂ ॥೩೩॥

ಅದರಿಂದ ಮಿತ್ರಧರ್ಮಾರ್ಥವಾಗಿ ನನ್ನೊಡನೆ ಸ್ನೇಹವಂ ಮಾಡು.

ಹಿರಣ್ಯಕವೆಂದಿತು:—ಅಯ್ಯಾ! ಸಾರಭೂತವಾದ ನೀತಿವಚನವಂ ಕೇಳು.—

ಕಂ॥ ಖಲನೆಂದದೊರ್ಮೆ ತಿಳಿದುಂ ।
ನಲವಿಂ ಪ್ರಿಯನೆನುತೆ ಕೂಡಲಾವಂ ಬಯಸಂ ॥
ದಲವಂ ಮಿೞ್ತುವ ಪಡೆವಂ ।
ನೆಲದೊಳ್ ಬಸಿಱೊಂದಿದಶ್ವತರಿಯವೊಲೆಂತುಂ ॥

ಅಥವಾ "ನಾನು ಗುಣವಂತ, ನನ್ನಂ ಯಾವನೂ ವೈರದಿಂದ ಬಾಧಿಸುವುದಿಲ್ಲ" ಎಂದು ತಿಳಿದಿರುವುದೂ ಸರಿಯಲ್ಲ. ಏಕೆಂದರೆ:—

ವೃ॥ ಅರರೇ ವ್ಯಾಕೃತಿಗೈದ ಪಾಣಿನಿಯು ಕೊಂದಿಕ್ಕಿತ್ತು ಸಿಂಗಂ ಗಜಂ । ವರಮೀಮಾಂಸೆಯು ಗೈದ ಜೈಮಿನಿಯು ನೀೞ್ದಿಟ್ಟತ್ತು ಮತ್ತಂ ನೆಗೞ್ ॥ ಇಱಿದತ್ತಕ್ಕಟ ಚಂದಮಂ ನೆಗೞ್ದನಂ ತತ್ಪಿಂಗಲಾಚಾರ್ಯನಂ । ಪಿರಿದಜ್ಞಾನದೆ ಕೂಡಿಯುವ್ವಳಪ ತಿರ್ಯಕ್ಕೇಂ ಗುಣಂಬಲ್ಲದೇ ॥೩೫॥

ಕಾಗೆಯೆಂದಿತು:—ಇದುಂಟು. ಆದರೂ ಕೇಳು:—

ಕಂ॥ ನೆಗೞ್ವುಪಕಾರದೆ ಲೋಕಂ ।
ಮೃಗಪಕ್ಷಿಗಳುಂ ನಿಮಿತ್ತದಿಂದಂ ಮೂರ್ಖರ್ ॥
ಬೆಗಡಿಂ ಮತ್ತಂ ಲೋಭದೆ ।
ಬಗೆವೊಡೆ ದರ್ಶನದೆ ಸಂತರುಂ ಕೆಳೆಗೊಳ್ಗುಂ ॥೩೬॥

ದುರುಳಂ ಮಣ್ಣಡಿಗೆಯವೋ ।
ಲರರೇ ಸುಖಭೇದ್ಯನೊಂದುಗೊಳಿಸಲಸಾಧ್ಯಂ ॥
ವರಸುಜನಂ ಪೊಂಗೊಡದಂ ।
ತಿರೆ ದುರ್ಭೇದಂ ದಲೊಂದಿಸಲ್ ಸುಖಸಾಧ್ಯಂ ॥೩೭॥

ತರದಿಂ ಕರ್ಬಿನ ತುದಿಯಿಂ ।
ನೆರೆದಿರ್ಕ್ಕುಗಂ ಗಿಣ್ಣೆಗಿಣ್ಣದೆಂತು ರಸಂ ಸಂ ॥
ತರ ಕೆಳೆಯುಂ ತಾನಂತುಟು ।
ಪರಿಕಿಸೆ ದುರ್ಜನರ ಕೆಳೆ ವಲಂ ವಿಪರೀತಂ ॥೩೯॥

ಅಂತಲ್ಲದೆ:—

ದುರುಳರ ಮೇಳ್ ಸುಜನರ ಕೆಳೆ ।
ತರದಿಂದಂ ಪಗಲ ಮುಂದುಪಿಂದಣ ನೆೞಲಂ ।
ತಿರೆ ಪಿರಿದು ಮೊದಲ್ ಬರುತುಂ ।
ಕಿಱಿದು ಮೊದಲ್ ಕಿಱಿದು ಬರುತೆ ಪಿರಿದೆನಿಸಿರ್ಕ್ಕುಗಂ ॥

ಆದಕಾರಣ ನಾನು ಸಾಧು. ಮತ್ತು ಆಣೆಯಿಟ್ಟುಕೊಂಡು ಹೇಳುವೆನು. ನಿನಗೆ ಭಯವನುಂಟುಮಾಡುವನಲ್ಲ.

ಹಿರಣ್ಯಕವೆಂದಿತು:—

ನೀನು ಆಣೆಯಿಟ್ಟುಕೊಂಡ ಮಾತ್ರಕ್ಕೆ ನನಗೆ ನಂಬುಗೆಯಿಲ್ಲ. ಈ ವಿಷಯದಲ್ಲಿ ನೀತಿವಚನವುಂಟು:—

ಕಂ॥ ತೆಗೆ ಶಪಥಂಗೆಯ್ಯುತೆ ಸಂ ।
ಧಿಗೆ ಸಂದೊಡ ಮಹಹ ನಂಬಲಾಗದು ಪಗೆಯಂ ॥
ಮಿಗೆ ಶಪಥಂಗೈದಿಂದ್ರಂ ।
ನೆಗೞ್ದಂ ವೃತ್ರವಧೆಯನೆಂಗುಂ ಪಿರಿಯರ್ ॥೪೦॥

ಬಗೆವೊಡೆ ನಂಬುಗೆಯಿಲ್ಲದೆ ।
ಪಗೆ ದೇವತೆಗಳ್ಗಮಹಹ ಬಸನೆನಿಸಂ ನಂ ॥
ಬುಗೆಯಂ ಬಗೆಗೊಳಿಸುತೆ ಸ
ಗ್ಗಗರೊಡೆಯಂ ದಿತಿಯ ಗರ್ಭಮಂ ಭೇದಿಸಿದಂ ॥೪೧॥

ಮತ್ತಂ—

ಮಿಗೆ ತನಗೇಳ್ಗೆಯುಮಪಾಯಮುಂ |
ಸೊಗಮುಂ ಸಮನಿಸುಗೆನುತ್ತೆ ಬಯಸುವ ಪುರುಷಂ ||
ಜಗದೊಳ್ ನಂಬಲೆಬಾರದು |
ನೆಗೞ್ದ ಬೃಹಸ್ಪತಿಯೆನಿಸುತಾನೆಂದೆನಿಸಿದ್ದೊಡಂ || ೪೨ ||

ಅಂತಲ್ಲದೆ:—

ನೀಡುಂ ಕೀಳಾದೆನಿಸುವೊಡಂ |
ನೋಡಲ್ ರಂಧ್ರಂ ವಿಪಕ್ಷನೊಳ್ವೊಕ್ಕನುಪಿಂ |
ನಾಡೆ ಬೞಿಕ್ಕಂ ನಾಶಿಪ
ನೋಡಮನೊಳ್ವೊಕ್ಕು ನೀರ್ವೊಗಲ್ ನಾಶಿಪವೋಲ್ ||

ನಂಬದನ ನಂಬಲಾಗದು |
ನಂಬಿದನುಮನಂತು ನಂಬಲಾಗದು ಧರೆಯೊಳ್
ನಂಬುಗೆಯಿಂದೊದವಿದ ಭಯ |
ಮೆಂಬುದು ಭೇದಿಸುವುದಲ್ತೆ ಮೂಲಂಗಳುಮಂ |

ಅದಟಿಗನಲ್ಲದೊಡಂ ನಂ |
ಬದವಂ ಬಲಶಾಲಿಗಳ್ಗೆ ವಧ್ಯನೆನಿಪ್ಪಂ
ಅದುಟುಳ್ಳರಾದೊಡಂ ನಂ |
ಬಿದವರ್ ದುರ್ಬಲರಿನೊಡನೆ ವಧಿಸಲ್ಪಡುಗುಂ || ೪೩ ||

ಕೃತಿ ವಿಷ್ಣುಗುಪ್ತಮತ ಮಭಿ |
ಮತವೆನಿಕುಂ ಕೆಳೆಯರೊದವು ಶುಕ್ರಂಗೆ ಬೃಹ |
ಸ್ಪತಿಗಂತು ನಂಬದಿರ್ಪುದು |
ಮತ ವಿಂತುಟು ನೀತಿಸಂಧಿ ಮೂದೇವನಕ್ಕಂ || ೪೪ ||

ಅಂತಲ್ಲದೆ:—

ಪಿರಿದೈಸಿರಿ ಸಮನಿಸುವಂ
ತಿರೆಯುಂ ಪಗೆವರುಮನೊಲ್ಲದಪ್ಪೆಂಡಿರುಮಂ ।
ತಿರೆಯೊಳದಾವಂ ಒಗೆಯದೆ ।
ನೆಱೆ ನಂಬುವನವನ ಬಾಳ್ಕೆಗದೆ ಕಡೆಯಿಸಿಕುಂ ॥ ೪೭ ॥

ಅದನಾಲಿಸಿ ಲಘುಪತನಕವೂ ಉತ್ತರವಂ ನುಡಿಯದೆ ಚಿಂತಿಸಿತು:—ನೀತಿವಿಷಯದಲ್ಲಿ ಇವನ ಬುದ್ಧಿಯ ಪ್ರೌಢತೆ ಆಶ್ಚರ್ಯಕರವು. ಅಥವಾ ಅದರಿಂದಲೇ ನನಗೆ ಇವನಮೇಲೆ ಸ್ನೇಹಪಕ್ಷಪಾತವುಂಟಾಗಿರುವುದು.

ಅದಂ ಕುರಿತು—ಅಯ್ಯಾ ಹಿರಣ್ಯಕ !

ಕಂ॥ ಜ್ಞಾನಿಗಳೊರೆವಸ್ತ್ರಾಪ್ತಪ ।
ದೀನಂ ಸಜ್ಜನರ ಸಖ್ಯಮೆಂದವಱಿಂದಂ ।
ನೀನೆನ್ನಯ ಸಖನಾದೈ ।
ನಾನೀಗಳ್ ನುಡಿದ ನುಡಿಯನದನಾಲಿಸು ನೀಂ ॥ ೪೮ ॥

ನಿನಗೆ ನನ್ನಲ್ಲಿ ನಂಬುಗೆಯುಂಟಾಗದಿದ್ದರೆ ನೀನು ದುರ್ಗದಲ್ಲಿಯೇ ಇದ್ದುಕೊಂಡಾದರೂ ನನ್ನೊಡನೆ ನಿತ್ಯವೂ ಸಲ್ಲಾಪಗೈಯುತ್ತ ಗುಣದೋಷಸುಭಾಷಿತಗೋಷ್ಠೀಕಥೆಗಳಂ ಬಳೆಯಿಸುತ್ತಿರು.

ಅದಂ ಕೇಳಿ ಹಿರಣ್ಯಕವೂ ಆಲೋಚಿಸಿತು.—ಈ ಲಘುಪತನಕನು ಮಾತಿನಲ್ಲಿ ಪ್ರೌಢಿಯುಳ್ಳವನಾಗಿ ಕಾಣುವನು. ಸತ್ಯವಚನನಾಗಿಯೂ ತೋರುವನು. ಅದರಿಂದ ಇವನೊಡನೆ ಸ್ನೇಹಮಾಡುವುದು ಯುಕ್ತವು. ಆದರೆ ಇವನು ಯಾವಾಗಲೂ ನನ್ನ ದುರ್ಗದ ಒಳಗೆ ಕಾಲಿಡಕೂಡದು.

ಅದಂ ಕೇಳಿ ಕಾಗೆಯೆಂದಿತು:— ಪ್ರಿಯನೆ! ನೀನಾಡಿದಂತೆಯೆ ಆಗಲಿ.

ಅಂದಿನಿಂದ ಅವುಗಳೆರಡೂ ಸುಭಾಷಿತಗೋಷ್ಠೀಸುಖವನನು ಭವಿಸುತ್ತ ಇದ್ದುವು. ಒಂದಕ್ಕೊಂದು ಉಪಕಾರವಮಾಡುತ್ತ ಕಾಲ ವಂ ಕಳೆಯುತಿದ್ದುವು.

ಲಘುಪತನಕವೂ ಮಾಂಸಖಂಡಗಳನ್ನೂ ಪವಿತ್ರವಾದ ಬಲಿ ಶೇಷಗಳನ್ನೂ ಇನ್ನೂ ಇತರವಾದುವುಗಳನ್ನೂ ಪಕ್ವಾನ್ನವಿಶೇಷಂ ಗಳನ್ನೂ ಪ್ರೀತಿಯಿಂದ ಹಿರಣ್ಯಕವು ತಿನಲೆಂದು ತಂದುಕುಡು ತಿದ್ದಿತು. ಹಿರಣ್ಯಕವೂ ಅಕ್ಕಿಗಳನ್ನೂ ಇತರಗಳಾದ ಭಕ್ಷ್ಯ ವಿಶೇಷಂಗಳನ್ನೂ ಲಘುಪತನಕ್ಕೋಸ್ಕರ ರಾತ್ರಿಯಲ್ಲಿ ತಂದು ಆಗ ಬಂದ ಅದಕ್ಕೋಸ್ಕರ ಕುಡುತಿದ್ದಿತು. ಅಥವಾ ಅವೆರಡ ಕ್ಕೂ ಇದು ಯುಕ್ತವೆನಿಸುವುದು. ಈವಿಷಯದಲ್ಲಿ ನೀತಿವಚನ ವುಂಟು.

ಕಂ|| ಕುಡುವುದು ಕೊಳ್ವುದು ಮತ್ತಂ ।
ನುಡಿವುದು ಮಾಂಜದೆ ರಹಸ್ಯಮಂ ಕೇಳ್ವುದು ಮೇಣ್||
ಬಡನುಣ್ಬುದುಮುಣಲಿಡುವುದು ।
ಪ್ರೊಢವಿಯೊಳಿಂತೊಲ್ಮೆಯೆಂಬುದಱುದೊನೆನಿಕುಂ ||೪೯||
ನಿಯತಂ ನರನಾವನುಮಾ ।
ರಯೆ ತಾನುಪಕೃತಿಯ ನಾನದೊಲ್ಲನದೆಂತುಂ ||
ಪ್ರಿಯುವೆನಿಪ್ಪುದನೀಯುಲೊಡಂ ।
ಬಯಕೆಗಳಂ ಸಲಿಪರಲ್ತೆ ದೇವರುಮೊಲವಿಂ ||೫೦||
ಎನ್ನೆವರಂ ಕುಡುವನೊ ತಾ।
ನನ್ನೆವರಂ ಬಿಡದೆ ತನ್ನೊಳೊಲ್ವುದು ಲೋಕಂ ||

ತನ್ನಯ ತಾಯುಂ ಕೞು ತಾಂ ।
ಕೆನ್ನಂ ತೊಱೆದಪುದು ಕಂಡು ಪಾಲಿಲ್ಲದುದಂ ॥೫೧॥

ಕುಡುವುದಱ ಮೈಮೆಯಂ ನೋ-
ಡೊಡನೆಯೆ ನಂಬುಗೆಯನುಂಟುಮಾಡುವುವನುಮಾ
ಪೊಡವಿಯೊಳದಱನುಭಾವದೆ ।
ಕಡುನೇಹಿಗನೆನಿಪನಲ್ತೆ ಚಣದೊಳ್ ಪಗೆಯುಂ ॥೫೨॥

ಅಱಿವಿಲ್ಲದ ಪಶುವಿಂಗಂ ।
ಪೆಱ*ರ್ಗೀವುದು ಪಸುಳೆಯತ್ತಣಿಂ ಪ್ರಿಯವೆಂಬೆಂ ।
ಕಱುವಿರೆಯುಮೆಲ್ಲಪಾಲಂ ।
ತೊರೆದಿತ್ತಪುದೊಲವಿನೆಮ್ಮೆ ಕಱೆವ ಖಳಂಗಂ ॥೫೩॥

ಬಹೂಕ್ತಿಯಿಂದೇನು ?

ಕಂ॥ ನೆಲೆಯೆನಿಸಿ ನಿರಂತರವಾ ।
ದೊಲವಿಂಗುಗುರಡಗುಗಳವ್ರೊಲೋರಂತೆ ಪಗಿ ॥
ಲ್ತಿಲಿಯುಂ ಕಾಗೆಯುಮೊಪ್ಪುತೆ
ಸಲೆ ಕೃತ್ರಿಮವೆನಿಪ ನೇಹಮಂ ಪಡೆದುವು ತಾಂ ॥೫೪॥

ಇಂತು ಆಯಿಲಿ ಆ ಕಾಗೆಯ ಉಪಕಾರದಿಂದ ಉಲ್ಲಾಸಗೊಳಿಸಲ್ಪಟ್ಟು ಅಂತು ನಂಬಿದ್ದಿತು. ಎಂತೆಂದರೆ:—ಆ ಕಾಗೆಯ ರೆಕ್ಕೆಯ ನಡುವೆ ಹುದುಗಿಕೊಂಡು ಅದರೊಡನೆ ಯಾವಾಗಲೂ ಸರಸಸಲ್ಲಾಪಂಗಳಂ ಮಾಡುತಿದ್ದಿತು.

ಬಳಿಕ ಮತ್ತೊಂದುದಿವಸ ಕಾಗೆ ಕಣ್ಣೀರುತುಂಬಿ ಬಳಿಗೆ ಬಂದು ಬಿಕ್ಕಿಬಿಕ್ಕಿ ಅಳುತ್ತ ಅದಂ ಕುರಿತು ಇಂತೆಂದಿತು:-

ಪ್ರಿಯಹಿರಣ್ಯಕ! ಈಗ ನನಗೆ ಈ ದೇಶದ ಮೇಲೆ ವಿರಕ್ತಿಯುಂಟಾಯಿತು. ಅದರಿಂದ ಮತ್ತೊಂದೆಡೆಗೆ ತೆರಳುವೆನು.

ಹಿರಣ್ಯಕವಿಂತೆಂದಿತು:—ಪ್ರಿಯನೆ! ನಿನಗೆ ವಿರಕ್ತಿಯುಂಟಾಗಲು ನಿಮಿತ್ತವೇನು?

ಅದು ನುಡಿಯಿತು:—ಪ್ರಿಯ! ಕೇಳು. ಈ ದೇಶದಲ್ಲಿ ದೊಡ್ಡದಾದ ಅನಾವೃಷ್ಟಿಯಿಂದ ಬರವುಂಟಾಗಿರುವುದು. ಬರದಿಂದ ಜನವು ಹಸಿವುಗೊಂಡು ಸಂಕಟಪಡುತಿರುವುದು. ಯಾವನೂ ಸ್ವಲ್ಪಬಲಿಯನ್ನೂ ಹಾಕುವುದಿಲ್ಲ. ಅಲ್ಲದೆ ಮನೆಮನೆಯಲ್ಲಿಯೂ ಹಸಿವುಗೊಂಡ ಜನಗಳು ಹಕ್ಕಿಗಳಂ ಸೆರೆಹಿಡಿಯಲು ಪಾಶಂಗಳಂ ಬಲಪಡಿಸಿರುವರು. ನಾನು ಪಾಶಕ್ಕೆ ಸಿಕ್ಕಿ ಆಯುಸ್ಸು ಇನ್ನೂ ಇದ್ದುದರಿಂದ ಬದುಕಿದೆ. ಇದು ವಿರಕ್ತಿಗೆ ಕಾರಣ. ಅದರಿಂದ ನಾನು ದೇಶಾಂತರಕ್ಕೆ ಹೊರಟಿರುವೆನಲ್ಲಾ!-ಎಂದು ಕಣ್ಣೀರಿಡುತಿರುವೆನು.

ಹಿರಣ್ಯಕವೆಂದಿತು:—ಆದರೆ ನೀನು ಎಲ್ಲಿಗೆ ಹೊರಟಿರುವೆ?

ಅದೆಂದಿತು:—ದಕ್ಷಿಣದೇಶದಲ್ಲಿ ಕಟ್ಟಡವಿಯ ನಡುವೆ ಒಂದು ದೊಡ್ಡಸರೋವರವುಂಟು. ಅಲ್ಲಿ ನಿನಗಿಂತಲೂ ಪರಮಮಿತ್ರನೆನಿಸಿದ ಮಂಥರಕನೆಂಬ ಕೂರ್ಮನಿರುವನು. ಅವನು ನನಗೆ ಮತ್ಸ್ಯಮಾಂಸಖಂಡಂಗಳಂ ಕುಡುವನು. ಅವುಗಳಂ ತಿಂದುಕೊಂಡು ಅವನೊಡನೆ ಸರಸಸಲ್ಲಾಪಂಗಳಂ ಗೈಯುತ್ತ ಸುಖದಿಂದ ಕಾಲವಂ ಕಳೆವೆನು. ನಾನು ಇಲ್ಲಿ ಇದ್ದು ಹಕ್ಕಿಗಳಿಗೆ ಪಾಶಬಂಧನದಿಂದ ಉಂಟಾಗುವ ನಾಶವಂ ನೋಡಲೊಲ್ಲೆನು. ಈವಿಷಯದಲ್ಲಿ ಇಂತು ಹೇಳುವರು:—

ಕಂ|| ದೇಶವನಾವೃಷ್ಟಿಯೊಳಿರೆ
ನಾಶಕೆ ಪಕ್ಕಾಗೆ ಸಸ್ಯಜಾಲಮುಮೆಲ್ಲಂ ||
ದೇಶದ ಭಂಗಮುಮಂ ಕುಲ |
ನಾಶಮುಮಂ ನೋಡದರಯ್ಯ ಧನ್ಯರೆನಿಪ್ಪರ್ |೫೫||

ನೆಱೆಬಲ್ಲಿದರ್ಗಾವುದು ಬ |
ಳ್ವೊಡಕೆ ಮೇಣ್ ವ್ಯವಸಾಯಿಗಳ್ಗದಾವುದು ದೂರಂ ||
ಪರದೇಶವದಾವುದು ಬುಧ
ವರರ್ಗೆ ಸವಿನುಡಿಯ ನುಡಿವವರ್ಗರಿಯಾವಂ |೫೬||

ರಾಜಿಪ ವಿದ್ವತ್ತ್ವಮು ಮಾ |
ರಾಜತ್ವಮುಮೆಂದುಮೆಂತುಮೆಣೆವಾರವು ತಾಂ ||
ರಾಜಂ ತನ್ನಯ ನಾಡೊಳ್
ಪೂಜಿತನೆಂದೆನಿಪನೆಲ್ಲಿಯುಂ ವಿದ್ವಾಂಸಂ ||೫೭||

ಹಿರಣ್ಯಕವೆಂದಿತು:—ಇಂತಾದರೆ ನಾನೂ ನಿನ್ನೊಡನೆ ಬರುವೆನು. ನನಗೂ ಮಹತ್ತಾದ ದುಃಖವೊಂದಿರುವುದು.

ಕಾಗೆಯೆಂದಿತು:—ಅಯ್ಯಾ! ಅದೇನು ನಿನ್ನದುಃಖ? ಹೇಳು.

ಹಿರಣ್ಯಕವೆಂದಿತು:—ಅಯ್ಯಾ! ಈ ವಿಷಯದಲ್ಲಿ ಹೇಳತಕ್ಕದು ಬಹುವಾಗಿರುವುದು. ಅಲ್ಲಿಗೇ ಹೋಗಿ ಎಲ್ಲವನ್ನೂ ವಿಶದವಾಗಿ ಹೇಳುವೆನು.

ಕಾಗೆಯೆಂದಿತು:—ನಾನು ಆಕಾಶದಲ್ಲಿ ಹೋಗುವವನು. ಆದುದರಿಂದ ನೀನು ನನ್ನೊಡನೆ ಬರುವುದೆಂತು?

ಅದೆಂದಿತು:—ನನ್ನ ಪ್ರಾಣರಕ್ಷಣೆಯಂ ಮಾಡುವನಾದರೆ ನಿನ್ನ ಬೆನ್ನಮೇಲೆ ನನ್ನಂ ಏರಿಸಿಕೊಂಡು ಅಲ್ಲಿಗೆ ನೀನು ಕರೆದುಕೊಂಡು ಹೋಗುವೆ ಅದಲ್ಲದೆ ನನಗೆ ಬೇರೆ ಗತಿಯಿಲ್ಲ.

ಅದನಾಲಿಸಿ ಕಾಗೆ ಆನಂದಗೊಂಡು ನುಡಿಯಿತು:—ಇಂತಾ ದರೆ ನಾನು ಧನ್ಯನು. ಏಕೆಂದರೆ-ನಿನ್ನೊಡನೆಯೂ ನಾನು ಅಲ್ಲಿ ಕಾಲವಂ ಕಳೆಯಬಹುದು. ನಾನು ಸಂಪಾತವೊದಲಾದ ಹಾರ ತಕ್ಕ ಎಂಟುಗತಿಗಳಂ ಬಲ್ಲೆನು. ಅದರಿಂದ ನೀನು ನನ್ನಬೆನ್ನಮೇಲೆ ಕುಳಿತುಕೊಂಡರೆ ನಿನ್ನಂ ಸುಖವಾಗಿ ಆಸರಸ್ಸಿನ ಬಳಿಗು ಯ್ಯುವೆನು.

ಹಿರಣ್ಯಕವೆಂದಿತು:—ಆಗತಿಗಳ ಹೆಸರುಗಳಂ ಕೇಳಬೇಕೆಂ ದಿರುವೆನು.

ಅದೆಂದಿತು:—

ಕಂ|| ಆಂ ಪೇಳ್ವೆಂ ಗತಿಗಳ ಕೇಳ್ |
ಸಂಪಾತಂ ವಿಪ್ರಪಾತವಂತು ಮಹಾಪಾ ||
ತಂ ಪೆಱತು ನಿಪಾತಂ ವ |
ಕ್ರಂ ಪೆಱವಾತಿರ್ಯಗೂರ್ಧ್ವಲಘುಗಳುಮೆಂಬರ್ ||

ಹಿರಣ್ಯಕವು ಅದಂ ಕೇಳಿ ಆಕ್ಷಣವೇ ಅದರಮೇಲೆ ಹತ್ತಿತು.

ಲಘುಪತನಕವು ಮೆಲ್ಲಮೆಲ್ಲನೆ ಅದಂ ಹೊತ್ತುಕೊಂಡು ಸಂಪಾತಗತಿಯಿಂದ ಹೊರಟು ಕ್ರಮದಿಂದ ಆ ಸರೋವರವಂ ಸೇರಿತು.

ಬಳಿಕ ಮಂಥರಕವೆಂಬ ಕೂರ್ಮವು ಮೂಷಕದಿಂದ ಅಧಿ ಷ್ಠಿತವಾದ ಆ ಕಾಗೆಯಂ ದೂರದಿಂದಲೇ ಕಂಡು ಇದು ದೇಶ ಕಾಲವರಿತ ಅಸಾಧಾರಣವಾದ ಕಾಗೆಯೆಂದು ತಿಳಿದು ಥಟ್ಟನೆ ನೀರಂ ಹೊಕ್ಕಿತು.

ಲಘುಪತನಕವೂ ದಡದ ಮರದ ಪೊಟ್ಟರೆಯಲ್ಲಿ ಹಿರಣ್ಯ

ಕವಂ ಬಿಟ್ಟು ಕೊಂಬೆಯ ತುದಿಯಂ ಹತ್ತಿ ಗಟ್ಟಿಯಾಗಿ ಇಂತೆಂದಿತು:—

ಅಯ್ಯ ಮಂಥರಕ! ಬಾಬಾ. ನಾನು ನಿನ್ನ ಸ್ನೇಹಿತ ಲಘುಪತನಕನೆಂಬ ವಾಯಸ. ಬಹುದಿವಸಕ್ಕೆ ಅತ್ಯಾಸಕ್ತಿಯಿಂದ ಬಂದಿರುವೆನು. ಆದಕಾರಣ ಬಂದು ನನ್ನನಾಲಿಂಗಿಸು.
ಈ ವಿಷಯದಲ್ಲಿ ಇಂತು ಹೇಳುವರು:—

ಕಂ॥ ನಱುಗಪ್ಪುರದಿಂದಡಸಿದ ।
ವರಚಂದನದಿಂದದೇಂ ಕುಳಿರ್ಮಂಜಿನಿನೇಂ ॥
ಸರಿವಾರವು ಸಖನೊಡಲೊಳ್ ।
ನೆಱೆ ಪದಿನಾಱನೆಯದೊಂದು ಪಾಲ್ಗಮವೆಲ್ಲಂ ॥೫೯॥

ಅಂತಲ್ಲದೆ—

ಎಡರ್ಗಳ ತಪ್ಪಿಸಿ ಕಾವುದ ।
ನಿಡಿದದವಱಲುರಿಗದೊಂದು ಮರ್ದನಿಸುವುದಂ ॥
ಪೊಡವಿಯೊಳಾವನಿದಂ ತಾಂ ॥
ಪಡೆವನೊ ಸಖನೆಂಬ ವರ್ಣಯುಗ್ಮದ ಸುಧೆಯಂ ॥೬೦॥

ಅದಂ ಕೇಳಿ ಮಂಥರಕವು ಚೆನ್ನಾಗಿ ಪರಿಭಾವಿಸಿ ಥಟ್ಟನೆ ನೀರಿನಿಂದ ಈಚೆಗೆ ಬಂದು ರೋಮಾಂಚವಂ ತಾಳಿ ಕಣ್ಣುಗಳಲ್ಲಿ ಆನಂದಬಾಷ್ಪವಂ ತುಂಬಿ ಇಂತೆಂದಿತು:—ಮಿತ್ರ! ಬಾಬಾ. ನನ್ನನಾಲಿಂಗಿಸು. ಬಹುದಿವಸಗಳಿಂದ ನಿನ್ನಂ ನಾನು ಚೆನ್ನಾಗಿ ನೋಡಿರಲಿಲ್ಲ. ಅದರಿಂದ ನಾನು ನೀರೊಳಗೆ ಹೊರಟುಹೋದೆ. ಈ ವಿಷಯದಲ್ಲಿ ಇಂತು ನುಡಿಯಲ್ಪಟ್ಟಿದೆ:—

ಕಂ|| ಧಾರಿಣಿಯೊಳ್ ತನಗಾವನ
ಬೀರಮುಮೆಸಕಂ ಸಮಂತು ತಿಳಿಯದೊ ಕಾಲಮುಂ
ಆರಯಲಪನೊಡನೆಸಗ |
ಲ್ಬಾರದು ನೇಹಮನೆನುತ್ತೆ ಸುರಗುರು ನುಡಿದಂ ||೬೧||

ಇಂತು ಪೇಳಲು, ಲಘುಪತನಕವು ಮರದಿಂದಿಳಿದು ಮಂಥರಕವಂ ಆಲಿಂಗಿಸಿಕೊಂಡಿತು. ಇದು ಯುಕ್ತ:—

ಕಂ|| ಮಲವುಳ್ಳ ಮೆಯ್ಯ ತೊಳೆಯಲ್ |
ಸಲುತಿರ್ಪಮೃತಪ್ರವಾಹಮೇವುದೊ ಜಗದೊಳ್ |
ಕೆಲದಿನಕೊದವಿನ ಕೆಳೆಯನ |
ಸುಲಲಿತವೆನಿಪ್ಪೊಡಲ ತೆಕ್ಕೆಗೇಂ ಬೆಲೆಯುಂಟೇ ||೬೨||

ಇಂತು ಅವೆರಡೂ ಪರಸ್ಪರವಾಗಿ ಆಲಿಂಗಿಸಿಕೊಂಡು ರೋಮಾಂಚನಂ ತಾಳಿ ಮರದ ಕೆಳಗೆ ಕುಳಿತುಕೊಂಡು ತಮ್ಮ ಚರಿತ್ರವೃತ್ತಾಂತವಂ ಹೇಳಿಕೊಂಡುವು.

ಹಿರಣ್ಯಕವೂ ಮಂಥರಕಕ್ಕೆ ನಮಸ್ಕಾರಮಾಡಿ ಕಾಗೆಯ ಹತ್ತಿರ ಕುಳಿತುಕೊಂಡಿತು. ಬಳಿಕ ಮಂಥರಕವು ಅದಂ ಕಂಡು ಲಘುಪತನಕವಂ ಕುರಿತು:—ಅಯ್ಯಾ! ಈ ಮೂಷಕ ಯಾರು? ನಿನಗಿವನು ಭಕ್ಷ್ಯಭೂತನೆನಿಸಿದ್ದರೂ ನೀನು ಇವನಂ ಅದೆಂತು ಬೆನ್ನನೇರಿಸಿ ಕರೆದುಕೊಂಡು ಬಂದೆ? ಈ ವಿಷಯದಲ್ಲಿ ಅಲ್ಪವಾದ ಕಾರಣವಿರಲಾರದು

ಅದಂ ಕೇಳಿ ಲಘುಪತನಕವೆಂದಿತು:—ಅಯ್ಯಾ! ಹಿರಣ್ಯಕನೆಂಬ ಮೂಷಕನು ನನ್ನ ಎರಡನೆಯ ಪ್ರಾಣದಂತಿರುವ ಸ್ನೇಹಿತನು. ಹೆಚ್ಚು ಮಾತಿನಿಂದೇನು?

ಕಂ॥ ಮಱುವನಿವೊಲ್ ತಾರಗೆವೊಲ್ ।
ಮಳಲಂತೆವೊಲೀಮಹಾನುಭಾವನ ಸುಗುಣಾ ॥
ವಳಿಯೆಣಿಸಲ್ಕಳವಲ್ತಿವ ।
ನಱಲಿಂ ವೈರಾಗ್ಯವಾಂತು ನಿನ್ನಂ ಸೇರ್ದಂ ॥೬೩॥

ಮಂಥರಕವೆಂದಿತು:—ಈತನ ವೈರಾಗ್ಯಕ್ಕೆ ನಿಮಿತ್ತವೇನು?

ಕಾಗೆಯೆಂದಿತು:-ನಾನು ಇವನಂ ಬೆಸಗೊಂಡೆ. ನನಗೂ ತಿಳಿಯಿಸಲಿಲ್ಲ. ಇವನು ಹೇಳಿದುದೇನೆಂದರೆ:—ಹೇಳತಕ್ಕುದು ಅದು ಬಹುವಾಗಿದೆ. ಅದರಿಂದ ಅಲ್ಲಿಗೇ ಹೋಗಿ ಎಲ್ಲವನ್ನೂ ವಿಶದವಾಗಿ ಹೇಳುವೆನು-ಎಂದು. ಹಿರಣ್ಯಕವಂ ಕುರಿತು- ಎಲೆ ಪ್ರಿಯ ಹಿರಣ್ಯಕ ! ನಿನ್ನ ವೈರಾಗ್ಯಕಾರಣವಂ ನಮ್ಮಿಬ್ಬರಿಗೂ ತಿಳಿಯಿಸು. ಅದೆಂದಿತು:—

ಕ ಥೆ ೧.

ದಕ್ಷಿಣದೇಶದಲ್ಲಿ ಮಹಿಳಾರೋಪ್ಯವೆಂಬ ಒಂದು ಪಟ್ಟಣವುಂಟು. ಅದರ ಸ್ವಲ್ಪದೂರದಲ್ಲಿ ಭಗವಂತನಾದ ಶ್ರೀಮಹಾದೇವನ ಮಠಾಲಯವಿರುವುದು. ಅಲ್ಲಿ ತಾಮ್ರಚೂಡನೆಂಬ ಬಬ್ಬ ಸನ್ಯಾಸಿ ವಾಸಮಾಡುತಿದ್ದನು. ಅವನು ಪಟ್ಟಣದಲ್ಲಿ ಭಿಕ್ಷಾಟನೆ ಮಾಡುತ್ತ ಜೀವಿಸುತಿದ್ದನು. ಮಿಕ್ಕಭಿಕ್ಷಾನ್ನವಂ ಆಭಿಕ್ಷಾಪಾತ್ರೆಯಲ್ಲಿಯೇ ಇಟ್ಟು ಆ ಭಿಕ್ಷಾಪಾತ್ರವಂ ಒಂದು ಗೂಟಕ್ಕೆ ನೇತುಹಾಕಿ ಬಳಿಕ ರಾತ್ರಿಯಲ್ಲಿ ಮಲಗಿಕೊಳುತಿದ್ದನು. ಬೆಳಗಾಗುವುದೂ ಆ ಅನ್ನವಂ ಸೇವಕರಿಗೆ ಹಾಕಿ ಆ ಮಠಾಲಯದಲ್ಲಿ ಚೆ

ನ್ನಾಗಿ ಗುಡಿಸಿ ಸಾರಿಸಿ ರಂಗವಲ್ಲಿಯಿಡುವಂತೆ ಅಪ್ಪಣೆಮಾಡುತಿದ್ದನು. ಒಂದುದಿವಸ ನನ್ನ ಸೇವಕರು ನನ್ನಲ್ಲಿ ಇಂತು ಬಿನ್ನಪಿಸಿದರು:—

ಒಡೆಯನೆ! ಮಠಾಲಯದಲ್ಲಿ ಸಿದ್ಧವಾದ ಅನ್ನವು ಮೂಷಿಕ ಭಯದಿಂದ ಅದೇ ಭಿಕ್ಷಾಪಾತ್ರೆಯಲ್ಲಿರಿಸಿ ಪ್ರತಿದಿಸವೂ ಗೂಟದಲ್ಲಿ ನೇತುಹಾಕಲ್ಪಟ್ಟಿರುವುದು. ಆದರಿಂದ ತಿನಲು ನಮಗೆ ಸಾಧ್ಯವಿಲ್ಲ. ಒಡೆಯನಾದ ನಿನಗೆ ಅಸಾಧ್ಯವಾದುದು ಯಾವುದೂ ಇಲ್ಲ. ಆದಕಾರಣ ಬೇರೆಕಡೆ ಸುಮ್ಮನೆ ತಿರುಗುವುದರಿಂದೇನು? ಈದಿನ ಅಲ್ಲಿಗೆ ಹೋಗಿ ನಿನ್ನ ಅನುಗ್ರಹದಿಂದ ಯಥೇಚ್ಛವಾಗಿ ಭುಂಜಿಸಬೇಕೆಂದಿರುವೆವು.

ಅದಂ ಕೇಳಿ ನಾನು ಎಲ್ಲಾ ಗುಂಪಿನಿಂದೊಡಗೂಡಿ ಆಕ್ಷಣದಲ್ಲಿಯೇ ಅಲ್ಲಿಗೆ ಹೋದೆನು. ಮೇಲೆ ನೆಗೆದು ಆ ಭಿಕ್ಷಾಪಾತ್ರೆಯಲ್ಲಿ ಹತ್ತಿಕುಳಿತೆನು. ಅಲ್ಲಿದ್ದ ಭಕ್ಷ್ಯವಿಶೇಷಂಗಳಂ ಸೇವಕರಿಗೆ ಕೊಟ್ಟು ಬಳಿಕ ನಾನು ತಿನುತಿದ್ದೆನು. ಎಲ್ಲರಿಗೂ ತೃಪ್ತಿಯುಂಟಾದ ಮೇಲೆ ಮತ್ತೆ ಸ್ವಸ್ಥಾನಕ್ಕೆ ಹೋಗುತಿದ್ದೆನು.

ಇಂತು ನಿತ್ಯವೂ ಆ ಅನ್ನವಂ ಭಕ್ಷಿಸುತಿದ್ದೆನು. ಸಂನ್ಯಾಸಿಯೂ ಶಕ್ತ್ಯನುಸಾರದಿಂದ ಕಾಯುತಿದ್ದನು. ಆದರೆ ಅವನು ಯಾವಾಗ ನಿದ್ರೆಮಾಡುವನೋ ಆಗ ನಾನು ಅಲ್ಲಿ ಹತ್ತಿ ನನ್ನ ಕೆಲಸವಂ ಮಾಡುತಿದ್ದೆನು.

ಬಳಿಕ ಒಂದುಕಾಲದಲ್ಲಿ ಆತನು ತನ್ನ ಕಾವಲಿಗೋಸ್ಕರ ಮಹತ್ತಾದ ಪ್ರಯತ್ನವಂ ಮಾಡಿದನು. ಬೆತ್ತವಂ ತಂದನು. ಮಲಗಿಕೊಂಡಿದ್ದರೂ ನನ್ನ ಭಯದಿಂದ ಆ ಭಿಕ್ಷಾಪಾತ್ರೆಯಂ ಆಬೆತ್ತ

ದಿಂದ ಹೊಡೆಯುತಿದ್ದನು. ನಾನೂ ಅನ್ನವಂ ತಿನ್ನದಿದ್ದರೂ ಹೊಡೆತದ ಭಯದಿಂದ ದೂರಹೋಗುತಿದ್ದೆ. ಇಂತು ಆತನೊಡನೆ ಹೋರಾಡುತ್ತ ರಾತ್ರಿಯೆಲ್ಲವಂ ಕಳೆಯುತಿದ್ದೆನು.

ಬಳಿಕ ಮತ್ತೊಂದುದಿನ ಆ ಮಠದಲ್ಲಿ ಆತನ ಸ್ನೇಹಿತನಾದ "ಬೃಹತ್‌ಸ್ಫಿಕ್ಕು" ಎಂಬ ಸಂನ್ಯಾಸಿ ತೀರ್ಥಯಾತ್ರಾಪ್ರಸಂಗದಿಂದ ಮಾರ್ಗಸ್ಥನಾದ ಅತಿಥಿಯಾಗಿ ಬಂದು ಸೇರಿದನು. ಅವನಂ ನೋಡಿ ಪ್ರತ್ಯುತ್ಥಾನಮಾಡಿ ಬಹುಮಾನಪುರಸ್ಸರವಾಗಿ ಸತ್ಕರಿಸಿದನು. ಬಳಿಕ ರಾತ್ರಿಯಾಗುವುದೂ ಬಂದುಕಡೆ ದರ್ಭಾಸ್ತರಣದಲ್ಲಿ ಇಬ್ಬರೂ ಮಲಗಿ ಧರ್ಮಸಂಗತಿಗಳಂ ಹೇಳಿಕೊಳುತಿದ್ದರು. ಆಮೇಲೆ ಆ ಬೃಹತ್‌ಸ್ಫಿಕ್ಕು ಸಂಗತಿಗಳಂ ಹೇಳುತಿರುವಾಗ ಆ ತಾಮ್ರಚೂಡನು ಮೂಷಕಭಯಕ್ಕೋಸ್ಕರ ಮನದಲ್ಲಿ ಆಕುಲನಾಗಿ ಬೆತ್ತದಿಂದ ಭಿಕ್ಷಾಪಾತ್ರೆಯಂ ಹೊಡೆಯುತ್ತ ಅವನಿಗೆ ಸುಮ್ಮನೆ ಬಾಯಿಂದ ಪ್ರತ್ಯುತ್ತರವಂ ನುಡಿಯುತಿದ್ದನು. ಅದೇ ಧ್ಯಾನದಿಂದ ವ್ಯಾಪೃತನಾಗಿ ತಾನು ಮತ್ತೇನನೂ ಆಡುತಿರಲಿಲ್ಲ.

ಬಳಿಕ ಆ ಅಭ್ಯಾಗತನು ಕೋಪಗೊಂಡು ತಾಮ್ರಚೂಡನಂ ಕುರಿತು ಇಂತೆಂದನು:—ಎಲೆತಾಮ್ರಚೂಡ! ನೀನು ಸರಿಯಾದ ಸ್ನೇಹಿತನಲ್ಲವೆಂಬುದು ನನಗೆ ಗೊತ್ತಾಯಿತು. ಅದರಿಂದಲೇ ನೀನು ನನ್ನೊಡನೆ ಉಲ್ಲಾಸಗೊಂಡು ಮಾತನಾಡುವುದಿಲ್ಲ. ಆದಕಾರಣ ರಾತ್ರಿಕಾಲವಾದರೂ ನಿನ್ನ ಮಠವಂ ಬಿಟ್ಟು ಮತ್ತೊಂದೆಡೆಗೆ ಹೋಗುವೆನು. ಇಂತು ನುಡಿಯುಂಟು:—

ವೃ|| ನಡೆತಾರೀಪೀಠದೊಳ್ ಕುಳ್ಳಿರು ಬಹುದಿವಸಕ್ಕಲ್ತೆ ನೀಂ
ಕಾಣ್ಬೆಯೇಕೈ| ಪಡೆವಾತೇಂ ದುರ್ಬಲಂ ನೀನೆನಿಪೆ ಪದುಳಮೇಂ

ನಿನ್ನಕಂಡಿಂದು ಪೋದಂ| ಬಡವೇನಾನೆಂದದಾರ್ ಬಂದಿರ್ಪ ಕೆಳೆ
ಯರಂ ಕೂರ್ತುರ್ಕೆ ಸಂತೈಸಿ ಹರ್ಷಂ| ಬಡಿಪರ್ ನಿಶ್ಶಂಕರಾಗಾತ್ತ
ವರ ಮನೆಗೊಳ್ಳಲ್ದಾವಗಂ ಪೋಗಲಕ್ಕುಂ ೬೪||

ಕಂ|| ಬಂದವನಂ ಕಂಡಾವಂ |
ತಾಂದೆಸೆಯುಂ ಮತ್ತೆ ನೇಹನ ನೀಕ್ಷಿಪನವನಾ |
ಮಂದಿರವನೆಯ್ದುವರ್ ಸಿರ |
ದಿಂದಂ ಕೋಡುಗಳನಾನದೆತ್ತುಗಳಲ್ತೇ |೬೫||

ಕಂ|| ಇದಿರ್ಗೊಂಡುಪಚರಿಸುವುದುಂ |
ಪದೆಪಿಂ ಸವಿನುಡಿಯ ನುಡಿವುದುಂ ಮೇಣ್ ಗುಣದೊ|
ಷದ ಕಥೆಯುಂ ಸಲ್ಲದದೆ |
ಲ್ಲದು ಸೌಧವೆನಿಕ್ಕೆ ಗಮಿಸರಲ್ಲಿಗದಾರುಂ |೬೬||

ನೀನು ಒಂದು ಮಠವನ್ನು ಕಟ್ಟಿಕೊಂಡಿದ್ದರೂ ಗರ್ವ ಪಡುತಿರುವೆ. ಮಿತ್ರನಲ್ಲಿ ಮಾಡಬೇಕಾದ ಸ್ನೇಹವಂ ಬಿಟ್ಟು ಮಠಾಶ್ರಯವ್ಯಾಜದಿಂದ ನೀನು ನರಕವಂ ಸಂಪಾದಿಸಿಕೊಂಡಿರುವೆ. ನೀನಿದನರಿಯೆ. ಕೇಳು—

ಕಂ|| ನಾರಕದೊಳಾಸೆಯಿರ್ಪೊಡೆ |
ಪೌರೋಹಿತ್ಯಮನದೊಂದುಬರಿಸಂ ಗೆಯ್ ಮ |
ತ್ತಾರಯೆಯಿಂ ಪೆಱತೇಕಿನೇಂ |
ಮೂಱುಂದಿನವೆಸಗು ಮಠದ ಪರಿಚಿಂತನಮಂ |೬೭|

ಆದಕಾರಣ ಎಲೆ ಮೂರ್ಖ! ಬಿಂಕವುಳ್ಳ ನಿನ್ನಂ ನೋಡಿವರೆ ದುಃಖಪಡಬೇಕಾಗಿವೆ. ಆದರಿಂದ ನಿನ್ನ ಮಠವಂ ಬಿಟ್ಟು ಹೋಗುವೆನು.

ಬಳಿಕ ತಾಮ್ರಚೂಡನು ಭಯಪಟ್ಟು ಅವನಂ ಕುರಿತು ಇಂತೆಂದನು:—ಅಯ್ಯಾ ಪೂಜ್ಯನೆ! ಇಂತು ನುಡಿಯಬೇಡ. ನಿನಗೆ ಸಮನಾದ ಸ್ನೇಹಿತ ಮತ್ತೊಬ್ಬನಾವನೂ ಇಲ್ಲ. ಆದರೆ ಕೇಳು.- ನಿನ್ನ ಮಾತುಗಳಿಗೆ ಸರಿಯಾಗಿ ಪ್ರತಿವಚನಂಗಳನಾಡದೆ ಇದ್ದು ದಕ್ಕೆ ಕಾರಣವೇನೆಂದರೆ, ಇದೊ ಈ ಕೆಟ್ಟಲಿ ಎತ್ತರವಾದ ಸ್ಥಾನ ದಲ್ಲಿಟ್ಟಿದ್ದರೂ ನೆಗೆದು ಭಿಕ್ಷಾಪಾತ್ರೆಯಂ ಹತ್ತುವುದು; ಮತ್ತು ಅದರಲ್ಲಿರುವ ಭಿಕ್ಷಾಶೇಷವಂ ಭಕ್ಷಿಸುತಿರುವುದು. ಆದರಿಂದಲೇ ಮಠದಲ್ಲಿ ಗುಡಿಸುವುದಕ್ಕೂ ಆಗುವುದಿಲ್ಲ. ಆ ಮೂಷಿಕವಂ ಹೆದರಿಸುವುದಕೋಸ್ಕರ ಈ ಬೆತ್ತದಿಂದ ಭಿಕ್ಷಾಪಾತ್ರೆಯಂ ಹೊಡೆ ಯುತಿದ್ದೆ. ಇನ್ನಾವಕಾರಣವೂ ಇಲ್ಲ. ದುಷ್ಟವಾದ ಈ ಯಿಲಿಯ ಚಮತ್ಕಾರವಂ ನೋಡು. ನೆಗೆಯುವುದರಲ್ಲಿ ಬೆಕ್ಕು ಕಪಿ ಮುಂತಾದುವುಗಳನ್ನೂ ತಿರಸ್ಕರಿಸುತಿರುವುದು.

ಬೃಹತ್ಸ್ಫಿಕ್ಕು ಇಂತೆಂದನು:—ಅದರ ಬಿಲವು ಗೊತ್ತಾಗಿ ದೆಯೋ ?

ತಾಮ್ರಚೂಡನೆಂದನು:—ಪೂಜ್ಯನೆ! ಗೊತ್ತಿಲ್ಲ.

ಅವನೆಂದನು:—ದಿಟವಾಗಿ ಅದರ ಬಿಲ ನಿಧಿಯಮೇಲಿದೆ. ನಿಧಿಯ ಊಷ್ಮದಿಂದ ಇಲಿ ಇಂತು ಆಟವಾಡುವುದು. ಕೇಳು:—

ಕಂ॥ ಏಗಂ ತೇಜೋವೃದ್ಧಿಯ
ನೀಗುಂ ಲೋಕಕ್ಕೆ ಪಣದೆ ಪುಟ್ಟಿದಬಿಸುಪುಂ ।
ಚಾಗಂಗೈಯುತ್ತದನುಜ ।
ಭೋಗಿಸೆಯಿನ್ನದಱ ಮೈಮೆಯುಂ ಬಣ್ಣಿಪುದೇಂ ॥

ಅಂತಲ್ಲದೆ ಇದೊಂದು ನುಡಿಯುಂಟು:—

ಕಂ॥ ಸಲೆಯುಜ್ಜುಗದೆಳ್ಗಳಂ ಶಾಂ ।
ಡಿಲಿ ತಾನಿವಳುಜ್ಜುಗದೆಳ್ಗಳಂ ಸಿರ್ಸರಪಿಂ ।
ತೆಲೆಜನನಿ ಮಾಱಳಾರ ।
ಯ್ಯಲೊಡಂ ಕಾರಣಮದೇನೊ ವಲಮಿರವೇಳ್ಕುಂ ॥

ತಾಮ್ರಚೂಡನೆಂದನು:—ಇದು ಎಂತು?

ಅವನೆಂದನು:—

ಕಥೆ ೨.

ಹಿಂದೆ ನಾನು ವರ್ಷಾಕಾಲದಲ್ಲಿ ಒಂದುಕಡೆ ವ್ರತಗ್ರಹಣ ನಿಮಿತ್ತವಾಗಿ ಒಬ್ಬ ಬ್ರಾಹ್ಮಣನಂ ವಾಸಕ್ಕೋಸ್ಕರ ಬೇಡಿಕೊಂಡೆ. ಅದಕ್ಕೆ ಆತನು ಒಪ್ಪಿ ನನ್ನಂ ಶುಶ್ರೂಷಿಸುತಿದ್ದನು. ನಾನು ಸುಖದಿಂದ ದೇವರಪೂಜೆಯಂ ಮಾಡಿಕೊಂಡಿದ್ದೆ. ಇಂತಿರಲು, ಒಂದುದಿನ ಬೆಳಗೆ ಅಲ್ಲಿ ನಡೆಯುತಿದ್ದ ಬ್ರಾಹ್ಮಣಿಯು ಮತ್ತು ಬ್ರಾಹ್ಮಣನ ಸಂವಾದವಂ ಅವಹಿತನಾಗಿ ಕೇಳುತಿದ್ದೆ. ಅವರಲ್ಲಿ ಬ್ರಾಹ್ಮಣನಿಂತೆಂದನು:—

ಎಲೆ! ಬೆಳಗಾಗುವುದೂ ದಕ್ಷಿಣಾಯನಪುಣ್ಯಕಾಲ. ವಿಶೇಷ ದಾನಫಲಪ್ರದವಾದುದು. ಆದಕಾರಣ ಪ್ರತಿಗ್ರಹಕ್ಕೋಸ್ಕರ ಗ್ರಾಮಾಂತರಕ್ಕೆ ಹೋಗುವೆನು. ನೀನು ಭಗವಂತನಾದ ಸೂರ್ಯನ ಉದ್ದೇಶದಿಂದ ಒಬ್ಬ ಬ್ರಾಹ್ಮಣನಂ ಕರೆದು ಭೋಜನಮಾಡಿಸು.

ಬ್ರಾಹ್ಮಣಿ ಅದನಾಲಿಸಿ ಬಿರುನುಡಿಗಳಿಂದ ಅವನಂ ಗದರಿಗರ್ಜಿಸಿ ನುಡಿದಳು:—ಬಡತನದಿಂದ ಪಾಡುಪಡುತಿರುವ ನೀನು

ಭೋಜನನಮಾಡಿಸುವುದೆಂದರೇನು? ಇಂತು ನುಡಿಯಲು ನಿನಗೆ ಲಜ್ಜೆಯಾಗುವುದಿಲ್ಲವೆ? ಅಲ್ಲದೆ ನಿನ್ನ ಕೈಹಿಡಿದ ನನಗೆ ಏನು ಸುಖವೂ ಇಲ್ಲ. ಸರಿಯಾದ ಊಟಕ್ಕೂ ಗತಿಯಿಲ್ಲ. ಇಟ್ಟುಕೊಳ್ಳುವುದಕ್ಕೆ ಯಾವುದೊಂದು ಒಡವೆಯೂ ಇಲ್ಲ.

ಅದನಾಲಿಸಿ ಬ್ರಾಹ್ಮಣನು ಹೆದರಿದವನಾದರೂ ಮೆಲ್ಲಮೆಲ್ಲನಿಂತು ನುಡಿದನು:—

ಎಲೆ! ನೀನು ಇಂತು ಹೇಳಬಾರದು. ಏಕೆಂದರೆ:—

ಕಂ॥ ಅರೆದುತ್ತನಾದೊಡಂ ಬಂ।
ದೆರೆವಗೊರ್ಗಲವಿಂದದೇಕೆ ನೀಡರೊ ಮನುಜರ್।
ಸಿರಿ ತಮ್ಮಿಚ್ಛೆಗೆ ತಕ್ಕಂ
ತಿರೆ ತಿರೆಯೊಳದಾರ್ಗ್ಗದೆಂದುಗಡ ಸಮನಿಸುಗುಂ ।೩೧॥

ಪೊಡವಿಯೊಳ್ಳೆ ಸಿರಿಯುಳ್ಳರ್।
ಕಡುಚಾಗದೆ ತಾವದಾವಫಲವಂ ಪಡೆಗುಂ।
ಬಡವರದನೊಂದು ಕವಡೆಯ।
ಕುಡುವುದಱಿಂ ಪಡೆವರೆಂದು ಕೇಳ್ದಿರ್ಪೆವು ನಾಂ।

ಕುಡುವಂ ಸೇವ್ಯಂ ಲಘುವಾ।
ದೊಡಮರ್ಥದೆ ಲೋಭಿ ಪೆಂಪುವಡೆದುಮಸೇವ್ಯಂ।
ಒಡರಿಪುದೊಲವಂ ಸವಿನೀ।
ರಡಸಿದ ಕೂಪಂ ಸಮುದ್ರವಂತಲ್ತುಗಡಾ ।೩೨॥

ಅಂತಲ್ಲದೆ;—

ನೆಱಿಚಾಗದ ಪೆಂಪಿಲ್ಲದ।
ಬಱಿದೆನಿಸಿದ ರಾಜರಾಜಶಬ್ದದೆ ಫಲಮೇಂ॥

ಒರೆಯುರಃ ವಿಬುಧರ್ ನಿಧಿಗಳ ।
ನುೞಿ ಕಾಯುತುವಿಸರ್ಜನಂ ಮಹೇಶ್ವರನೆನುತುಂ ॥

ಎಂದುಂ ದಾನವುನೊಂದಿದ ।
ಸಿಂದುರವುಭಿನಂದ್ಯವೇಗಡಾ ಕುಂದಿದೊಡಂ ॥
ಬಂದಿದೊಡಂ ಪೆರ್ಮೆಯ್ಯಂ ।
ನಿಂದಿತವದು ಕೞ್ತೆ ದಾನವಿಲ್ಲದ ಕತದಿಂ ॥೩೪॥

ಪಡೆದುದನುೞಿ ಕುಡದುದಱಿಂ ।
ಕೊಡಂ ಲಸದ್ವೃತ್ತವಾದೊಡಂ ಕೆಳಸಾರ್ಗುಂ ।
ಕುಡಿಕೆ ಕರಂ ಕೀೞಿಂದೆನಿ ।
ಪೊಡಮಿರ್ದುದನಿತ್ತುದೂಸಱಿಂ ಮೇಲೆಸೆಗುಂ ॥೩೫॥

ಜಲವುಂ ಕುಡುವಾ ಮುಗಿಲುಂ ।
ವಲಮೆಲ್ಲಾ ಲೋಕದೊಳ್ಮೆಗಾಶ್ರಯವೆನಿಕುಂ ।
ಅಲಸದೆ ನಿಚ್ಚಂ ಕರವುಂ ।
ಸಲೆ ನೀಡುವ ಮಿತ್ರನಹಹ ನೋಡಲಶಕ್ಯಂ ॥೩೬॥

ಇಂತು ತಿಳಿದು ಬಡತನವುಳ್ಳವರಾದರೂ ದೇಶಕಾಲಪಾತ್ರಂಗಳಲ್ಲಿ ಅತ್ಯಲ್ಪವನಾದರೂ ದಾನಮಾಡಬೇಕು. ಹೇಳಿದೆ:—

ಕಂ॥ ಉತ್ತಮವೆನಿಸಿದ ಸದ್ಬೀಯಿ ।
ನುತ್ತಮದೊಳ್ ದೇಶಕಾಲಪಾತ್ರದೊಳೀನಂ ॥
ಇತ್ತಪರೊ ವಿವೇಕಿಗಳದು ।
ಬಿತ್ತರವುಂ ಪಡೆದನಂತಫಲವುಂ ಕುಡುಗುಂ ॥೩೭॥

ಅಂತಲ್ಲದೆ:—

ಮಾನಸನಳುಂಬಮಾಸೆಯು ।
ನಾನಲ್ಬಾರದು ಸಮಂತು ಬಿಡಬಾರದು ಮೇಣ್ ॥
ಮಾನಸದತ್ಯಾಶೆಯಿನವ ।
ಮಾನಿತನೆನಿಪವನ ತಲೆಗೆ ಕೇಡೆಯ್ತರ್ಕುಂ ॥೩೮॥

ಬ್ರಾಹ್ಮಣಿಯೆಂದಳು:—ಇದೆಂತು ?

ಅವನೆಂದನು:—

ಕಥೆ ೩.

ಒಂದುಕಾಡಿನಲ್ಲಿ ಒಬ್ಬಬೇಡನಿದ್ದನು. ಅವನು ವಿಶೇಷವಾಪಕಾರ್ಯಕ್ಕೋಸ್ಕರ ಮತ್ತೊಂದು ಅಡವಿಗೆ ಹೊರಟು ದಾರಿಯಲ್ಲಿ ಹೋಗುತಿರುವಾಗ ಅಂಜನಾದ್ರಿಶಿಖರದಂತೆ ಮೈಯುಳ್ಳ ಒಂದು ದೊಡ್ಡಹಂದಿ ಸಿಕ್ಕಿತು. ಅದಂ ಕಂಡು ಬಾಣವಂ ಕಿವಿದುದಿವರೆಗೂ ಸೆಳೆದುಬಿಡಲು, ಆಹಂದಿ ಆಬಾಣದ ಹೊಡೆತದಿಂದ ರೇಗಿ ಬಾಲಚಂದ್ರನಂ ಹೋಲುವ ತನ್ನ ಕೋರೆದಾಡೆಯ ಮೊನೆಯಿಂದ ಆಬೇಡನ ಎದೆಯುಂ ಸೀಳಿಬಿಟ್ಟಿತು. ಬೇಡನು ಪ್ರಾಣವಂಬಿಟ್ಟು ಕೆಳಗೆ ಬಿದ್ದನು. ಹಂದಿಯೂ ಬೇಡನಂ ಕೊಂದು ಬಾಣಪ್ರಹಾರದ ನೋವಂ ತಾಳಲಾರದೆ ಸತ್ತಿತು. ಇಷ್ಟರೊಳಗೆ ಆಸನ್ನಮೃತ್ಯುವಾದ ಒಂದುನರಿ ಆಹಾರವಿಲ್ಲದೆ ತಲ್ಲಣಗೊಂಡು ಅಲ್ಲಲ್ಲಿ ತೊಳಲುತ್ತ ಆಯೆಡೆಗೆ ಬಂದಿತು. ಹಂದಿಯನ್ನೂ ಬೇಡನನ್ನೂ ಕಂಡೊಡನೆಯೆ ಸಂತಸಂಗೊಂಡು ಇಂತು ಚಿಂತಿಸಿತು:—

ಅಹಹ! ನನ್ನ ಅದೃಷ್ಟ ಲೇಸಾದುದು. ಅದರಿಂದ ನನಗೆ ಅಚಿಂತಿತವಾದ ಭೋಜನವೊದವಿತು. ಇದು ತಕ್ಕುದೇಸರಿ:—

ಕಂ॥ ಮನುಜಂ ತಾನುದ್ಯೋಗಮ
ನನುಗೊಳಸದೊಡೇನೊ ಶುಭಮೊ ಮೇಣಶುಭಮೊ ಮು॥
ನ್ನಿನ ಜನ್ಮದ ಕರ್ಮದ ಫಲ ।
ಮನುವಿಂ ಸಮನಿಪುದು ಬಿಧಿಯ ನಿಯಮನದಿಂದಂ । ೭೯ ॥

ಅಂತಲ್ಲದೆ.—

ಪದೆಪಿಂದದಾವದೇಶದೊ ।
ಳದಾವಕಾಲದೊಳದಾವ ಹರಯದೆ ತಾನಾ ।
ವುದನೊಡರಿಸಿದನೊ ಕರ್ಮವ ।
ನದರ್ಕೆ ತಕ್ಕಂತೆ ಶುಭಮನಶುಭಮನುಣ್ಗುಂ । ೮೦ ॥

ಆದಕಾರಣ ಬಹುದಿವಸ ಭುಂಜಿಸುತ್ತ ಜೀವಿಸುವೆನು. ಮೊದಲು ಈ ಬಿಲ್ಮೊನೆಗೆ ತಗಲಿರುವ ಹಂದಿಯ ನರಗಳಂ ತಿನುವೆನು. ಏಕೆಂದರೆ—

ಕಂ॥ ಧನಮಂ ತಾನಾರ್ಜಿಸಿದುದ ।
ನಿನಿತಿನಿತನುಭವಿಸವೇಳ್ಕುಮಿಂತರ್ ಸುರಸಾ ।
ಯನಮಂ ಸವಿವವೊಲಲ್ಲದೆ
ಯನುಭೋಗಿಸಬಾರದಿಚ್ಛೆವಂದವೊಲೆಂದುಂ । ೮೧ ॥

ಎಂದು ಮನದಲ್ಲಿ ನಿಶ್ಚಯಿಸಿ ಮೊನೆಪಿನ ಬಿಲ್ದುದಿಯಂ ಬಾಯೊಳಗೆ ಇಟ್ಟುಕೊಂಡು ನರವಂ ತಿನಲುಜ್ಜುಗಿಸಿತು. ಬಳಿಕ ಹೆಣಿಕೆ ಸಡಿಲವಾಗಲು, ಬಿಲ್ಮೊನೆ ಅಂಗುಳಂ ಭೇದಿಸಿಕೊಂಡು ನೆತ್ತಿಯ ನಡುವಣಿಂದ ಹೊರಟಿತು. ಆ ನರಿಯೂ ಆದರ ವಿಭೇದನ

ದಿಂದ ಒಡನೆಯೆ ಸತ್ತಿತು. ಇದರಿಂದ ನಾನು ಹೇಳುವೆನು:- ಮಾನಸನಳುಂಬವಾಸೆಯು | ನಾನಲ್ಬಾರದು......ಎಂದು.

ಮತ್ತೆ ಅವನು ನುಡಿದನು:—ಎಲೆ! ನೀನು ಕೇಳಲ್ಲವೆ ?

ಕಂ|| ವಸುಧಾವಲಯದೊಳಾಯಿಸ |
ವೆಸಕಂ ಪಣವಂತು ಬಿಜ್ಜೆ ಸಾವೆಂಬೈದಂ ||
ನಿಸದಂ ಜಗದೊಳ್ ಜಂತುಗೆ |
ಬಸಿಜ೩ೊಳಗಿರ್ಪಂದೆ ಸೃಜಿಪನಲ್ತೆ ವಿಧಾತ್ರಂ ||೮೨|

ಬಳಿಕ ಆಕೆಯಿಂತು ಆತನಿಂ ಬೋಧಿಸಲ್ಪಟ್ಟು ನುಡಿದಳು:— ಇಂತಾದರೆ ಮನೆಯಲ್ಲಿ ಸ್ವಲ್ಪ ಎಳ್ಳದೆ. ಅದನುಜ್ಜ ಆಯೆಳ್ಳ ಪ್ರಡಿಯಿಂದ ಅನ್ನವಂ ಕಲಿಸಿ ಬ್ರಾಹ್ಮಣನಿಗೆ ಇಡುವೆನು.

ಆತನು ಆಕೆಯ ನುಡಿಯಂ ಕೇಳಿ ಊರಿಗೆ ಹೋದನು. ಆಕೆ ಎಳ್ಳಂ ಬಿಸುನೀರಲ್ಲಿ ನನೆಯಿಸಿ ಬಸಿಯುಹಾಕಿ ಉಜ್ಜಿ ಬಿಸಿಲಲ್ಲಿ ಹರೆವಿದಳು. ಇಷ್ಟರಲ್ಲಿ ಆಕೆ ಮನೆಯ ಕೆಲಸದಲ್ಲಿ ವ್ಯಗ್ರಯಾಗಿರಲು, ಒಂದು ನಾಯಿ ಬಂದು ಆಯೆಳ್ಳ ನಡುವೆ ಮೂತ್ರವಂ ವಿಸರ್ಜಿಸಿತು. ಅದಂ ಕಂಡು ಆಕೆ ಆಲೋಚಿಸಿದಳು:—ಅಹಹ! ಪ್ರತಿಕೂಲವಾದ ದೈವದ ಜಾಣ್ಮೆಯನೇನೆಂದು ಹೇಳಲಿ! ಈಯೆಳ್ಳಂ ತಿನ್ನದಂತೆ ಮಾಡಿಟ್ಟಿತು. ಆದರೆ ಉಜ್ಜಿದ ಈಯೆಳ್ಳಂ ತೆಗೆದುಕೊಂಡು ಹೋಗಿ ಯಾರ ಮನೆಗಾದರೂ ಕೊಟ್ಟು ಉಜ್ಜದಿರುವ ಎಳ್ಳಂ ತರುವೆನು. ಯಾರಾದರೂ ಈಯರ್ಥಕ್ಕೆ ಒಪ್ಪಿ ಕುಡುವರು.

ಬಳಿಕ ನಾನು ಭಿಕ್ಷೆಗೆ ಯಾವನ ಮನೆಗೆ ಹೋಗಿದ್ದೆನೋ ಆಮನೆಗೆ ಆಕೆಯೂ ಎಳ್ಳಂ ತೆಗೆದುಕೊಂಡು ವಿಕ್ರಯಿಸುವುದಕ್ಕೆ ಬಂದು ಇಂತೆಂದಳು:—ಯಾರಾದರೂ ಉಜ್ಜದೆಳ್ಳಂ ಕೊಟ್ಟು ಉಜ್ಜಿದ ಈಯೆಳ್ಳಂ ಕೊಂಡುಕೊಳಬಹುದು.

ಬಳಿಕ ಆಮನೆಯ ಯಜಮಾನಿ ಒಳಗೆ ಹೋಗಿ ಒಂದು ಉಜ್ಜದೆಳ್ಳಂ ಕೊಟ್ಟು ಉಜ್ಜಿದೆಳ್ಳಂ ತೆಗೆದುಕೊಳುವಷ್ಟರಲ್ಲಿ ಈಕೆಯ ಮಗನು ನೀತಿಶಾಸ್ತ್ರವಂ ಪರ್ಯಾಲೋಚಿಸಿ ಇಂತೆಂದನು:-

ಅಮ್ಮ! ಈಯೆಳ್ಳು ತೆಗೆದುಕೊಳತಕ್ಕುದಲ್ಲ. ಈಕೆ ಸುಮ್ಮನೆ ಉಜ್ಜಿದೆಳ್ಳಂ ಕೊಟ್ಟು ಉಜ್ಜದೆಳ್ಳಂ ತೆಗೆದುಕೊಳ್ಳಳು. ಏನೋ ಕಾರಣವಿರಬೇಕು. ಅದರಿಂದಲೇ ಈಕೆ ಉಜ್ಜದೆಳ್ಳಂ ತೆಗೆದುಕೊಂಡು ಉಜ್ಜಿದೆಳ್ಳಂ ಕುಡುವಳು.

ಅದನಾಲಿಸಿ ಮನೆಯಾಕೆ ಆಯೆಳ್ಳಂ ಬಿಟ್ಟುಬಿಟ್ಟಳು. ಇದಕ್ಕೋಸ್ಕರ ನಾನು ಹೇಳುವೆನು:—

ಕಂ॥ ಸಲೆಯುಜ್ಜಿದೆಳ್ಗಳಂ ಶಾಂ
ಡಿಲಿ ತಾನಿವಳುಜ್ಜದೆಳ್ಗಳಂ ಸಿರ್ದೇರ ಮಿಂ:
ತೆಲೆಜನನಿ ಮಾಱಳ್‌......॥ ಎಂದು.

ಇದಂ ಕೇಳಿ ಅವನು ಮತ್ತೆ ಇಂತೆಂದನು:—ಆಯಿಲಿಯ ಹೆಜ್ಜೆಗುರುತುಳ್ಳುದಾಗಿ ಗೊತ್ತುಂಟೇ ?

ತಾಮ್ರಚೂಡನೆಂದನು:—ಪೂಜ್ಯನೆ! ಗೊತ್ತುಂಟು. ಏಕೆಂದರೆ ಆಯಿಲಿಯೊಂದೇ ಬರುವುದಿಲ್ಲ. ಅದು ಹಲವುಗುಂಪುಗೂಡಿ ನಾನು ನೋಡುವಾಗಲೇ ಅಲ್ಲಲ್ಲಿ ತಿರುಗಾಡುತ್ತ ಹೋಗುವುದು: ಬರುವುದು.

ಅಭ್ಯಾಗತನೆಂದನು:—ಒಂದು ಗುದ್ದಲಿಯಿದೆಯೋ ?

ಅವನೆಂದನು:—ಅದಕ್ಕೇನು? ಇದೆ. ಇದೊ ಎಲ್ಲಾ ಲೋಹಗಳನ್ನು ಸೇರಿಸಿ ಮಾಡಿರುವ ಗುದ್ದಲಿ.

ಅಭ್ಯಾಗತನೆಂದನು:—ಆದರೆ ಬೆಳಗಿನ ಸಮಯದಲ್ಲಿ ನೀನು

ನನ್ನೊಡನೆ ಇರು. ಏಕೆಂದರೆ, ಜನದ ಹೆಜ್ಜೆಗಳಿಂದ ಮಲಿನವಾದ ನೆಲದಲ್ಲಿ ಆಯಿಲಿಯ ಹೆಜ್ಜೆಗುರುತಂ ನೋಡಿಕೊಂಡು ಇಬ್ಬರೂ ಹೋಗೋಣ.

ನಾನೂ ಆಮಾತಂ ಕೇಳಿ ಚಿಂತಿಸಿದೆನು:—ಅಹಹ! ನಾನು ನಾಶವನ್ನೈದಿದೆನು. ಏಕೆಂದರೆ, ಇವನ ಸಾಭಿಪ್ರಾಯವಾದ ನುಡಿಗಳು ಕಿವಿಗೆ ಬೀಳುತಿವೆ. ದಿಟವಾಗಿ ಇವನು ನಿಧಿಯಂ ಕಂಡು ಹಿಡಿದಂತೆ ನಮ್ಮದುರ್ಗವನ್ನೂ ಕಂಡು ಹಿಡಿವನು. ಇದು ಇವನ ಸಾಭಿಪ್ರಾಯವಾದ ನುಡಿಯಿಂದಲೇ ವ್ಯಕ್ತವಾಗುವುದು. ಈ ವಿಷಯದಲ್ಲಿ ನೀತಿವಚನವುಂಟು:—

ಕಂ|| ಪುರುಷನನದೊರ್ಮ್ಮೆ ನೋಡಿಯೆ |
ವರಕೋವಿದರವನ ಸಾರಮಂ ನಿರ್ಧರಿಪರ್ ||
ಪರಿಕಿಸಿ ನೋೞ್ಪೊಡೆ ಚದುರರ್ |
ಕರದೊಳ್ ತೂಗುತ್ತೆ ಪಲದ ಪವಣಂ ತಿಳಿವರ್ ||೮೩||

ಸಂದಭಿಲಷಿತಮೆ ಪುರುಷನ |
ಪಿಂದಣ ಮುಂದಣ ಶುಭಾಶುಭಂಗಳನೊರೆಗುಂ ||
ಚೆಂದದ ನಡೆಗಳೆ ಬೋಧಿಪು |
ವಂದದ ಗಜ್ಜಸೂಡದಿರ್ದೊಡಂ ಮಜ್ಜನಪಿಲಂ ||೮೪||

ಬಳಿಕ ನಾನು ಹೆದರಿದವನಾಗಿ ಪರಿವಾರದೊಡನೆ ದುರ್ಗದ ಮಾರ್ಗವಂ ಬಿಟ್ಟು ಬೇರೆದಾರಿಯಿಂದ ಹೋಗಲು ತೊಡಗಿದೆನು. ಗುಂಪುಗೂಡಿ ನಾನು ಮುಂದೆ ಹೋಗುವಷ್ಟರಲ್ಲಿ ದೊಡ್ಡದಾದ ಒಂದು ಬೆಕ್ಕು ಇದುರಿಗೆ ಬಂದಿತು. ಅದೂ ಇಲಿಯ ಗುಂಪಂ ಕಂಡು ಅದರ ನಡುವೆ ಥಟ್ಟನೆ ನೆಗೆಯಿತು. ಬಳಿಕ ಆಯಿಲಿಗಳು

ಅಲ್ಪವಾದೊಂದು ದಾರಿಯಲ್ಲಿ ಹೋಗುತಿದ್ದ ನನ್ನಂ ಕಂಡು ಸಿಂದಿ ಸಿದುವು. ಬಳಿಕ ಹತಶೇಷಂಗಳಾದ ಕೆಲವು ಇಲಿಗಳು ರಕ್ತದಿಂದ ನೆಲವಂ ತೋಯಿಸುತ್ತ ಅದೇ ದುರ್ಗವಂ ಹೊಕ್ಕುವು. ಅಥವಾ ಈನುಡಿಯುಕ್ತವೆನಿಸಿರುವುದು:—

ವೃ॥ ಭೇದಿಸಿ ಪಾಶವಂ ಸೆಱೆಯುಮಂ ಬಲೆಯಂ ಪಱಿ ದಿಕ್ಕಿ ಬಲ್ಪಿನಿಂ। ದೈದಿ ವಿದೂರವಂ ಕೆಲದೆ ದಳ್ಳುರಿವೆರ್ಚಿದ ಕಾ ಡಿನತ್ತಣಿಂ ॥ ವ್ಯಾದರ ಬಾಣದಾ ಗುಱಿಗೆ ಸಿಲ್ಕದೆ ವೇಗದಿನೋ ಡುವೊರ್ವಿಗಂ। ಪೋದುದು ಬಿಬ್ದು ಕೂಪದೊಳೆ ತಾಂ ಬಿದಿ ಕೊಂ ಕಿರೆ ಯತ್ನಮೇವುದೋ ॥೮೫॥

ಬಳಿಕ ನಾನೊಬ್ಬ ಬೇರೆಕಡೆಗೆ ಹೋದೆ. ಮಿಕ್ಕುವು ತಿಳಿವ ಳಿಕೆಯಿಲ್ಲದುದರಿಂದ ಅದೇ ಮಾರ್ಗವಂ ಪೊಕ್ಕುವು. ಇಷ್ಟರೊ ಳಗೆ ಆ ಕೆಟ್ಟ ಸಂನ್ಯಾಸಿ ರಕ್ತದ ತೊಟ್ಟುಗಳಿಂದ ನನೆದ ನೆಲವಂ ಕಂಡು ಆದುರ್ಗಮಾರ್ಗದಿಂದಲೇ ಬಂದು ಬಳಿಗೈದಿದನು. ಬಳಿಕ ಗುದ್ದಲಿಯಿಂದ ಅಗಿಯಲಾರಂಭಿಸಿದನು. ಅಗಿಯುತಿದ್ದ ಅವನಿಗೆ ನಾನು ಯಾವುದರ ಮೇಲೆ ಸರ್ವಕಾಲದಲ್ಲಿಯೂ ವಾಸಿಸುತ್ತ ಯಾವುದರ ಔಷ್ಣ್ಯದಿಂದ ಮಹಾದುರ್ಗವನ್ನೂ ಸೇರಿದ್ದೆನೋ ಆನಿಧಿ ದೊರೆಯಿತು.

ಬಳಿಕ ಅಭ್ಯಾಗತನು ಸಂತೋಷಗೊಂಡು ತಾಮ್ರಚೂಡನಂ ಕುರಿತು-ಅಯ್ಯ ಮಹನೀಯನೆ! ಈಗ ನೀನು ನಿರಾಳಗೊಂಡು ನುಲಗು. ನಿಧಿಯ ಔಷ್ಣ್ಯದಿಂದ ಇಲಿ ನಿನಗೆ ಜಾಗರವನುಂಟು ಮಾಡುತಿದ್ದಿತು-ಎಂದು ನಿಧಿಯಂ ಕೈಕೊಂಡು ಆತನೊಡನೆ ಮಠ ದ ಕಡೆಗೆ ಹೊರಟುಹೋದನು.

ನಾನು ನಿಧಿಯಿಂದ ರಹಿತವಾದ ಆಯೆಡೆಗೆ ಬರುವಾಗಲೇ ಸೊಬಗಿಲ್ಲದ ದುಃಖಕರವಾದ ಆಯೆಡೆಯಂ ನೋಡುವುದಕ್ಕಾ ನನ್ನಿಂದಾಗಲಿಲ್ಲ. ಏನಮಾಡಲಿ ? ಎಲ್ಲಿಗೆ ಹೋಗಲಿ ? ನನ್ನ ಮನಸ್ಸು ಎಂತು ಅನಾಕುಲವಾಗಿರುವುದು ?—ಎಂದು ಚಿಂತಿಸುತ್ತಾ ಆ ಹಗಲಂ ಬಹುಕಷ್ಟದಿಂದ ಕಳೆದೆನು.

ಬಳಿಕ ಸೂರ್ಯನಸ್ತಂಗತನಾಗಲು, ನಾನು ಹೆದರಿ ಉತ್ಸಾಹ ರಹಿತನಾಗಿ ಗುಂಪುಗೂಡಿ ಆ ಮಠವಂ ಪ್ರವೇಶಿಸಿದೆನು. ಬಳಿಕ ನನ್ನ ಗುಂಪಿನ ಸೊಪ್ಪುಳನಾಲಿಸಿ ತಾಮ್ರಚೂಡನು ಮತ್ತೆ ಭಿಕ್ಷಾಪಾತ್ರೆಯಂ ಬೆತ್ತದಿಂ ಹೊಡೆಯಲು ತೊಡಗಿದನು. ಆ ಅಭ್ಯಾಗತನು ಅವನಂ ಕುರಿತು—ಮಿತ್ರನೆ! ಏನು ? ಈಗಲೂ ನಿರಾಳಗೊಂಡು ನಿದ್ರೆಮಾಡದೆ ಇರುವೆ ?—ಎನಲು, ಅವನು-ಪೂಜ್ಯನೆ ! ದುಷ್ಟವಾದ ಆಯಿಲಿ ಮತ್ತೆ ಗುಂಪುಕೂಡಿ ಬಂದಿದೆ. ಅದರ ಭಯಕ್ಕೋಸ್ಕರ ಬೆತ್ತದಿಂ ಭಿಕ್ಷಾಪಾತ್ರೆಯಂ ಹೊಡೆಯುವೆನು-ಎಂದನು.

ಅಭ್ಯಾಗತನು ನಕ್ಕು ಇಂತೆಂದನು:—ಸಖನೆ! ಹೆದರಬೇಡ. ಇವರ ಕ್ರೀಡೋತ್ಸಾಹವು ಹಣದೊಡನೆಯೆ ನಷ್ಟವಾಯಿತು. ಲೋಕದಲ್ಲಿ ಎಲ್ಲಾ ಪ್ರಾಣಿಗಳಗೂ ಇದೇಸ್ಥಿತಿ. ಈ ವಿಷಯ ಹೇಳದೆ.

ಕಂ. ಪರಮೋತ್ಸಾಹದಿನೆಂದುಂ ।
ಪುರುಷಂ ತಾನಿರ್ಪುದುಂ ಜನಂಗಳನುಂಅತಿ ಧಿ ॥
ಕ್ಕರಿಸುವುದುಂ ಬಿಂಕದೆ ನುಡಿ ।
ಯೊರೆವುದುಮೊದವಿರ್ಪ ಪಣದ ಬೆಂಬಲವಲ್ತೇ ॥೮೬॥

ಬಳಿಕ ನಾನು ಆಮಾತಂ ಕೇಳಿ ಕೋಪಗೊಂಡು ಭಿಕ್ಷಾ ಪಾತ್ರವಂ ಲಕ್ಷೀಕರಿಸಿ ವಿಶೇಷದಿಂ ನೆಗೆದಾಡುತ್ತ ಕೊನೆಗೆ ಅದಂ ಪಡೆಯುದೆಯೇ ನೆಲದಲ್ಲಿ ಬಿದ್ದೆನು. ಆ ಸದ್ದಂಕೇಳಿ ಆನನ್ನ ಶತ್ರು ನಕ್ಕು ತಾಮ್ರಚೂಡನಂ ಕುರಿತು ಇಂತೆಂದನು:—ಅಯ್ಯಾ! ನೋಡುನೋಡು ಆಶ್ಚರ್ಯವಂ:—

ಕಂ॥ ಪಣದಿಂ ಬಲ್ಲಿದರೆಲ್ಲರ್ ।
ಪಣವುಳ್ಳಂ ಲೋಕದಲ್ಲಿ ಪಂಡಿತನೆನಿಕುಂ ॥
ಪಣದಿಂ ಪರಿವರ್ಜಿತವಿಂ ।
ದೆಣಿಪ್ಪೊಡೆ ನಾಡಾಡಿಯೆನಿಸಿತೀಯಿಲಿ ನೋಡೈ ॥೮೭॥

ಆದಕಾರಣ ನೀನು ನಿಶ್ಶಂಕನಾಗಿ ಮಲಗು. ಇದರ ನೆಗೆತಕ್ಕೆ ಕಾರಣವಾದುದು ಆವುದೋ ಅದು ನಮ್ಮಿಬ್ಬರ ಕೈಯಂ ಸೇರಿತು. ಈ ನುಡಿ ಯುಕ್ತವಾದುದು:—

ಕಂ॥ ಭಾವಿಪ್ಪೊಡೆ ದಾಡೆಯಿಲ್ಲದ ।
ಪಾವಿನವೊಲ್ ಮದವಿಹೀನವಾದಾನೆಯವೊಲ್ ॥
ಭೂವಲಯದೆ ಪಣವಿಲ್ಲದೆ ।
ಜೀವಿಸುತಿರ್ಪಾತನುಂತೆ ಪೆಸರಾಂತಿರ್ಪಂ ॥೮೮॥

ಅದಂ ಕೇಳಿ ನಾನು ಮನದಲ್ಲಿ ಇಂತು ಚಿಂತಿಸಿದೆನು. ಈಗ ಬಂದು ಬೆರಲಷ್ಟನಾದರೂ ನೆಗೆವ ಶಕ್ತಿ ನನಗೆ ಇಲ್ಲ. ಆದಕಾರಣ ಹಣವಿಲ್ಲದವನ ಬಾಳು ನಿಂದ್ಯವು. ಈವಿಷಯದಲ್ಲಿ ಎಷ್ಟೋ ನೀತಿವಚನಂಗಳಿವೆ:—

ಕಂ॥ ಅರ್ಜವಣಮಿಲ್ಲದ ಮೇಣ್ ಧನ ।
ವಿರಹಿತನಾಗಿರ್ಪ ನರನ ಗೆಯ್ಮೆಗಳೆಲ್ಲಂ ॥

ಇರದೆ ವಿನಾಶಂಬಡೆಗುಂ ।
ಕಿಱುದೊಱೆಗಳ್ ಗ್ರೀಷ್ಮಕಾಲದೊಳ್ ನಶಿಸುವವೊಲ್ ॥

ಎಂತುಟು ಕಾಱಯುವಂಗಳ ।
ದೆಂತುಟು ಕಾಡೆಳ್ಗಳಂತೆ ಪೆಸರ್ವೆತ್ತಿರ್ಕುಂ ॥
ಅಂತುಟು ಬಡವರ್ಕಳ್ ಪೆಸ ।
ರಾಂತಿರ್ಪರ್ ಬಱಿದೆ ಬಗೆಯೆ ಫಲಮಿಲ್ಲವರಿಂ ॥೯೦॥

ತೊಳಗವು ಬಡವನೊಳರುಹಂ ।
ಗಳಪ್ಪ ಮುತ್ತಿನ ಗುಣಂಗಳರೆಯುಮುಳಂಬಂ ।
ನಳನಸಖಂ ಲೋಕಮನುಱೆ ।
ಬೆಳಗುವ ತೇಜದಿಂದೆ ಬೆಳಗುಗುಂ ಸಿರಿ ಗುಣವುಂ ॥೯೧॥

ಸಿರಿಯುಂ ಗಳಿಯಿಸಿ ಸೊಗದಿಂ ।
ದಿರುತೆ ಬಳಿಕ್ಕಂ ದರಿದ್ರನೆನಿಸುವ ಪುರುಷಂ ॥
ಮಱುಗುವನೆಂತಂತಿಳೆಯೊಳ್ ।
ಮಱುಗಂ ಗಡ ಸಾಜವಾದ ಬಡತನವುಳ್ಳಂ ॥೯೨॥

ಮರುಭೂಮಿಯೊಳವತರಿಸಿದ ।
ಪಿರಿದುಂ ಪುಱಿಗೊಱಿದ ಸುತ್ತಲೊಣಗಿದ ಮತ್ತುಂ ।
ಭರದಿಂ ಕಾಳ್ಕಿಚ್ಚುರಿಪಿದ ।
ತರುವಿನ ಬಾಳಿದವುವೊಳ್ಳೆರೆವಸ ಬಾಳಿಂ ॥೯೩॥

ಬಡತನವಾರ್ಪಿಲ್ಲದುದೆ ।
ಲ್ಲೆಡೆಯೊಳಮುದು ಶಂಕಿಸಲ್ಕೆ ತಕ್ಕುದೆನಿಕ್ಕುಂ ॥
ಬಡವಂ ತಾನುಪಕರಿಸಲ್ ।
ನಡೆತಂದೊಡಮವನ ತೊಱೆದು ಪೋಕುಂ ಲೋಕಂ ॥

ಕಡುವೆಳಗಿನ ಪಗಲಿನೊಳಂ ।
ಬಡತನವೆಂದೆನಿಪದೊಂದು ಕರ್ಗತ್ತಲೆಯಿಂ ॥
ಅಡಸಿದ ಪುರುಷಂ ಜನದಿದಿ ।
ರೆಡೆಯೊಳ್ ಸಿಂದಿದ್ರ್ದ ಮಹಹ ಗೋಚರನೆಸಿಸಂ॥೯೫॥

ಎಂದು ನಾನು ಗೋಳಟ್ಟು ಆ ಸಂನ್ಯಾಸಿ ತನ್ನ ಗಂಡಸ್ಥಳದಲ್ಲಿ ಒರಗಿಂಬಾಗಿಸಿಕೊಂಡ ಆ ನಿಧಿಯಂ ನೋಡಿ ಭಗ್ನೋತ್ಸಾಹನಾಗಿ ಬೆಳಗಾಗುವುದೂ ನನ್ನ ದುರ್ಗವಂ ಸೇರಿದೆನು. ಆಗ ನನ್ನ ಸೇವಕರು ಹೋಗುತ್ತ ಒಬ್ಬರಿಗೊಬ್ಬರು ಇಂತು ಮಾತನಾಡಿಕೊಳ್ಳುತಿದ್ದರು:—ಅಹಹ ! ಇವನು ನಮ್ಮ ಜೀವನವಂ ನಡೆಯಿಸಲು ಅಸಮರ್ಥನಾಗಿರುವನು. ಇವನಂ ಹಿಂಬಾಲಿಸಿದ ನಮಗೆ ಬೇಕ್ಕು ಮುಂತಾದವುಗಳಿಂದ ವಿಪತ್ತುಗಳು ಬರುವುತ್ತಲೆ ಇರುವುವು. ಅದರಿಂದಿವನಂ ಓಲೈಸುವುದರಿಂದೇನು ? ಏಕೆಂದರೆ—

ಕಂ॥ ಪೊಡವಿಯೊಳದಾವನತ್ತಣಿ ।
ಮೆಡರ್ಗಳ ದೊರೆಕೊಳ್ವುದಲ್ಲದೊದವದೊ ಲಾಭಂ ॥
ಒಡೆಯನನವನಂ ತೊಱಗ ।
ಳೊಡನೆಯ ತಾಂ ದೂರದಿಂದಮೇ ಬಿಡವೇಱ್ಕುಂ ॥೯೬॥

ಇಂತೆಂಬ ಅವರ ನುಡಿಗಳನಾಲಿಸುತ್ತ ಆದುರ್ಗವಂ ಪ್ರೇಕ್ಷಿಸಿದೆನು. ನನ್ನ ಇದಿರಿಗೆ ಮತ್ತಾವನೂ ಬಾರದಿರುವಷ್ಟರಲ್ಲಿ ನಾನು ಇಂತಾಲೋಚಿಸಿದೆನು:—ಈ ಬಡತನವು ಬಹುನಿಂದ್ಯವು. ಈ ನುಡಿ ಯುಕ್ತವೆನಿಸಿರುವುದು;—

ಕಂ॥ ಬಱವನೆನಿಪ್ಪಂ ಬಡವಂ ।
ಬಱಿದೆಂದೆನಿಸುವುದು ಮಕ್ಕಳಿಲ್ಲದ ಭೋಗಂ ॥

ಬಱಿದಶ್ರೋತ್ರಿಯಮುಂ ತಿಥಿ ।
ಬಱಿದೆನಿಕುಂ ದಕ್ಷಿಣಾವಿಹೀನಂ ಜನ್ನಂ ॥೯೭॥

ಇಂತು ನಾನು ಚಿಂತಿಸುತಿರಲು, ನನ್ನ ಸೇವಕರು ನನ್ನ ಹಗೆಗಳಿಗೆ ಸೇವಕರೆನಿಸಿದರು. ಅವರೂ ಏಕಾಕಿಯಾದ ನನ್ನಂ ನೋಡಿ ಅಣಕಿಸುತಿದ್ದರು. ಬಳಿಕ ಏಕಾಕಿಯಾದ ನಾನು ಯೋಗ ನಿದ್ರೆಯಂ ಹೊಂದಿ ಮತ್ತೆ ಆಲೋಚಿಸಿದೆನು.

ಎಂತೆಂದರೆ:—ಆಬಡಸಂನ್ಯಾಸಿಯಂ ಆಶ್ರಯಿಸಿ ಅವನ ಗಂಡಸ್ಥಲಕ್ಕೆ ಒರಗಿಂಬೆನಿಸಿದ ಹಣದ ಪೆಟ್ಟಿಗೆಯಂ ಮೆಲ್ಲಮೆಲ್ಲನೆ ಕಡಿದು ಭಂಗಿಸಿ ಅವನು ನಿದ್ರೆಮಾಡುತಿರುವಾಗ ಆ ಹಣಮಂ ನನ್ನ ದುರ್ಗಕ್ಕೆ ತಂದು ಸೇರಿಸಬೇಕು. ಆ ಹಣದ ಪ್ರಭಾವ ದಿಂದ ಮತ್ತೆ ನನಗೆ ಮೊದಲಂತೆ ದೊರೆತನ ದೊರೆವುದು. ಬಡ ತನದಿಂದ ಅನೇಕಾನರ್ಥಗಳುಂಟಾಗುವುವು. ಈ ವಿಷಯ ಹೇಳಿದೆ:-

ಕಂ॥ ಬಡವರ್ ಬರ್ದುಕಿರೆಯುಂ ಮೃತಿ ।
ವಡೆದರನೆಂತಂತು ನಂಟರುಂ ಬಗೆವುದಱಿಂ ॥
ಬಡತನವೆಂಬುದು ದುಗುಡಮು ।
ನೊಡರಿಪುದಲ್ಲದೆ ಬರಿಕ್ಕುಮಪಮಾನಮುಮಂ ॥೯೮॥
ಕಡುದೈನ್ಯಕೆ ತಾಂ ಭಾಜನ ।
ವಡಸಿದ ಧಿಕ್ಕಾರಕಕ್ಕಟಾ ನೆಲೆದಾಣಂ ॥
ಅಡಿಗಡಿಗೆಡರ್ಗೆಡೆಯೆನಿಪಂ ।
ಬಡತನದಿಂ ಕಂದುವಡೆದ ಮನುಜಂ ಜಗದೊಳ್ ॥೯೯॥
ಪಿರಿದುಂ ಬಡತನವಡಸಿದ ।
ನರನಿಂ ನಾಣ್ಚಿದಪರವನ ನಂಟರ್ ಮತ್ತಂ ॥

ಮುಱಿಗೈದಪರನುಬಂಧಮು |
ನರರೇ ತಾಂ ಪಗೆಗಳಾದಪರ್ ಕೆಳೆಯುಕ್ಕರ್ಗಳ್ ||೧೦೦||
ಧರೆಯೊಳ್ ಬಡತನ ವೆಂಬುದು |
ಪರಿಕಿಸುವೊಡೆ ಪರಿಭವಡೆದ ಲಾಘವವೆ ವಲಂ ||
ಕಿರಿದುಮುಪಾಯಂಗಳ ಮನೆ
ಮರಣದ ಪರ್ಯ್ಯಾಯನಾಮವೆಂದೆನಿಸಿರ್ಕ್ಕುಂ ||೧೦೧||
ಪುದಿದಾಡಿನ ಪದಧೂಳಿಯು |
ನೊದವಿದ ಕಸಕಿಲ ರಜಸ್ಸುಮಂ ದೀವಿಗೆವಂ ||
ಚದ ಪಡಿನೆೞಲಂ ಶಾಸ್ತ್ರದ |
ವಿದಿಗಂಜುವರುೞಿವತೆಱದೆ ಬಡವನನುೞಿವರ್ ||೧೦೨||
ಎಂದಾನುಮಾವುದಾನುಮ |
ದೊಂದೆಸಕಕೆ ಬರ್ಕ್ಕುಮುೞಿದ ಶೌಚದಮಣ್ಣುಂ ||
ಎಂದುಂ ಬಡತನವೊಂದಿದ |
ನಿಂದೆಲ್ಲನಿತುಂ ಪ್ರಯೋಜನಂ ಪೆಱರ್ಗಿಲ್ಲಂ ||೧೦೩||
ಬಡತನವೊಂದಿದವಂ ತಾಂ |
ಕುಡಲ್ಕೆ ಧನಿಗೃಹಕೆ ಪೋದೊಡಂ ತಿರಿಯಲಿವಂ |
ನಡೆತಂದನೆಂಬ ಹಾಸ್ಯ |
ಕ್ಕೆಡೆಯೆನಿಪಂ ಬಡವನಿರವದೇಂ ನಿಂದಿತಮೋ ||೧೦೪||

ಆದಕಾರಣ ವಿತ್ತವನಪಹರಿಸಿದಾತನದೆಸೆಯಿಂದೆನಗೆ ಒಂದು ವೇಳೆ ಮೃತಿಯುಂಟಾದರೂ ಲೇಸೆನಿಸುವುದು. ಏಕೆಂದರೆ:—

ಕಂ|| ಪೆಱರೆಸಗಿದ ನಿಜಧನದಪ |
ಹರಣವನೀಕ್ಷಿಸಿ ತನತ್ತು ಪರಿಣಾಮನಾವಂ ||

ಪೊರೆಯುತುಮಿರ್ದಪನವನಾ ।
ಚರಿಪ ಜಲಾಂಜಲಿಯು ಪಿತರರ್ಗಂ ಕೈಕೊಳ್ಳರ್ ॥

ಅಂತಲ್ಲದೆ—

ತುಱುಗಳ್ಗಂ ಪಾರ್ವರ್ಗ್ಗಂ ।
ಪೆಱರಿಂ ಕಳ್ದುಯ್ವ ಪೆಣ್ಬೊಣಂಗಳ್ಗಂ ತಾಂ ॥
ಥುರದೊಳದಾವಂ ಹರಣಂ ॥
ದೆಱುವನವಂಗಕ್ಕುಮಕ್ಷಯಂ ಲೋಕಂಗಳ್ ॥೧೦೭॥

ಎಂದು ನಾನು ನಿಶ್ಚಯಿಸಿ ರಾತ್ರಿ ಅಲ್ಲಿಗೆ ಹೋಗಿ ಅವನು ನಿದ್ರೆಮಾಡುತಿದ್ದ ಪೆಟ್ಟಿಗೆಗೆ ರಂಧ್ರವಂ ಮಾಡಿದೆನು. ಅಷ್ಟರಲ್ಲಿ ಆ ಕೆಟ್ಟ ಸಂನ್ಯಾಸಿ ಎಚ್ಚರಗೊಂಡು ಬೆತ್ತದಿಂದ ನನ್ನ ತಲೆಯ ಮೇಲೆ ಹೊಡೆದನು. ಇನ್ನೂ ಆಯುಸ್ಸು ಇದ್ದುದರಿಂದ ಬಹು ಕಷ್ಟಪಟ್ಟು ಈಚೆಗೆ ಹೊರಟುಬಂದೆ. ನಾನು ಆ ಸುಖದುಃಖ ವೆಲ್ಲವನ್ನೂ ಅನುಭವಿಸಿ ಕೇವಲವಿಷಾದಯುಕ್ತನಾಗಿ ಈ ಮಿತ್ರ ನಿಂದ ನಿನ್ನ ಬಳಿಗೆ ಉಯ್ಯಲ್ಪಟ್ಟಿರುವೆನು. ಇದು ನನ್ನ ವೈರಾ ಗ್ಯಕ್ಕೆ ಕಾರಣ.

ಮಂಥರಕವೆಂದಿತು:—ಪ್ರಿಯನೆ! ಸಂದೇಹವಿಲ್ಲದೆ ಇವನು ಮಿತ್ರನೆನಿಸುವನು. ತಾನು ಹಸಿವಿನಿಂದ ಬಳಲಿದ್ದರೂ ಭಕ್ಷಣೀ ಯನೆನಿಸಿದ ಶತ್ರುವಾದ ನಿನ್ನ ಬೆನ್ನಮೇಲೆ ಕುಳ್ಳಿರಿಸಿಕೊಂಡು ಬಂದನು. ದಾರಿಯಲ್ಲಿಯೂ ನಿನ್ನಂ ತಿನಲಿಲ್ಲ. ಇಂತಹ ಮಿತ್ರನಂ ಅವಶ್ಯವಾಗಿ ಪಡೆಯಬೇಕು. ಹೇಳದೆ:—

ಕಂ॥ ಧನವೊದವಿರೆಯುಮುದಾವನ ।
ಮನವಾವಗವೊಂದದಿಕ್ಕೃವೋ ವಿಕೃತಿಯನಾ ॥

ತನೆ ಗಡ ಸಖನೆಂದೆನಿಸಂ ।
ಜನವಂತಹ ಪರಮಸಖನ ಪಡೆಯಲ್ವೇಳ್ಕುಂ ॥೧೭॥

ಸಂತರ್ ಸಂದೆಗವಿರದವೊ ।
ಲಿಂತಹ ಚಿಹ್ನಂಗಳಿಂದೆ ನೇಹಿಗರಂ ತಾ ॥
ವೆಂತುಂ ಪರೀಕ್ಷಿಸಲ್ವೇ ।
ಳ್ಕುಂ ತಿಳಿದರ್ ಹೋಮವಹ್ನಿಯಂ ಪರಿಕಿಪವೋಲ್ ।

ಅಂತಲ್ಲದೆ—

ಬಂದಾಪತ್ಕಾಲದೊಳನು ।
ವಿಂದಾವಂ ಮಿತ್ರನೆನಿಪನಾತನೆ ಮಿತ್ರಂ ॥
ಸಂದಣಿಸಿರೆ ಕಟ್ಟೈಸಿರಿ ।
ಯಂದೇಂ ಪ್ರಿಯಮಿತ್ರನೆನಿಸನೇ ದುರ್ಜನನುಂ ॥೧೮॥

ಮಾಂಸಾಶಿಗಳಾದ ಕಾಗೆಗಳೊಡನೆ ಜಲಚರಂಗಳಿಗೆ ಕೆಳೆತನವೆಂಬುದು ನೀತಿವಿರುದ್ಧವಾದುದು. ಆದರೂ ಇವನ ವಿಷಯದಲ್ಲಿ ನನಗೂ ನಂಬುಗೆಯುಂಟಾಯಿತು.

ಕಂ॥ ಆವಂಗಂ ಕೇವಲರಿಪು ।
ಕೇವಲಸನ್ಮಿತ್ರನೆನಿಪ ನಾವನುಮಿಲ್ಲಂ ॥
ಭಾವಿಸೆ ರಿಪುವುಂ ಮಿತ್ರಂ ।
ತಾವೆಸಪೆಸಕಂಗಳಿಂದೆ ತಿಳಿಯಲ್ಪಡುಗುಂ ॥೧೯॥

ಈವಿಷಯದಲ್ಲಿ ಹೆಚ್ಚು ಹೇಳತಕ್ಕುದೇನಿದೆ ? ನಿನಗೆ ಸ್ವಾಗತವೆ ? ಸ್ವಗೃಹದಂತೆ ಭಾವಿಸಿ ಈ ಸರಸ್ತೀರದಲ್ಲಿ ವಾಸಮಾಡಿಕೊಂಡಿರು. "ಧನನಾಶವಾಯಿತು, ವಿದೇಶವಾಸವೊದವಿತು" ಎಂದು ಈವಿಷಯದಲ್ಲಿ ನೀನು ಸಂತಪಿಸಬೇಡ. ಏಕೆಂದರೆ—

ಕಂ॥ ಜಲದದ ನೆೞಲುಂ ಖಲಜನ ।
ದೊಲವುಂ ಸಂಸಿದ್ಧವನ್ನಮುಂ ಪೆಂಡಿರುಮು ।
ಜ್ಜ್ವಲಯೌವನಮುಂ ಧನಮುಂ ।
ನೆಲವಲ್ಲತ್ಯಲ್ಪಕಾಲಭೋಗ್ಯವೆನಿಕ್ಕುಂ ॥೧೧೧॥

ಅವರಿಂವಲೇ ಜಿತೇಂದ್ರಿಯರಾದ ವಿವೇಕಿಗಳು ಧನಾಶೆಯಂ ಮಾಡುವುದಿಲ್ಲ.

ಕಂ॥ ಕಡು ಕೂಡಿಸಿಟ್ಟ ಮೋಹ್ ತ ।
ನ್ನೊಡಲಸುವ್ರೊಲ್ ಪೊರೆದ ಚಣಮುಮುಗಲಿಸದರ್ಥಂ ॥
ನಡೆತಾರದು ಮನುಜಂ ಜವ ।
ನೆಡೆಯುಂ ಸಾರ್ವಂದು ಬೆನ್ನಸೈವಜ್ಜೆಯುಮಂ ॥೧೧೨॥

ಮತ್ತು:—

ಜಲದೊಳ್ ಮೀಂಗಳ್ ಮತ್ತಂ ।
ನೆಲದೊಳ್ ಪುಲಿವೊದಲೆನಿಪ್ಪ ದುಷ್ಟಮೃಗಂಗಳ್ ।
ಸಲೆ ಬಾನೊಳ್ ವಿಹಗಂಗಳ್ ।
ಪಲವುಂ ತಿಂಬಂತೆ ಧನಿಯನೆತ್ತಂ ತಿಂಬರ್ ॥೧೧೩॥

ಅವನೀಪಾಲಂ ಧನವು ।
ಳ್ಳವನನದೋಷನುಮ ನಿರದೆ ದೋಷಂಗೊಳಿಪಂ ॥
ತವೆ ದೋಷಾನ್ವಿತನಾದೊಡ ।
ಮವನಿಯೊಳೆತ್ತಂ ನಿರಾಳಮಿರ್ಪಂ ಬಡವಂ ॥೧೧೪॥

ಕಷ್ಟಂ ಪಣಮುಂ ಗಳಿಪ್ಪುದು ।
ಕಷ್ಟಂ ಗಳಿಸಿದುದನ್ನೈದೆ ಕಾಪಿಡುವುದು ಮೋಹ್ ।
ನಷ್ಟಮುದಾದೊಡೆ ಕಷ್ಟಂ ।
ಕಷ್ಟಂ ವ್ಯಯಿಸಿದೊಡೆ ಪಣವೆ ಬಹುಕಷ್ಟಕರಂ ॥೧೧೫॥

ದ್ರವಿಣಮನಾರ್ಜಿಸಲಾರ್ಪಾ ।
ಮನೆಡರ್ಗಳನೆಗ್ಗಮೀಜನಂ ಸೈಸುಗುಮೋ ॥
ಅವಜ್ಞೆಗಳ್ನ್ಯಜ್ಞೆಗಳೊಂದಂ ।
ಶಮನೊಂದಿದೊಡಂ ಮುಮುಕ್ಷು ಮೋಕ್ಷಂಬಡೆವಂ ।

ಅಲ್ಲದೆ ನೀನು "ವಿದೇಶವಾಸನಿಮಿತ್ತಕವಾದ ನಿರ್ವೇದವಂ ಪಡೆಯಲಾಗದು. ಏಕೆಂದರೆ—

ವೃ॥ ವರಧೃತಿಗಾವುದಯ್ಯ ನಿಜದೇಶಮದಾವುದೊ ತಾಂ ವಿದೇಶಮುಂ । ತೆರಳ್ದಪನಾವದೇಶಕದನೇ ಬಸವಾಗಿಪನೊಯ್ಯನಾರ್ಪಿನಿಂ ॥ ಸ್ಫುರಿಸುವದಾಡೆ ಕೂರುಗುರ್ಗಳಾಂತ ಸಟಾಳಿಯುಮಸಾಗಲಾಯುಧಂ । ಹರಿ ಮಿಱುಪಾನೆಯುಂ ರಕುತದಿಂ ತಣಿಗುಂಗಡ ಪೊಕ್ಕ ಕಾಡಿನೊಳ್ ॥೧೧೩॥

ಹಣವಿಲ್ಲದವನು ಪರದೇಶಕ್ಕೆ ಹೋದರೂ ಪ್ರಜ್ಞಾವಂತನಾಗಿದ್ದರೆ ಅವನು ಎಂತೂ ದುಃಖಪಡನು. ಕೇಳು—

ಕಂ॥ ನೆಱೆಬಲ್ಲಿದರ್ಗಾವುದು ಬ ।
ಲ್ಯೋಱ ಮೇಣ್ ವ್ಯವಸಾಯಿಗಳ್ಗದಾವುದು ದೂರಂ ।
ಪರದೇಶಮದಾವುದು ಬುಧ ।
ವರರ್ಗೆ ಸವಿನುಡಿಯ ನುಡಿವವರ್ಗರಿಯಾವಂ ॥೧೧೪॥

ಪ್ರಜ್ಞಾನಿಧಿಯಾದ ನೀನು ಸಾಮಾನ್ಯಪುರುಷನಂತಲ್ಲ. ನಿನ್ನಲ್ಲಿ ಲಕ್ಷ್ಮಿ ತಾನಾಗಿ ನೆಲಸುವಳು. ಈ ವಿಷಯ ಹೇಳಿದೆ—

ಕಂ॥ ಪರಮೋತ್ಸಾಹನನೆಸಕದ
ಪರಿಯೞಿದನಲಸನೆಸಪನಂ ದುಗುಡದೆ ಸಿ ।

ಕ್ಕಿರದನನದಟಿಗನಂ ಸಿರಿ ।
ಯಿರಲಱಿಸಿದಪಳ್ ಕೃತಜ್ಞನಂ ನೇಹಿಗನಂ ॥೧೧೯॥

ಅಲ್ಲದೆ ಹಣವು ಪ್ರಾಪ್ತವಾಗಿದ್ದರೂ ಕರ್ಮವಶದಿಂದ ನಾಶಹೊಂದುವುದು. ಇಂದಿನವರೆಗೆ ಆಹಣವು ನಿನ್ನದಾಗಿದ್ದಿತು. ತನ್ನದಲ್ಲವಾದರೆ ಒಂದು ಮುಹೂರ್ತವೂ ತಾನುಪಭೋಗಿಸಲು ಸಾಧ್ಯವಿಲ್ಲ. ತಾನಾಗಿ ಬಂದುದಾದರೂ ದೈವದಿಂದ ಅಪಹರಿಸಲ್ಪಡುವುದು.

ಕಂ॥ ಧನವುಂ ಮಿಗೆ ಗಟಿಯಿಸಿ ತಾ ॥
ನಿನಿತುಂ ಭೋಗಿಸದೆ ಜೀವಿಪಂ ಗಡ ಗಾಂಪಂ ॥
ವನವುಂ ಪ್ರೋಕ್ಕತಿಘನವುಂ ।
ಧನಭೋಗವದಿಲ್ಲದಿರ್ದ ಸೋಮಿಲಕನವೋಲ್ ॥

ಹಿರಣ್ಯಕವೆಂದಿತು:—ಇದೆಂತು ?

ಅದೆಂದಿತು:— 037084

ಕ ಥೆ ೪.

ಒಂದೂರಿನಲ್ಲಿ ಸೋಮಿಲಕನೆಂಬ ನೇಯಿಗೆಯುವನಿದ್ದನು. ಅವನು ಬಹುವಿಧವಾದ ಪಟ್ಟೆಗಳಿಂದ ಕಂಗೊಳಿಸುವ ರಾಜಯೋಗ್ಯಗಳಾದ ವಸ್ತ್ರಂಗಳಂ ಯಾವಾಗಲೂ ನೇಯುತಿದ್ದನು. ಆದರೆ ಅಂತು ಪಲತೆರದ ಪಟ್ಟೆಯ ವಸ್ತ್ರಂಗಳಂ ರಚಿಸುವುದರಲ್ಲಿ ನಿಪುಣನಾಗಿದ್ದರೂ ಅವನಿಗೆ ಅಶನವಸನಂಗಳಿಗಿಂತ ಹೆಚ್ಚಾದ ಧನವು ಸ್ವಲ್ಪವೂ ದೊರೆಯುತಿರಲಿಲ್ಲ. ಅಲ್ಲಿ ಇತರರಾದ ಸಾಮಾನ್ಯರೆನಿಸಿದ ನೇಯಿಗೆಯುವರು ಒರಟಾದ ಬಟ್ಟೆಗಳಂ ರಚಿಸುತ್ತ ಮಹಾಧನಿಕರಾಗಿದ್ದರು.

ಸೋಮಿಲಕನು ಅವರಂ ನೋಡಿ ತನ್ನ ಮಡದಿಯಂ ಕು ರಿತು ಇಂತೆಂದನು:—

ಎಲೆ ಪ್ರಿಯೆ! ನೋಡು. ಈ ನೇಯಿಗೆಯವರು ಒರಟಾದ ವಸ್ತ್ರರಚನೆಯುಳ್ಳವರಾಗಿದ್ದರೂ ಧನಕನಕಸಮೃದ್ಧರಾಗಿರುವರು. ಈ ಸ್ಥಳದಲ್ಲಿ ನನಗೆ ಧಾರಣೆಯಿಲ್ಲ. ಅದರಿಂದ ಧನಸಂಪಾದನೆ ಗೋಸ್ಕರ ಇನ್ನೊಂದು ಸ್ಥಳಕ್ಕೆ ಹೋಗುವೆನು.

ಅವಳೆಂದಳು:—

ಎಲೆ ಪ್ರಿಯನೆ! "ಧನಸಂಪಾದನೆ ಮತ್ತೊಂದು ಸ್ಥಳದಲ್ಲಿ ಆಗುವುದು. ತಮ್ಮ ಸ್ಥಳದಲ್ಲಿ ಆಗುವುದಿಲ್ಲ" ಎಂಬುದು ಸುಳ್ಳು. ಈವಿಷಯ ಹೇಳದೆ:—

ಕಂ॥ ಚಡುಪುಡನೆ ಬಾಂಗೆ ನೆಗೆವುವು ।
ಪೊಡವಿಗೆ ಬಿಳ್ದಪ್ಪವು ಪಕ್ಕಿ ಯಾದೊಡಮುಹಹಾ ॥
ಪಡೆಗುಂ ತಾಂ ಪಡೆವನಿತಂ ।
ಕುಡದಿರ್ದುದು ತನ್ನ ಬೞಿಯನೆಯ್ದುವುದಿಲ್ಲಂ ॥ ೧೨೧॥

ಅಂತಲ್ಲದೆ—

ಆಗದುದಾಗದದಾವಗ ।
ಮಾಗುವುದಾಗುವುದು ಯತ್ನಮಂ ಗೆಯ್ಯದೊಡಂ ।
ಆಗುವ ಯೋಗವದಿಲ್ಲದೊ ।
ಡಾಗಳೆ ಪೋಗುವುದು ಕೈಗೆ ಬಂದೊದಪಿದುದುಂ ॥ ೧೨೨॥

ಮುಂದಿರ್ಪ ಸಾಸಿರಾಕಳ ।
ಬೃಂದದೆ ಕಱು ತನ್ನ ತಾಯನೆಯ್ದುವ ತೆಱದಿಂ ।
ಪಿಂದಣಜನ್ಮದ ಕರ್ಮಂ ।
ಕುಂದದೆ ಕರ್ತಾರನಂ ದಲೆಯ್ದುವುದಕ್ಕೇ ॥ ೧೨೩॥

ಮಲಗುವುದುಂ ತಾನೊಡನೆಯೆ ।
ಮಲಂಗುಗುಂ ಗಮಿಸೆ ಬಿಡದೆ ಬೆನ್ನನೆ ಗಮಿಕುಂ ।
ನಿಲೆಯೊಡನಿಲ್ಗುಂ ತಾನುಂ ।
ನೆಲದಲ್ಲೊಡರಿಸಿದ ನರರ ಪಿಂದಣಕರ್ಮಂ ॥೧೨೪॥

ಎಂತುಟು ನೆೞಲುಂ ಬಿಸಿಲುಂ ।
ಸಂತತ ಮಗಲದೆ ಪರಸ್ಪರಂ ಸೇರ್ದಿರ್ಕುಂ ॥
ಇಂತುಟು ಕರ್ಮಂ ಕರ್ತೃವು ।
ಮೆಂತುಂ ಪಿಂಗದೆ ಪರಸ್ಪರಂ ಸೇರ್ದಿರ್ಕುಂ ॥೧೨೫॥

ಆದಕಾರಣ ಇಲ್ಲಿಯೇ ಉದ್ಯೋಗವಂ ಮಾಡು.

ಸೋಮಿಲಕನೆಂದನು:—ಪ್ರಿಯೆ! ನಿನ್ನ ಮಾತು ಯುಕ್ತವಲ್ಲ. ಪ್ರಯತ್ನವಿಲ್ಲದೆ ಕಾರ್ಯವು ಫಲಿಸುವುದಿಲ್ಲ. ಈವಿಷಯ ಹೇಳಿದೆ:—

ಕಂ॥ ಕರತಲವೆರಡುಂ ಕೂಡದೆ ।
ಮಿರೆ ತಾಳವದೊಂದಱಿಂದೆ ಸಂಭವಿಸದವೋಲ್ ॥
ನೆಪೆವುದ್ಯೋಗವಿಲ್ಲದಿರಲ್ ।
ಧರೆಯೊಳ್ ಸಂಭವಿಸದಲ್ತೆ ಕರ್ಮದ ಫಲವುಂ ॥೧೨೬॥

ನಿರಿಕಿಸು ಕರ್ಮದ ವಶದಿಂ ।
ದೊರೆಕೊಂಡೊಡಮುಣ್ಬಕಾಲದಲ್ಲಣಿಸದು ತಾಂ ।
ಕರದುದ್ಯೋಗವಿಲ್ಲದೆ ಮಾ ।
ಸ್ಸಿರೆ ಬಾಯೊಳಗನ್ನದೆಂತುಮೇಂ ಪೋದಪುದೇ ॥

ಅಂತಲ್ಲದೆ—

ಸಿರಿ ಪೊರ್ದುಗುಮೊಸಗುವ ನರ ।
ವರನಂ ಬಿದಿಯೀಯುಮೆೞ್ಕುಮೆಂಗುಂ ಕುಜನರ್ ॥

ಇರದಿಕ್ಕ ಬಿಡಿಯನಣ್ಮೆಲೆ ।
ತರದಿಂ ಯತ್ನಿಪೊಡವಾಗದಿರ್ದೊಡೆ ತಪ್ಪೇಂ ॥೧೨೮॥

ಫಲಿಪುದು ಯತ್ನದೆ ಕರ್ಮಂ
ಫಲಿಸದುಗಡ ಬಱಿದೆ ನಿಜಮನೋರಥದಿಂದಂ ॥
ಮಲಗಿದ ಸಿಂಗದ ಬಾಯೊಳ್ ।
ಸಲೆ ತಾಂ ನಡೆತಂದು ಬೀೞವಲ್ತೆ ಮಿಗಂಗಳ್ ॥೧೨೯॥

ಭೂರಮಣನೆ ಯತ್ನಿಸದಿರೆ ।
ಯೋರಂತು ಮನೋರಥಂಗಳೀಡೇಱುವು ಕೇಳ್ ॥
ಧೀರತೆಯಿಲ್ಲದರಾವುದು
ಧಾರಿಣಿಯಲ್ಲಾಗತಕ್ಕುವಕ್ಕುಮದೆಂಬರ್ ॥೧೩೦॥

ಜಗದೊಳ್ ಸ್ವಶಕ್ತಿಯಿಂದು ।
ಜ್ಜುಗಿಪನ ಕೃತಿ ಫಲಿಸದಿರ್ದೊಡಾ ವಿಷಯದೆ ನಿಂ ।
ದೆಗವಂ ಗುಱಿಯೆನಿಸಂ ಬಿಡಿ ।
ಮಿಗೆ ತತ್ಪೌರುಷಮನಿರದೆ ಮುಚ್ಚಿದ ಕತದಿಂ ॥೧೩೧॥

ಅದರಿಂದ ಅವಶ್ಯವಾಗಿ ದೇಶಾಂತರಕ್ಕೆ ಹೋಗಬೇಕು—ಎಂದು ನಿಶ್ಚಯಿಸಿ ವರ್ಧಮಾನವೆಂಬ ಪುರವಂ ಸೇರಿದನು. ಅಲ್ಲಿಯೂ ಮೂಱುವರ್ಷ ಇದ್ದು ಮುನ್ನೂರುವರಹಂಗಳಂ ಸಂಪಾದಿಸಿ ಮತ್ತೆ ತನ್ನ ಸ್ಥಳವಂ ಕುರಿತು ಹೊರಟನು. ಅರ್ಧಮಾರ್ಗದೊಳಡವಿಯಲ್ಲಿ ಬರುತಿರುವಾಗ ಸೂರ್ಯನು ಅಸ್ತಂಗತನಾದನು. ಆಗ ಅವನು ದುಷ್ಟಮೃಗಗಳಿಗೆ ಅಂಜಿ ಒಂದು ದೊಡಾಲವಮರವನೇರಿ ಅಲ್ಲಿಯೇ ಮಲಗಿಕೊಂಡನು. ಅರ್ಧರಾತ್ರಿಸಮಯವಾಗುವುದೂ ಕನಸಿನಲ್ಲಿ ರೌದ್ರಾಕಾರರಾದ ಇಬ್ಬರು

ಪುರುಷರು ಒಬ್ಬರಿಗೊಬ್ಬರು ಇಂತು ಮಾತನಾಡುತಿದ್ದುದಂ ಕೇಳಿದನು. ಅವರಲ್ಲಿ ಒಬ್ಬನೆಂದನು:—

ಎಲೆ ಕರ್ತೃವೆ! ನೀನು ಚೆನ್ನಾಗಿ ಅರಿಯೆಯಾ? ಈ ಸೋಮಿಲಕನಿಗೆ ಅಶನವಸನಂಗಳಿಗಿಂತ ಹೆಚ್ಚಾದ ಸಂಪತ್ತು ಉಂಟಾಗದು. ಆದರೂ ಅದೇನು ನೀನು ಇವನಿಗೆ ಮುನ್ನೂರು ವರಹಗಳಂ ಕೊಟ್ಟೆ?

ಅವನೆಂದನು:—ಎಲೆ ಕರ್ಮಪುರುಷನೆ! ಉದ್ಯೋಗವುಳ್ಳವರಿಗೆ ನಾನು ಅವಶ್ಯವಾಗಿ ಕುಡಬೇಕು. ಅದರ ಪರಿಣಾಮವು ನಿನ್ನಧೀನವಾದುದು.

ಇಷ್ಟರಲ್ಲಿ ಈ ನೇಯಿಗೆಯುವನು ಎಚ್ಚರಗೊಂಡು ತನ್ನ ಹಣದ ಗಂಟಂ ನೋಡಿಕೊಂಡನು. ಅದು ಬರಿದಾಗಿದ್ದಿತು. ಬಳಿಕ ಅವನು—ಅಹಹ! ಇದೇನು? ಬಹುಕಷ್ಟದಿಂದ ಸಂಪಾದಿಸಿದ ಹಣವು ಆಕಸ್ಮಿಕವಾಗಿ ಎಲ್ಲಿಯೋ ಮಾಯವಾಯಿತು. ವ್ಯರ್ಥಶ್ರಮವುಳ್ಳವನೂ ಕೇವಲನಿರ್ಧನನೂ ಆದ ನಾನು ಇನ್ನು ನನ್ನ ಮಡದಿಗೂ ಸ್ನೇಹಿತರಿಗೂ ಮುಖವನೆಂತು ತೋರಿಸಲಿ?—ಎಂದು ಚಿಂತಿಸಿ ಮತ್ತೆ ಅದೇ ಊರಿಗೆ ಹೋದನು. ಅಲ್ಲಿ ಒಂದುವರ್ಷದಲ್ಲಿಯೇ ಐನೂರು ವರಹಗಳಂ ಸಂಪಾದಿಸಿ ಮತ್ತೆ ತನ್ನ ಊರಿಗೆ ಹೊರಟನು. ಅರ್ಧಮಾರ್ಗದಲ್ಲಿ ಅಡವಿಯಲ್ಲಿ ಬರುತಿರುವಾಗ ಸಂಜೆಯಾಯಿತು. ಆಯಾಸವುಳ್ಳವನಾದರೂ ದ್ರವ್ಯನಾಶಭಯದಿಂದ ವಿಶ್ರಮಿಸಿಕೊಳಲಿಲ್ಲ. ತನ್ನ ಮನೆಯಂ ಸೇರಬೇಕೆಂಬ ಉತ್ಕಂಠತೆಯಿಂದ ತ್ವರೆಗೊಂಡು ಹೊರಟನು.

ಇಷ್ಟರೊಳಗೆ ಅಂತಹ ಇಬ್ಬರು ಪುರುಷರು ಗೋಚರರಾಗಿ

ಇಂತು ಮಾತಾಡುತಿದ್ದುದಂ ಕೇಳಿದನು. ಅವರಲ್ಲಿ ಒಬ್ಬನೆಂದನು:- ಎಲೆ ಕರ್ತೃವೆ! ಇದೇನು ಇವನಿಗೆ ಐನೂರುವರಹಗಳನಿತ್ತೆ? ಅನ್ನವಸ್ತ್ರಗಳಿಗಿಂತ ಹೆಚ್ಚಾದುದು ಸ್ವಲ್ಪಮಾತ್ರವೂ ಇವನಿಗೆ ದೊರೆಯದೆಂಬುದಂ ನೀನು ತಿಳಿದಿಲ್ಲವೆ?

ಅವನೆಂದನು:—ಎಲೆ ಕರ್ಮಪುರುಷನೆ! ಪ್ರಯತ್ನಮಾಡು ವವರಿಗೆ ನಾನು ಅವಶ್ಯವಾಗಿ ಕುಡುವೆನು. ಅದು ಕಡೆಗೆ ಯಾವ ರೀತಿಯಂ ಹೊಂದಬೇಕೋ ಅದು ನಿನ್ನಧೀನವು. ಈ ವಿಷಯ ದಲ್ಲಿ ನನ್ನನೇಕೆ ಅಧಿಕ್ಷೇಪಿಸುವೆ?

ಸೋಮಿಲಕನು ಆನುಡಿಯಂ ಕೇಳಿ ತನ್ನ ಹಣದಗಂಟಂ ನೋಡಿಕೊಂಡನು. ಹಣವಿರಲಿಲ್ಲ. ಬಳಿಕ ವ್ಯಸನಗೊಂಡು ಚಿಂ ತಿಸಿದನು:—ಅಹಹ! ಧನರಹಿತನಾದ ನನ್ನ ಬಾಳು ಏಕೆ? ಅದ ರಿಂದ ಈ ವಟವೃಕ್ಷದಲ್ಲಿ ನೇಣುಂಹಾಕಿಕೊಂಡು ಪ್ರಾಣವಂ ಬಿಡು ವೆನು.

ಎಂದು ನಿಶ್ಚಯಿಸಿ ದರ್ಭೆಗಳಂ ಹೊಸೆದು ನೇಣುಮಾಡಿ ಅದರಿಂದ ತನ್ನ ಕತ್ತಂ ಬಿಗಿದು ಮರದ ಕೊಂಬೆಯಂ ಹಿಡಿದು ಕೊಂಡು ಜೋಲುವಷ್ಟರಲ್ಲಿ ಒಬ್ಬ ಪುರುಷನು ಆಕಾಶದಲ್ಲಿಯೇ ಇದ್ದುಕೊಂಡು ಅವನಂ ಕುರಿತು—ಎಲೆಎಲೆ ಸೋಮಿಲಕ! ಇಂತು ಸಾಹಸವನೆಸಗದಿರು. ನಾನು ನಿನ್ನ ಧನವನಪಹರಿಸಿದ ವನು. ನಿನಗೆ ಅನ್ನವಸ್ತ್ರಗಳಿಗಿಂತ ಹೆಚ್ಚಾಗಿ ಒಂದುಕವಡೆ ದೊರೆ ತರೂ ಅದಂ ನಾನು ಸಹಿಸೆನು. ಆದಕಾರಣ ನೀನು ನಿನ್ನ ಮನೆ ಯಂ ಸೇರು. ಆದರೆ ನಿನ್ನ ಸಾಹಸಕ್ಕೆ ನಾನು ಮೆಚ್ಚಿದೆನು. ನನ್ನ ದರ್ಶನವು ನಿನಗೆ ವ್ಯರ್ಥವಾಗಬಾರದು. ಆದುದರಿಂದ ನಿನಗೆ

ಇಷ್ಟವಾದ ಯಾವುದಾದರೂ ಒಂದು ವರವಂ ಬೇಡು ; ಕುಡು ವೆನು-ಎಂದು ನುಡಿದನು.

ಸೋಮಿಲಕನೆಂದನು:—ಇಂತು ನೀನು ಪ್ರಸನ್ನನಾಗಿದ್ದರೆ ಆ ನನ್ನ ಹಣವಂ ಕುಡು.

ಅವನೆಂದನು:—ಅಯ್ಯಾ ! ಭೋಗಿಸಲಾಗದ ಹಣದಿಂದ ಏನು ಮಾಡುವೆ ? ನಿನಗೆ ಅನ್ನವಸ್ತ್ರಗಳಿಗಿಂತ ಹೆಚ್ಚಾದ ಧನಪ್ರಾಪ್ತಿ ಯಿಲ್ಲ.

ಸೋಮಿಲಕನೆಂದನು:—ಆ ಹಣವಂ ಭೋಗಿಸುವ ಯೋಗ ವಿಲ್ಲದಿದ್ದರೂ ಅದು ನನಗೆ ಇರಬೇಕು. ಏಕೆಂದರೆ—

ಕಂ॥ ನೆಲಕಲನಕುಲೀನಂ ಸಾ ।
ಧುಲೋಕಸಂತ್ಯಕ್ತನೀತನೆಂದೆನಿಸುವೊಡಂ ॥
ನೆಲದೊಳ್ ಧನವುಳ್ಳಾತಂ ।
ನಲವಿಂ ಸೇವಿತನೆನಿಪ್ಪನೆಲ್ಲಾ ಜನದಿಂ ॥ ೨೩೯ ॥

ಪುರುಷನೆಂದನು:—ಇಂತಾದರೆ ಮತ್ತೆ ನೀನು ವರ್ಧಮಾನಪು ರವಂ ಸೇರು. ಅಲ್ಲಿ ವಣಿಜನ ಪುತ್ರರಿಬ್ಬರಿರುವರು. ಅವರಲ್ಲಿ ಒಬ್ಬನು ಗುಪ್ತಧನನು. ಎರಡನೆಯವನು ಉಪಭುಕ್ತಧನನು. ಅವರಿಬ್ಬರ ಸ್ವರೂಪವಂ ತಿಳಿದು ಅವರಲ್ಲಿ ಒಬ್ಬನ ಸ್ವರೂಪಕ್ಕೆ ತಕ್ಕಂತೆ ವರವಂ ಬೇಡು. ಧನವಂ ಉಪಭೋಗಿಸದಿದ್ದರೂ ಅದರಿಂದ ನಿನಗೆ ಪ್ರಯೋಜನವಿದ್ದರೆ ನಿನ್ನಂ ಗುಪ್ತಧನನಂ ಮಾಡುವೆನು. ಅಥವಾ ಇತರರಿಗೆ ಕುಡತಕ್ಕುದೂ ತಾನು ಭೋ ಗಿಸತಕ್ಕುದೂ ಆದ ಹಣದಿಂದ ನಿನಗೆ ಪ್ರಯೋಜನವಿರುವುದಾ ದರೆ ದತ್ತೋಪಭುಕ್ತಧನನನ್ನಾಗಿ ಮಾಡುವೆನು.

ಎಂದು ಹೇಳಿ ಅಂತರ್ಧಾನವನ್ನೈದಿದನು.

ಸೋಮಿಲಕನೂ ಅಚ್ಚರಿಗೊಂಡು ಮತ್ತೆ ವರ್ಧಮಾನ ಪುರವಂ ಕುರಿತು ಹೊರಟು ಸಂಜೆಯ ಹೊತ್ತಿಗೆ ಬಹುಶ್ರಮ ಪಟ್ಟು ಆಪೂರಂ ಸೇರಿ ಆ ಗುಪ್ತಧನನ ಮನೆಯಂ ವಿಚಾರಿಸಿ ಕಷ್ಟದಿಂದ ಗೊತ್ತುಹಿಡಿದು ಒಳಗೆ ಹೋದನು.

ಗುಪ್ತಧನನು ಕಂಡು ಮಡದಿಮಕ್ಕಳೊಡನೆ ಸೋಮಿಲಕನಂ ಗದರಿ ಧಿಕ್ಕರಿಸಿದನು. ಸೋಮಿಲಕನು ಬಲಾತ್ಕಾರದಿಂದ ಒಳ ಹೊಕ್ಕು ಕುಳಿತುಕೊಂಡನು. ಊಟದಹೊತ್ತಾಯಿತು. ಅಂತೂ ಇಂತೂ ಅನಾದರಣೆಯಿಂದ ಅವನಿಗೂ ಸ್ವಲ್ಪವಾದ ಅನ್ನವಂ ಹಾಕಿದರು. ಸೋಮಿಲಕನು ಊಟಮಾಡಿ ಅಲ್ಲಿಯೇ ಮಲಗಿದನು.

ಅರ್ಧರಾತ್ರಿಸಮಯದಲ್ಲಿ ಇಬ್ಬರು ಪುರುಷರು ಪರಸ್ಪರವಾಗಿ ಇಂತು ಮಾತನಾಡಿದರು:—

ಒಬ್ಬನೆಂದನು:—ಎಲೆ ಕರ್ತೃವೆ! ಈ ಗುಪ್ತಧನನು ಸೋಮಿಲಕನಿಗೆ ಭೋಜನಮಾಡಿಸಿದನು. ಇದೇನು ? ನೀನು ಇವನಿಗೆ ಹೆಚ್ಚಾದ ವೆಚ್ಚವಂ ಮಾಡಿಸಿದೆ. ನೀನು ಮಾಡಿದುದು ಸರಿಯಲ್ಲ.

ಅವನೆಂದನು:—ಎಲೆ ಕರ್ಮಪುರುಷನೆ! ಈ ವಿಷಯದಲ್ಲಿ ನನ್ನ ತಪ್ಪಿಲ್ಲ. ನಾನು ಪುರುಷಲಾಭವನುಂಟುಮಾಡಬೇಕು. ಅದರ ಪರಿಣಾಮವು ನಿನಗೆ ಸೇರಿದುದು.

ಬಳಿಕ ಸೋಮಿಲಕನು ಆ ಮನೆಯಿಂದ ಹೋಗುವಷ್ಟರಲ್ಲಿ ಗುಪ್ತಧನನು ವಿಷೂಚಿಕಾರೋಗದಿಂದ ಪೀಡಿತನಾಗಿ ಸ್ವಲ್ಪಕಾಲ ಸಂಕಟಪಡುತಿದ್ದನು. ಮರುದಿವಸ ಆ ಅಸ್ವಸ್ಥತೆಯಿಂದ ಉಪವಾಸವಂ ಮಾಡಿದನು.

ಸೋಮಿಲಕನು ಬೆಳಗಾಗುವುದೂ ಆ ಮನೆಯಿಂದ ಹೊರಟು ಉಪಭುಕ್ತಧನನ ಮನೆಯಂ ಸೇರಿದನು. ಅವನು ಇದಿರ್ಗೊಂಡು ಉಪಚರಿಸಿ ಭೋಜನಾದಿಗಳಿಂದ ಸತ್ಕರಿಸಿದನು. ಸೋಮಿಲಕನು ಸಂಮಾನಿತನಾಗಿ ರಮಣೀಯವಾದ ಹಾಸಿಗೆಯಲ್ಲಿ ಮಲಗಿ ನಿದ್ರೆ ಮಾಡಿದನು.

ಬಳಿಕ ಅರ್ಧರಾತ್ರಸಮಯದಲ್ಲಿ ಇಬ್ಬರು ಪುರುಷರು ಇಂತು ಮಾತನಾಡಿದರು:—

ಒಬ್ಬನು ಹೇಳಿದನು:—ಎಲೆ ಕರ್ತೃವೆ! ಸೋಮಿಲಕನಂ ಸತ್ಕರಿಸಿದುದರಿಂದ ಇವನಿಗೆ ಹೆಚ್ಚಾದ ವ್ಯಯವುಂಟಾಯಿತು. ಹೇಳು ಅದೆಂತಿವನು ಉದ್ಧಾರವನ್ನೈದುವನು? ಇವನು ವರ್ತಕರ ಮನೆಯಿಂದ ಎಲ್ಲವನ್ನೂ ತಂದಿರುವನು.

ಅವನೆಂದನು:—ಎಲೆ ಕರ್ಮಪುರುಷನೆ! ಇದು ನನ್ನ ಕೆಲಸ. ಇದರ ಪರಿಣಾಮವು ನಿನಗೆ ಸೇರಿದುದು.

ಬಳಿಕ ಬೆಳಗಿನ ಸಮಯದಲ್ಲಿ ಒಬ್ಬ ರಾಜಪುರುಷನು ರಾಜನು ಪ್ರಸನ್ನನಾಗಿ ಕಳುಹಿಸಿಕೊಟ್ಟ ಹಣವಂ ತೆಗೆದುಕೊಂಡು ಬಂದು ಉಪಭುಕ್ತಧನನಿಗೆ ಕೊಟ್ಟನು.

ಸೋಮಿಲಕನು ಅದಂಕಂಡು ಇಂತು ಚಿಂತಿಸಿದನು:—ಈ ಉಪಭುಕ್ತಧನನು ಸಂಚಿತವೇನೂ ಇಲ್ಲದವನಾದರೂ ಅಭಿನಂದ್ಯನು. ಲುಬ್ಧನಾದ ಆ ಗುಪ್ತಧನನು ಅಭಿನಂದ್ಯನಲ್ಲ. ಏಕೆಂದರೆ—

ಕಂ|| ಶ್ರುತಿಫಲನಗ್ನಿಹೋತ್ರಂ ।
ಶ್ರುತವಿಜ್ಞಾನಕ್ಕೆ ಶೀಲಮದು ಫಲವೆನಿಕುಂ ॥
ಸತಿಯಿರ್ದುದಕ್ಕೆ ಸುಖಮುಂ ।
ಸುತರುಂ ಫಲವಂತು ಸಿರಿಗೆ ದಾನಂ ಭೋಗಂ ॥೧೩೩॥

ಆದುದರಿಂದ ನನ್ನಂ ದತ್ತಭುಕ್ತಧನನನ್ನಾಗಿ ಮಾಡಲಿ. ಗುಪ್ತಧನನಾಗಿರಲು, ಪ್ರಯೋಜನವೇನು ?

ಬಳಿಕ ಸೋಮಿಲಕನು ದತ್ತಭುಕ್ತಧನನಾದನು. ಇದರಿಂದ ನಾನು ಹೇಳುವೆನು:—

ಕಂ॥ ಧನಮಂ ಮಿಗೆ ಗಳಿಯಿಸಿತಾ॥
ನಿನಿತುಂ ಭೋಗಿಸದೆ ಜೀವಿಪಂ ಗಡ ಗಾಂಪಂ ॥
ವನಮಂ ಪೊಕ್ಕತಿಘನಮಂ ।
ಧನಭೋಗವದಿಲ್ಲದಿರ್ದ್ದ ಸೋಮಿಲಕನವೊಲ್ ।

ಎಂದು.

ಅದರಿಂದ ಎಲೈ ಪ್ರಿಯಹಿರಣ್ಯಕ! ಧನವಿಷಯವಿಂತಹುದೆಂದು ತಿಳಿದು, ಸಂತಪಿಸದಿರು. ಧನವಿದ್ದರೂ ಉಪಭೋಗಿಸಲ್ಪಡದಿದ್ದರೆ ಇಲ್ಲದಂತೆಯೇ ತಿಳಿಯತಕ್ಕುದು. ಏಕೆಂದರೆ—

ಕಂ॥ ಮನೆಯೊಳಗಣ ನಡುವೆಗೆಯು ।
ಲ್ಲನುವಿಂ ಪೂಳ್ದಿಟ್ಟ ಧನದೆ ಧನವಂತರ್ ತಾ ॥
ವೆನಿಪೊಡೆ ಜನಂಗಳದರಿನೆ ।
ಧನದಿಂ ಧನವಂತರೆನಿಸಿಕೊಳ್ಳವೆ ನಾವುಂ ॥೧೩೫॥

ಅಂತಲ್ಲದೆ—

ಕಂ॥ ತುಳುಕುವವೊಲ್ ತುಂಬಿದ ಕೆಱೆ ।
ಯೊಳಗಣ ಸಲಿಲಕ್ಕೆ ಪೊಱಗೆಪೋಗುವ ಪೊನಲಂ ।
ತಿಳಿಯೊಳ್ ಗಳಿಯಿಸಿದರ್ಥಂ ।
ಗಳ ಸಿಚಯಕೆ ಮಾಳ್ಪ ಚಾಗಮೇ ಕಾಪಲ್ತೇ ॥೧೩೬॥

ಪಣವಿರೆ ಕುಡವೇೞ್ಕುಂ ತಾ ।
ನುಣವೇೞ್ಕುಂ ಬಱಿದೆ ಕೂಡಿಸಿಡಲಾಗದು ನೋ ॥

ತಣಿಸದೆ ಪೆಱರಪಹರಿಪರ್ ।
ದಣಿವಿಂ ಕೂಡಿಸಿದ ಜೇಂನೊಳಂಗಳ ಸಿರಿಯಂ ॥೧೩೭॥

ಮತ್ತು—

ಈವುದು ಭೋಗಿಪುದೞಿವೆಂ ।
ದೀ ವಸುಮತಿಯಲ್ಲಿ ಧನಕೆ ಮೂಱುಂಗತಿಗಳ್ ।
ಆವಂ ಭೋಗಿಸನೀಯಂ
ಭಾವಿಸೆ ಮೂಱನೆಯದವನ ಧನಕೆ ವಲಕ್ಕುಂ ॥೧೩೮॥

ವಿವೇಕಿಯಾದವನು ಇದನರಿತು ಸ್ಥಿತಿಗೋಸ್ಕರ ಧನವಂ ಸಂಪಾದಿಸಬಾರದು. ಏಕೆಂದರೆ, ಇದು ಕೇವಲದುಃಖಕರವಾದುದು.

ಕಂ॥ ಜಗದೆ ಧನಾದಿಗಳಲ್ಲಾ ।
ವಗಮೆಗ್ಗರದಾರ್ ಸುಖಾಶೆಯಿಂದಿರ್ದಪರೋ ॥
ಬಗೆವೊಡವಂದಿರ್ ಬಿಱುವೇ ।
ಸಗೆಯೊಳ್ ತಪ್ಪೊಂದಲನ್ನಿಯಂ ಸೇವಿಸುವರ್ ॥೧೩೯॥

ವೃ॥ ಅಹಿಗಳ್ ಗಾಳಿಯನೀಂಟುಗುಂ ಗಡ ಬಲಂಗುಂದಿಪ್ಪುವಲ್ತಾದೊಡಂ । ಬಹುನಿಸ್ಸಾರತೃಣಂಗಳಂ ತಿನುತೆ ತಾಂ ಕಾಡಾನೆಗಳ್ ಶೋಭಿಕುಂ ॥ ಅಹಹಾ ತಾಪಸರುಂಡು ಕಂದ ಫಲಮಂ ಕಾಲಂಗಳಂ ನೂಂಕುವರ್ । ಮಹಿಯೊಳ್ ನೋಡೆತ್ತೊಡೆ ಮುಖ್ಯಕಾರಣವದಕ್ಕೆಲ್ಲಂ ವಲಂ ಸಂತಸಂ ॥೧೪೦॥

ಕಂ॥ ಹೃದಯದೆ ಸುಶಾಂತಿ ಪುದಿದಿರೆ ।
ಮುದಮೃತದಿಂ ತಣಿವವರ್ಗ್ಗೆ ಸುಖವಾವುದೊ ತಾಂ ॥
ಅದು ಧನದತಿಲೋಭದೆ ನಿ ।
ಲ್ಲದೆ ಯತ್ತಿತ್ತೋಡುವರ್ಗ್ಗೆಂತುಟು ಸಲ್ಗುಂ ॥೧೪೧॥

ಸುದೆಯುಂ ಸವಿವವೊಲೆಂದುಂ ।
ಮುದಮುಂ ಸವಿವರ್ಗೆ ಸೌಖ್ಯವಗ್ಗಳವೆನಿಕುಂ ।
ಮುದಮುಂ ಪಡೆಯದ ಮನುಜ ।
ಗ್ಗರ್ದವೞಲೆಂಬುದು ನಿರಂತರಂ ಸಮನಿಕ್ಕುಂ ॥ ೧೪೨ ॥

ಚಿತ್ತಮನೊಂದಂ ತಡೆದೊಡೆ
ಮತ್ತಿನ ಸಕಲೇಂದ್ರಿಯಂಗಳುಂ ತಡೆವಡೆಗುಂ ॥
ಮುತ್ತಿ ಮುಗಿಲ್ಗಳ್ ನೇಸಱ ।
ನೆತ್ತಂ ಮುಸುಕಿದೊಡೆ ಮುಸುಕನಾನವೆ ಕದಿರ್ಗಳ್ ।

ಇಚ್ಛೆಯು ತಣಿದಿಕ್ಕುವುದೇ
ಸಚ್ಚಿತ್ತಸ್ವಾಸ್ಥ್ಯವೆಂದಪರ್ ಪಾರಿಸಿಗಳ್ ॥
ಇಚ್ಛೆ ಪಣಂಗಳನೞಿಯದು ।
ಕಿಚ್ಚಿನ ಸೇವನೆಗಳಿಂದೆ ತೃಷೆಯೞಿಯದವೋಲ್ ॥

ಪೞಿಯಲ್ ತಗದನನಕಟಾ ।
ಪೞಿವರ್ ಪೊಗೞಲ್ಕೆ ತಗದನಂ ಮಿಗೆ ಪೊಗೞ್ವರ್ ।
ಇಳೆಯೊಳ್ ಮನುಜರ್ ಪಣಮಂ
ಗೞಿಯಿಸಲೆಂದಹಹ ತಾವದೇನೇನೆಸಗರ್ ॥ ೧೪೩ ॥

ಮನುಜಂಗೆ ಧರ್ಮವೆಸಗಲ್ ।
ಧನಾಶೆಸಮನಿಪ್ಪೊಡವೊಳ್ಳಿತಲ್ತದುವುಂ ಕ್ಷಾ ॥
ಳನದತ್ತಣಿಂದೆ ಪಂಕಮ
ನಿನಿಸುಂ ಮುಟ್ಟದೆಯೆ ದೂರವಿರ್ಪುದು ತಗುಗುಂ ॥ ೧೪೪ ॥

ವೃ ॥ ತಿರೆಯೊಳ್ ದಾನಕೆ ಸಾಟಿವರ್ಪನಿಧಿ ಮತ್ತೊಂದಿಲ್ಲ ಮೋಸ
ಲೋಭದಂ । ತಿರೆಯುಜ್ಜೃಂಭಿಸುತಿರ್ಪ ಬೇಸಪಗೆಯಿನ್ನಿಲ್ಲಂ ಗಡಾ

ಶೀಲದಂ ॥ ತಿರೆ ರಾರಾಜಿಪ ಭೂಷಣಂ ಪೆಱತದೊಂದಿಲ್ಲಾವುದುಂ ನೋಡುತ್ತಿರ್ಪೊಡಾ ಪರಿತೋಷಕ್ಕೆಣೆವರ್ಪುದಾದ ಧನಮುಂ ತಾನಿಲ್ಲ ಮತ್ತಾವುದುಂ ॥೧೪೭॥

ಕಂ॥ ಘನಸುಧಿಯದೊರ್ಮ್ಮೆ ಬೀೞುತ್ತಿರ್ಪೊಡ ।
ಮನುವಿಂ ಪೊಡೆಸೆಂಡು ಬೀೞ್ವವೊಲ್ ಬೀೞ್ಗುಂ ಮೂ॥
ರ್ಖನವಂ ನಿರ್ಭರದಿಂ ಮೇ ।
ದಿನಿಯೊಳ್ ಮಣ್ಣುಂಡೆ ಬೀೞ್ವತೆಱದಿಂ ಬೀೞ್ಗುಂ ॥

ಪ್ರಿಯನೆ! ಇಂತು ನೀನರಿತು ಸಂತೋಷಮಂ ತಾಳಬೇಕು. ಆಗೆ ಮಂಥರಕದ ನುಡಿಯಂ ಕೇಳಿ ಇಂತೆಂದಿತು:—ಪ್ರಿಯ! ಮಂಥರಕನು ಹೇಳಿದುದಂ ನೀನು ಮನಸ್ಸಿನಲ್ಲಿ ಅವಧರಿಸಬೇಕು. ಏಕೆಂದರೆ, ಸುಭಾಷಿತವಿಂತು ಹೇಳಲ್ಪಡುವುದು:—

ಕಂ॥ ಕ್ಷಿತಿಪನೆ ಸುಲಭರ್ ಲೋಕದೆ ।
ಸತತಂ ಪ್ರಿಯುವೆಂದೆನಿಪ್ಪ ನುಡಿಯಂ ನುಡಿವರ್ ॥
ಅತಿದುರ್ಲಭನಪ್ರಿಯಮುಂ ।
ಹಿತಮಂ ನುಡಿವನುಮದರ್ಕ್ಕೆ ಕಿವಿಗುಡುವವನುಂ ॥
ಬಗೆಗಪ್ರಿಯಮೆನಿಸಿದೊಡಂ ।
ಮಿಗೆ ಹಿತಮೆಂದೆನಿಪ ನುಡಿಯನಾರ್ ನುಡಿದಪರೋ ॥
ಜಗದೊಳಮೆಂದಿರೆಗಡ ನೇ
ಹಿಗರ್ ಪೆಱರ್ ಧರಿಪರುಂತೆ ನೇಹಿಗವೆಸರಂ ॥೧೫೦॥

ಇಂತು ಅವು ಸಂಭಾಷಿಸುತಿರಲು, ಚಿತ್ರಾಂಗವೆಂಬ ಜಿಂಕೆ ಬೇಡನಿಂದ ಓಡಿಸಲ್ಪಟ್ಟು ಅದೇ ಸರಸ್ಸಂ ಪೊಕ್ಕಿತು. ಲಘುಪತನಕವು ಭಯತ್ವರೆಯಿಂದ ಬರುತಿಪ್ಪ ಅದಂ ಕಂಡು ಥಟ್ಟನೆ ಮರವನೇರಿತು.

ಹಿರಣ್ಯಕವು ಹತ್ತಿರಿದ್ದ ಹುಲ್ಲುಪೊದರೆಯಂ ಸೇರಿತು. ಮಂಥರಕವು ಜಲಾಶ್ರಯವನಾಶ್ರಯಿಸಿತು. ಲಘುಪತನಕವು ಜಿಂಕೆಯಂ ಪರಾಮರ್ಶಿಸಿನೋಡಿ ಮಂಥರಕವಂ ಕುರಿತು ಇಂತೆಂದಿತು:- ಮಿತ್ರ ಮಂಥರಕ! ಬಾಬಾ. ಈ ಚಿತ್ರಾಂಗನು ಬಾಯಾರಿಕೆಗೊಂಡು ಇಲ್ಲಿಗೆ ಬಂದು ಕೊಳವಂ ಪೊಕ್ಕನು. ಆವನ ಸದ್ದಿದು. ಮನುಷ್ಯನದಲ್ಲ.

ಅದಂ ಕೇಳಿ ಮಂಥರಕವು ದೇಶಕಾಲೋಚಿತವಾದ ನುಡಿಯಂ ನುಡಿಯಿತು:--ಎಲೆ ಲಘುಪತನಕ! ಈ ಚಿತ್ರಾಂಗನು ಅಡಿಗಡಿಗೂ ನಿಟ್ಟುಸಿರುಬಿಡುತಿರುವನು. ಭಯಾಕುಲವಾದ ನೋಟದಿಂದ ಹಿಂದೆಯೆ ನೋಡುತಿರುವನು. ಅದಕಾರಣ ಇವನು ಬಾಯಾರಿ ಬಂದಿಲ್ಲ. ನಿಶ್ಚಯವಾಗಿ ಬೇಡನಿಂದ ಹೆದರಿಸಲ್ಪಟ್ಟಿರುವನು. ಇವನ ಬೆನ್ನಟ್ಟಿಕೊಂಡು ಬೇಡರು ಬರುತಿರುವರೋ ಇಲ್ಲವೋ-ಎಂಬುದಂ ತಿಳಿ. ಭಯಾಕುಲರಾದವರ ರೀತಿಯೀ ಇಂತು:-

ಕಂ॥ ಮಸಗಿದ ಭಯದಿಂದಡಸಿದ ।
ನಸವಸದಿಂ ಮತ್ತೆಮತ್ತೆ ನೀಡುಂ ಸುಯ್ಯುಂ ॥
ದೆಸೆಗಳನವಲೋಕಿಸುವಂ ।
ನಿಸದಂ ಮೇಣ್ ಪಡೆಯನೆತ್ತಲುಂ ಸ್ವಸ್ಥತೆಯಂ ॥

ಅದಂ ಕೇಳಿ ಚಿತ್ರಾಂಗವೆಂದಿತು:—ಎಲೆ ಮಂಥರಕ! ನೀನು ನನ್ನ ಭಯಕ್ಕೆ ಕಾರಣವಂ ಚೆನ್ನಾಗಿ ತಿಳಿದೆ. ನಾನೂ ಬೇಡನ ಬಾಣಪ್ರಹಾರದಿಂದ ತಪ್ಪಿಸಿಕೊಂಡುಬಂದೆ. ನನ್ನ ಗುಂಪು ಆ ಬೇಡನಿಂದ ಕೊಲಲ್ಪಡುವುದು. ಶರಣಾಗತನಾದ ನನಗೆಬೇಡರು ಪ್ರವೇಶಿಸದಂತಹ ಯಾವುದಾದರೂ ಒಂದು ಎಡೆಯಂತೋರಿಸು.

ಅದಂ ಕೇಳಿ ಮಂಥರಕವೆಂದಿತು:—ಎಲೆಚಿತ್ರಾಂಗ! ಕೇಳು ನೀತಿಶಾಸ್ತ್ರವಂ:—

ಕಂ॥ ಎರಡಿರ್ಕುಮುಪಾಯಂಗಳ್ ।
ಪರಿಪಂಥಿಯನೋಡಿದಂದು ಬಿಡುಗಡೆಯೊಂದಲ್ ॥
ಕರಯುಗಮಲ್ಲಾಡಿಪ್ಪುದೊಂ ।
ದೆರಡನೆಯದು ಕಾಲ್ಗಳೋಟವೆಂಬರ್ ಜಗದೊಳ್ ॥

ಅದರಿಂದ ದುರಾತ್ಮರಾದ ಆ ಬೇಡರು ಬರುವುದರೊಳಗೆ ಸಮೃದ್ಧವಾದ ವನವಂ ಕುರಿತು ಹೊರಡು.

ಇಷ್ಟರಲ್ಲಿ ಲಘುಪತನಕವು ಥಟ್ಟನೆ ಹತ್ತಿರಬಂದು ನುಡಿಯಿತು:—ಎಲೆ ಮಂಥರಕ! ಆ ಬೇಡರು ದೊಡ್ಡದೊಡ್ಡದಾದ ಮಾಂಸಪಿಂಡಂಗಳಂ ಹೊತ್ತುಕೊಂಡು ತಮ್ಮ ಬೀಡಿನ ಕಡೆಗೆ ಹೊರಟುಹೋದರು. ಆದಕಾರಣ ಎಲೆ ಚಿತ್ರಾಂಗ! ನೀನು ನಿಶ್ಶಂಕನಾಗಿ ಈಚೆಗೆ ಬಾ.

ಬಳಿಕ ಆ ನಾಲ್ಕು ಪ್ರಾಣಿಗಳೂ ಮೈತ್ರಿಯಿಂ ಕೂಡಿ ಆ ಸರೋವರದ ಬಳಿ ಮಧ್ಯಾಹ್ನಸಮಯದಲ್ಲಿ ಮರದ ನೆಳಲಕೆಳಗೆ ಸುಭಾಷಿತಗೋಷ್ಠೀಸುಖವಂ ಅನುಭವಿಸುತ್ತ ಸುಖದಿಂದ ಕಾಲವಂ ಕಳೆಯುತಿದ್ದುವು. ಇದು ಯುಕ್ತವೆನಿಸುವುದು:—

ಕಂ॥ ಸವಿದು ಸುಭಾಷಿತರಸಮಂ ।
ಸವಿಸಿಪ ಪ್ರೌಢಪ್ರಜ್ಞೆಯ ಸವಗಮಂ ಮಯ್ಯೊಳ್ ತೊ ॥
ಟ್ಟವರಜ್ಞಿತರ್ ಸೊಗಯಿಪ್ಪರ್ ।
ತವಕದೆ ತಾಂ ವಿಷಯಭೋಗದೊಳ್ ಬೆರೆಯದೊಡಂ ॥

ಅವಂ ಗಣಿಯಿಸದಿಪ್ಪನೊ ।
ಭೂವಲಯದೊಳಂತದಂ ಸುಭಾಷಿತಧನಮಂ ॥

ಅವುದು ದಕ್ಷಿಣೆಯಂ ತಾ |
ನೀವಂ ಪ್ರಸ್ತಾವವೆಂಬ ಜನ್ಮದೊಳಾತಂ ||೧೫೪||

ಅಂತಲ್ಲದೆ—

ತವಕದಿನದೊರ್ವ್ಮ್ರ ಪೇಳ್ದುದ |
ನವಧರಿಸಂ ತಾನುಮಂತು ನಡೆಯನದಾವಂ |
ಸುವಿಷಯಮಂ ಸಂಗ್ರಹಿಸಂ |
ಭುವನದೊಳಾತಂಗದೇಂ ಸುಭಾಷಿತದಿಂದಂ ||೧೫೫||

ಬಳಿಕ ಬಂದುದಿವಸ ಗೋಷ್ಠೀಸಮಯದಲ್ಲಿ ಚಿತ್ರಾಂಗವು ಬರಲಿಲ್ಲ. ಅವು ಮೂರೂ ವ್ಯಾಕುಲತೆಗೊಂಡು ಪರಸ್ಪರವಾಗಿ ಮಾತನಾಡಲು ತೊಡಗಿದುವು:—

ಅಹಹ ! ಅದೇನು ಈಗ ಮಿತ್ರನು ಬರಲಿಲ್ಲ ? ಸಿಂಹಾದಿಗಳಿಂದ ಅಥವಾ ಬೇಡರಿಂದ ಎಲ್ಲಿಯಾದರೂ ಹತನಾದನೋ ? ಅಲ್ಲದಿದ್ದರೆ ಹೊಸಹುಲ್ಲಿನಾಶೆಯಿಂದ ಕಿಚ್ಚಿನಲ್ಲಿ ಅಥವಾ ಹಳ್ಳದಲ್ಲಿ ಬಿದ್ದನೋ ? ಇದು ಯುಕ್ತವಾದ ಮಾತು:—

ಕಂ|| ಮನೆದೋಂಟಕೆ ಪೋಗಿರೆಯುಂ |
ಮನವೊಲ್ದರ್ ಮೋಹದಿಂದೆ ಪೊಲ್ಲಣಿಸುವರೆಂ ||
ದೆನೆ ಮಿಗೆ ಪುಚ್ಛಟೀಗಳ್ಗೆ |
ಯೆನಿಸುತಗುರ್ವಿಸುವ ಪಱುವೊಳರೆ ನುಡಿವುದದೇಂ ||

ಬಳಿಕ ಮಂಥರಕವು ಕಾಗೆಯಂ ಕುರಿತು ಇಂತೆಂದಿತು:—
ಎಲೆ ಲಘುಪತನಕ ! ನಾನು ಮತ್ತು ಹಿರಣ್ಯಕನಿಬ್ಬರೂ ಮಂದಗಾಮಿಗಳಾದುದರಿಂದ ಚಿತ್ರಾಂಗನಂ ಹುಡುಕಲು ಅಶಕ್ತರು. ಆದಕಾರಣ ಅವನು ಎಲ್ಲಿಯಾದರೂ ಬದುಕಿರುವುದಂ ತಿಳಿಯಬೇಕಾದರೆ ನೀನು ಅರಣ್ಯದಲ್ಲಿ ಹೋಗಿ ಹುಡುಕು.

ಅದಂ ಕೇಳಿ ಲಘುಪತನಕವು ಸ್ವಲ್ಪದೂರ ಹೋಗುವುದರೊಳಗೆ ಕುಂಟೆಯ ದಡದಲ್ಲಿ ಚಿತ್ರಾಂಗವು ಬಲೆಯಿಂದ ಹಿಡಿಯಲ್ಪಟ್ಟಿದ್ದಿತು. ಅದಂ ಕಂಡು ಶೋಕದಿಂದ ಆಕುಲವಾದ ಮನಸ್ಸುಳ್ಳದಾಗಿ ಇಂತೆಂದಿತು:—ಪ್ರಿಯನೆ! ಇದೇನು ?

ಚಿತ್ರಾಂಗವೂ ಕಾಗೆಯಂ ನೋಡಿ ಬಹುವಾಗಿ ದುಃಖಿಸಿತು. ಇದು ಯುಕ್ತವೇಸರಿ:—

ಕಂ॥ ಅನುವಿಂ ಕುಂದಿದೊಡಂ ಮೇಣ್ ।
ವಿನಾಶಮೊಂದಿದೊಡಮಿಷ್ಟಜನದರ್ಶನಮಾ ॥
ಯ್ತೆನೆ ಮತ್ತಂ ಭೋರನೆ ತಾ ।
ನೆನಸುಂ ಕೆರಳ್ದಪುದು ಮನದ ದುಗುಡದ ವೇಗಂ ॥

ಬಳಿಕ ಕಣ್ಣೀರೆಲ್ಲವೂ ಸುರಿದುಹೋದಮೇಲೆ ಚಿತ್ರಾಂಗವು ಲಘುಪತನಕವಂ ಕುರಿತೆಂದಿತು:—ಎಲೆ ಮಿತ್ರ! ಇವನು ನನಗೆ ಮೃತ್ಯುವಾಗಿ ಪರಿಣಮಿಸಿದನು. ಈಗ ನನಗೆ ನಿನ್ನದರ್ಶನವುಂಟಾದುದು ಯುಕ್ತವೆನಿಸಿತು. ಏಕೆಂದರೆ—

ಕಂ॥ ಅಱೆವೆಯ್ದುವಂದು ಹರಣಂ ।
ಕೆಳೆಯನ ಸಂದರ್ಶನಂ ಸಮುದ್ಭವಿಸಲೊಡಂ ॥
ಬಱಿಕಂ ಬರ್ದುಂಕುಮಾತಂ ।
ಗಱಿದಂಗಿರ್ವಗ್ಗಮದುಸುಖಾವಹಮಕ್ಕುಂ ॥೧೪೮॥

ಸುಭಾಷಿತಗೋಷ್ಠಿಗಳಲ್ಲಿ ನಾನು ಆಡಿದ ಮಾತುಗಳಂ ಕ್ಷಮಿಸಬೇಕು. ಈವಿಷಯದಲ್ಲಿ ಹಿರಣ್ಯಕಮಂಥರಕರಿಗೂ ಇಂತು ನಾನು ಹೇಳದುದಾಗಿ ತಿಳಿಯಿಸಬೇಕು:—

ಅಱಿಯದೆಯೋ ಅಱಿದೋ ನಾಂ ।
ದುರುಕ್ತಿಯನದೇನನೊರೆದೆನೋ ನೀವಿರ್ವ್ವರ್ ।
ಪಿರಿದುಂ ನಲ್ಮೆಯನೆನ್ನೊಳ್ ।
ನಿಱಿಸುತ್ತುಂ ಕ್ಷಮಿಸವೇೞ್ಪುದದನೆಂತಾನುಂ ॥೧೫೯॥

ಅದಂ ಕೇಳಿ ಲಘುಪತನಕವೆಂದಿತು:—ಪ್ರಿಯಮಿತ್ರನೆ ! ನಮ್ಮಂತಹ ಸ್ನೇಹಿತರಿರುವಾಗ ನೀನು ಹೆದರಬಾರದು. ನಾನು ಈಗಲೇ ಹೋಗಿ ಹಿರಣ್ಯಕನಂ ಕರೆದುತರುವೆನು. ಆದರೆ ಸತ್ಪುರುಷರಾದವರು ದುಃಖವೊದವಿದಾಗ ವ್ಯಾಕುಲತೆಗೊಳ್ಳರು. ಕೇಳು:—

ಕಂ॥ ಸಿರಿಯೊಳ್ ಬೀಗದ ಕಷ್ಟದೆ ।
ಮಱುಗದ ಕಾಳೆಗದೆ ಭೀತಿಗೊಳ್ಳದ ಜಗದಾ ।
ಭರಣಂ ತಾನೆಂದೆನಿಸುವ ।
ವರಸುತನಂ ಜನನಿ ಜಗದೆ ಪಡೆಗುಂ ವಿರಲಂ ॥೧೬೦॥

ಎಂದು ನುಡಿದು ಲಘುಪತನಕವು ಚಿತ್ರಾಂಗವಂ ಸಂತೈಸಿ ಹಿರಣ್ಯಕಮಂಥರಕಂಗಳಿರುವ ಎಡೆಗೆ ಹೋಗಿ ಚಿತ್ರಾಂಗವು ಬಲೆಗೆ ಸಿಕ್ಕಿದುದೆಲ್ಲವನ್ನೂ ಹೇಳಿತು. ಚಿತ್ರಾಂಗವಂ ಬಲೆಯಿಂದ ಬಿಡಿಸುವುದಾಗಿ ನಿಶ್ಚಯಿಸಿದ ಹಿರಣ್ಯಕನಂ ಬೆನ್ನಮೇಲೆ ಕುಳ್ಳಿರಿಸಿಕೊಂಡು ಹಿಂತಿರುಗಿ ಥಟ್ಟನೆ ಚಿತ್ರಾಂಗದ ಬಳಿಯಂ ಸೇರಿತು. ಅದೂ ಇಲಿಯಂ ಕಂಡು ಸ್ವಲ್ಪ ಜೀವಿತಾಶೆಯಂ ಹೊಂದಿ ಇಂತು ಸಂಗತನಾಗಿ ನುಡಿಯಿತು:—

ಕಂ॥ ತಿಳಿದರ್ ನಿರ್ಮಳರೆನಿಸಿದ ।
ಕೆಳೆಯರ್ಕಳನೆಱ ಕಳೆಯಲಾರ್ಜಿಸವೇೞ್ಕುಂ ।

ಇಳೆಯೊಳದಾವಂ ಕೆಳೆಯರ ।
ಗಣಿಯಿಸದಿರ್ಪಂ ದಲಾತನೆಡರಂ ದಾಂಟಂ ॥೧೬೧॥

ಹಿರಣ್ಯಕವೆಂದಿತು:—ಎಲೆ ಪ್ರಿಯಮಿತ್ರ! ನೀನು ನೀತಿಶಾಸ್ತ್ರಜ್ಞನು; ಪಟುವಾದ ಬುದ್ಧಿಯುಳ್ಳವನು. ಆದರೂ ಆದೆಂತು ಈ ಬಲೆಗೆ ಸಿಕ್ಕಿದೆ ?

ಅದೆಂದಿತು—ಎಲೆ ಸಖನೆ ! ಇದು ವಿವಾದಕ್ಕೆ ಕಾಲವಲ್ಲ. ಪಾಪಿಷ್ಠನಾದ ಆ ಬೇಡನು ಬರುವುದರೊಳಗೆ ಥಟ್ಟನೆ ಈ ನನ್ನ ಕಾಲ ಹಗ್ಗವಂ ಕತ್ತರಿಸಿಡು.

ಅದಂ ಕೇಳಿ ಹಿರಣ್ಯಕವು ನಕ್ಕು ಇಂತೆಂದಿತು:—ನಾನು ಬಂದಮೇಲೂ ಬೇಡನಿಗೆ ಹೆದರುವೆಯಾ ? ಶಾಸ್ತ್ರದ ವಿಷಯದಲ್ಲಿ ನನಗೆ ಮಹತ್ತಾದ ಬೇಸರವುಂಟಾಗಿರುವುದು. ಏಕೆಂದರೆ-ನೀತಿಶಾಸ್ತ್ರಜ್ಞರಾದ ನಿಮ್ಮಂತವರಿಗೂ ಈ ಅವಸ್ಥೆ ಪ್ರಾಪ್ತವಾಗಿರುವುದಲ್ಲಾ ! ಅದರಿಂದ ನಿನ್ನಂ ಬೆಸಗೊಳ್ವೆನು.

ಅದೆಂದಿತು:—ಮಿತ್ರನೆ ! ಕರ್ಮವು ಬುದ್ಧಿಯನ್ನೂ ಧ್ವಂಸಗೊಳಿಸುವುದು, ಕೇಳು:—

ಕಂ॥ ಪತ್ತಿರೆ ಮಿಟ್ಟುವ ಪಾಶಂ ।
ಮತ್ತಂಬಿದಿಯಿಂದೆ ಕಲುಷವೊಂದಿರೆ ಚಿತ್ತಂ ॥
ಎತ್ತಂ ಕೊಂಕಿಂ ಪಸರಿಕು ।
ಮುತ್ತಮವೆಂದೆನಿಪ ಪಿರಿಯರಾ ಬುದ್ಧಿಗಳುಂ ॥೧೬೨॥

ಬಿದಿ ಪಣೆಯು ಮಧ್ಯದಲ್ಲಾ ।
ವುದನಾರಚಿಸಿರ್ಪನಕ್ಷರಂಗಳ ಸಾಲಂ ॥
ಅದನಳಿಯಿಸಲಾರ್ಗಂ ಕೋ ।
ವಿದವರರೆನಿಪವರುಮಾತ್ಮಬುದ್ಧಿಯು ಬಲದಿಂ ॥೧೬೩॥

ಅವೆರಡೂ ಇಂತು ಮಾತನಾಡುತಿರಲು, ಮಿತ್ರನಿಗೆ ಒದವಿದ ವ್ಯಸನದಿಂದ ಸಂಕಟಗೊಂಡ ಮಂಥರಕವು ಮೆಲ್ಲಮೆಲ್ಲನೆ ಅಲ್ಲಿಗೆ ಬಂದಿತು. ಅದಂ ನೋಡಿ ಲಘುಪತನಕವು ಹಿರಣ್ಯಕವಂ ಕುರಿತು ಇಂತೆಂದಿತು:—ಅಹಹ ! ಕಷ್ಟವೊದವಿತು.

ಹಿರಣ್ಯಕವೆಂದಿತು:—ಆಬೇಡನು ಬರುತಿರುವನೋ ?

ಅದೆಂದಿತು:—ಆ ಬೇಡನ ಮಾತಿರಲಿ. ಇದೊ ಮಂಥರಕನು ಬರುತಿರುವನು; ಇವನು ಮಾಡಿದುದು ಅನ್ಯಾಯ. ಏಕೆಂದರೆ, ಪಾಪಿಷ್ಠನಾದ ಆ ಬೇಡನು ಬಂದರೆ ನಾವೂ ಇವನ ನಿಮಿತ್ತದಿಂದ ನಾಶವನ್ನೈದುವೆವು. ಆದಕಾರಣ ನಾನು ಆಕಾಶಕ್ಕೆ ಹಾರುವೆನು. ನೀನು ಬಿಲವಂ ಹೊಕ್ಕು ಆತ್ಮರಕ್ಷಣೆಯಂ ಮಾಡಿಕೊಳುವೆ. ಚಿತ್ರಾಂಗನೂ ವೇಗದಿಂದ ದೂರ ಓಡಿಹೋಗುವನು. ನೆಲದಲ್ಲಿರುವ ಈ ಜಲಚರನ ಅವಸ್ಥೆ ಏನಾಗುವುದೋ !–ಎಂದು ವ್ಯಾಕುಲನಾಗಿರುವೆನು.

ಇಷ್ಟರಲ್ಲಿ ಮಂಥರಕವೂ ಬಂದುಸೇರಿತು.

ಹಿರಣ್ಯಕವೆಂದಿತು:—ಸಖನೆ ! ನೀನು ಮಾಡಿದುದು ತರವಲ್ಲ. ಇಲ್ಲಿಗೆ ನೀನು ಏಕೆಬಂದೆ ? ಆ ಬೇಡನು ಇಲ್ಲಿಗೆ ಬರುವಷ್ಟರಲ್ಲಿ ನೀನು ಥಟ್ಟನೆ ಹಿಂತಿರಿಗಿ ಹೊರಟುಹೋಗು.

ಮಂಥರಕವೆಂದಿತು:—ಮಿತ್ರನೆ ! ಏನಮಾಡಲಿ ? ಅಲ್ಲಿದ್ದುಕೊಂಡು ಮಿತ್ರವ್ಯಸನವೆಂಬ ಕಿಚ್ಚಿನ ಬೇಗೆಯಂ ಸಹಿಸಲಾರೆ. ಅದರಿಂದ ನಾನು ಇಲ್ಲಿಗೆ ಬಂದೆ. ಈ ಮಾತು ಯುಕ್ತವಾದುದು:-

ಕಂ॥ ಜಯಪೀವೌಷಧವೆನಿಪತಿ ।
ಶಯದ ಸುಹೃಜ್ಜನವದೆಡೆಯೊಳಿಲ್ಲದೊಡಹಹಾ

ಪ್ರಿಯಜನದಗಲ್ಕೆ ಮತ್ತಾ ।
ರಯೆ ಧನದ ವಿನಾಶಮಾರ್ಗ್ಗ ಸೈರಿಸಲಕ್ಕುಂ ॥೧೬೪॥
ಅಸುದೇಹವುದು ಲೇಸು ವಿಭಾ ।
ವಿಸೆ ನಿಮ್ಮನ್ನರದಗಲ್ಕೆ ಲೇಸೆನಿಸದು ತಾಂ ॥
ರಸೆಯೊಳ್ ಮಱುಮೆಯ್ಯೊಳ್ ಮ ।
ತ್ತಸುಗಳ್ ದೊರೆತಪುವು ದೊರೆವರೇ ನಿಮ್ಮನ್ನರ್ ॥

ಇಂತು ಅದು ಹೇಳುತಿರುವಾಗಲೇ ಕಿವಿದುದಿವರೆಗೂ ಬಿಲ್ಲ ನೆಳೆದು ಹಿಡಿದಿರುವ ಒಬ್ಬ ಬೇಡನು ಒಳಗೆ ಬಂದನು. ಇಲಿ ಅವನಂ ಕಂಡು ಆ ಕ್ಷಣದಲ್ಲಿ ಚಿತ್ರಾಂಗದ ಬಲೆಯ ಪಾಶವಂ ಕಡಿದು ಕತ್ತರಿಸಿತು. ಒಡನೆಯೆ ಚಿತ್ರಾಂಗವು ಹಿಂದೆ ನೋಡು ತ್ತ ಥಟ್ಟನೆ ಓಡಿತು. ಲಘುಪತನಕವು ಮರವನೇರಿತು. ಹಿರಣ್ಯ ಕವೂ ಹತ್ತಿರಿದ್ದ ಬಿಲವಂ ಪೊಕ್ಕಿತು. ಬಳಿಕ ಆ ಬೇಡನು ಜಿಂಕೆ ಹೊರಟುಹೋದುದರಿಂದ ವ್ಯರ್ಥವಾಗಿ ಆಯಾಸಗೊಂಡು ದುಗುಡದಿಂ ಕಂದಿದ ಮುಖವುಳ್ಳವನಾಗಿ, ನೆಲದಲ್ಲಿ ಮೆಲ್ಲಮೆಲ್ಲನೆ ಹೋಗುತಿದ್ದ ಆ ಮಂಥರಕವಂ ನೋಡಿ ಮತ್ತೆ ಮನದಲ್ಲಿ ಇಂತು ಆಲೋಚಿಸಿದನು:—ವಿಧಿ ಜಿಂಕೆಯನೇನೋ ಅಪಹರಿಸಿತು. ಆದ ರೂ ಈ ಆಮೆಯಂ ಆಹಾರಾರ್ಥವಾಗಿ ದಯೆಪಾಲಿಸಿರುವುದು. ಆದಕಾರಣ ಈಗ ಇದರ ಮಾಂಸವು ನನ್ನ ಮಡದಿಮಕ್ಕಳಿಗೆ ಆಹಾರವಾಗುವುದು.

ಎಂದಾಲೋಚಿಸಿ ಆ ಆಮೆಯಂ ದರ್ಭೆಗಳಂ ಮುಚ್ಚಿ ಬಿಲ್ಲಿ ನಲ್ಲಿ ಸೇರಿಸಿ ಹೆಗಲಮೇಲೆ ಹೊತ್ತುಕೊಂಡು ಮನೆಯಂ ಕುರಿತು ಹೊರಟನು.

ಇಷ್ಟರಲ್ಲಿ ಅದಂ ಹೊತ್ತುಕೊಂಡು ಹೋಗುತಿದ್ದುದಂ ಹಿರಣ್ಯಕವು ಕಂಡು ದುಗುಡದಿಂದ ರೋದಿಸಿತು:—ಕಷ್ಟ; ಅಯ್ಯೋ! ಕಷ್ಟವೊದವಿತು.

ಕಂ॥ ಜಳಧಿಯ ಪಾರಮನೆಂತಂ ।
ತಱಿಲೊಂದಱ ಕಡೆಯು ನೆಯ್ದದನಿತಱೊಳೇ ಸಂ ॥
ಗಳಿಸಿತು ಪೆಱತೊಂದೆನಗ ।
ಗ್ಗಳಿಪುವು ಸಮಯಂಗಳಲ್ಲಿ ಕೇಡುಗಳಕಟಾ ॥೧೬೬॥

ಎನ್ನೆವರಂ ಸ್ಖಲನಮುದಿ ।
ಲ್ಲನ್ನೆವರಂ ಸುಪಥದಲ್ಲಿ ನಡೆಗುಂ ಸುಖದಿಂ ॥
ಇನ್ನಾಸ್ಖಲನಂ ಸಮನಿಸೆ ।
ಬನ್ನಂ ಸಂಭವಿಪುದಲ್ತೆ ತಾನಡಿಗಡಿಗಂ ॥೧೬೭॥

ಅನುವಿಂದಂ ಬಾಗಿದ ಚೆ ।
ನ್ನೆನೆ ಸರಲತೆವಡೆದ ಮುತ್ತೆ ಯೆಡಱಿಱೊಳ್ ಧೃತಿಗಿಂ ॥
ಬೆನಿಸಿದ ಮೋಣ್ ಘನವಂಶದೆ ।
ಜನಿಸಿದ ಬಿಲ್ ಕೆಳೆ ಕಳತ್ರವಿಳೆಯೊಳ್ ವಿರಳಂ ॥೧೬೭॥

ಇನಿತುಂ ಬೇಱೆನಿಸದ ಮಿ ।
ತ್ರನೊಳೆಂತಪ್ಪುದು ಜನಕ್ಕೆ ನಂಬುಗೆಯಿರ್ಕ್ಕುಂ ॥
ಜನನಿಯೊಳಂ ಮಡದಿಯೊಳಂ ।
ತನಯನೊಳಂ ಭ್ರಾತೃವಿನೊಳಮಂತಹುದಿಲ್ಲಂ ॥೧೬೮॥

ಮೃತ್ಯು ನನ್ನ ಹಣವನ್ನೂ ನಾಶಪಡಿಸಿತು. ನಾನು ಅದಂ ಹುಡುಕುವುದರಲ್ಲಿ ಆಯಾಸಗೊಂಡಿರಲು, ನನ್ನ ವಿಶ್ರಾಂತಿಸ್ಥಾನ

ವಾದ ಮಿತ್ರನನ್ನೂ ಏಕೆ ಅಪಹರಿಸಿತೋ! ಇನ್ನು ಮಂಥರಕನಿಗೆ ಸಮನಾದ ಪರಮಮಿತ್ರನು ಎಲ್ಲಿಯೂ ಇಲ್ಲ.

ಕಂ॥ ಬಡತನದೆ ಮಹಾಲಾಭಂ ।
ಬಡೆವುದು ಮತ್ತಂ ರಹಸ್ಯಮಂ ನುಡಿವುದು ತಾ ॥
ನೆಡಱಂ ಕಳೆವುದುಮೇನೆ ಸಂ ।
ಗಡಿಪುವುಕೆಳೆಯೊಂದಿದಂಗೆ ಮೂಱು ಫಲಂಗಳ್ ॥೧೭೦॥

ಆದಕಾರಣ ಇನ್ನು ಇವನು ಹೋದಮೇಲೆ ನನಗೆ ಮತ್ತೊಬ್ಬ ಸ್ನೇಹಿತನಿಲ್ಲ. ಅಯ್ಯೋ! ಅದೇಕೆ ವಿಧಿ ದುಃಖಬಾಣಂಗಳಂ ನನ್ನ ಮೇಲೆ ವರ್ಷಿಸುವುದು ? ಮೊದಲು ಧನನಾಶ ; ಆ ಮೇಲೆ ಪರಿಜನಭ್ರಂಶ ; ಬಳಿಕ ದೇಶತ್ಯಾಗ ; ಅದಾದಮೇಲೆ ಮಿತ್ರವಿಯೋಗ. ಅಥವಾ ಲೋಕದಲ್ಲಿ ಬದುಕುವ ಎಲ್ಲಾ ಪ್ರಾಣಿಗಳಿಗೂ ಇದೇ ಪಾಡು. ಏಕೆಂದರೆ—

ಕಂ॥ ತನುವಿಂಗಪಾಯಮೆಂಬುದು ।
ಸನಿಹದೊಳಿರ್ದಪುದು ಚಣದೆ ಪೋಪುವು ಸಿರಿಗಳ್ ॥
ಅನುಬಂಧಂಗಳ್ ನಿಲ್ಲದೆ ।
ವಿನಾಶಮೊಂದುವುವು ಜಗದೆ ಮನುಜರ್ಗೆಲ್ಲಂ ॥೧೭೧॥

ಅಂತಲ್ಲದೆ—

ಅಡಿಗಡಿಗೇಱಿನೊಳಕ್ಕುಂ ।
ಪೊಡೆತಂ ಜಠರಾಗ್ನಿ ಚುರ್ಚುಗುಂ ಬಡತನದೊಳ್ ॥
ಎಡಱಿರೊಳ್ ಪಗೆಯುಗ್ಗಳಿಸುಗು ।
ಮೆಡೆಯೊದವಿದ ಪದದೆ ಕೇಡುಗಳ್ ಪೆರ್ಚಳಿಕುಂ ।

ಅಹಹ ! ಇದು ಯಾವನಿಂದಲೋ ಚೆನ್ನಾಗಿ ಹೇಳಲ್ಪಟ್ಟಿರುವುದು:—

ಕಂ|| ತಾಂ ಭಯಮೊದವಿದ ಸಮಯದೆ ।
ಬೆಂಬಲವೆನಿಸುವುದನೊಲ್ಮೆಗಂ ನಂಬುಗೆಗಂ ॥
ಇಂಬಾದುದನಾವಂ ಸೃಜ ।
ನೆಂಬೆರಡಕ್ಕರದ ಮಣಿಯನಿದನೆಸಗಿದನೋ ॥೧೭೩॥

ಇಷ್ಟರಲ್ಲಿ ಚಿತ್ರಾಂಗಲಘುಪತನಕಂಗಳು ಅಳುತ್ತ ಅಲ್ಲಿಗೇ ಬಂದುವು.

ಬಳಿಕ ಹಿರಣ್ಯಕವೆಂದಿತು:—ಅಯ್ಯಾ! ಮಂಥರಕವು ಕಣ್ಣಿಗೆ ಬೀಳದೆ ಇರುವಷ್ಟರಲ್ಲಿ ಇದಕ್ಕೆ ಬಿಡುಗಡೆಯಾಗಲು ಏನಮಾಡಬೇಕೆಂಬುದಂ ಆಲೋಚಿಸಿ. ಸುಮ್ಮನೆ ಗೋಳಿಡುವುದರಿಂದೇನು?

ಕಂ|| ಸಂದಿಸೆಯುದವೞಲಾವನ ।
ದೆಂದುಂ ಗೋೞಿಡುವ ಸಿರದೆ ಮೋಹದಿನವನೆ ॥
ಲ್ಲಂದದೆ ಮತ್ತಂ ವೃದ್ಧಿಯ ।
ನೊಂದಿಪನದನಲ್ಲದದಱ ಪಾರಮನೊಂದಂ ॥೧೭೪॥

ದಂದುಗಕೆ ತಕ್ಕ ಮದ್ದಂ ।
ಟೆಂದೊರೆವರ್ ನೀತಿಶಾಸ್ತ್ರಮಂ ಬಲ್ಲರದೇ ॥
ನೆಂದೆನೆಯೆಂದುಂ ಪಂಬಲ ।
ನೊಂದದೆ ಮನದಲ್ಲಿ ಸಂತವಿಪ್ಪುದೆಗಡ ಕೇಳ್ ॥

ಅಲ್ಲದೆ:—

ದೊರೆತುದನುೞಿ ಕಾಪಿಡಲುಂ ।
ದೊರೆವುದನಾರಯ್ದು ಬಿಡದೆ ಸಂಪಾದಿಸಲುಂ ॥

ಪೊರೆಯಲುಮೆಡೆಗುಡಸಿದನಂ ।

ನೆಱೆ ಮಂತ್ರಿಪುದಾವುದದುವೆ ಪರಮಂ ಮಂತ್ರಂ ॥ ೧೩೬ ॥

ಲಘುಪತನಕವು ಅದಂ ಕೇಳಿ ಹೇಳಿತು:—ಎಲೈ ! ಇಂತು ನೀನು ಹೇಳುವುದಾದರೆ ನನ್ನ ಮಾತನಾಲಿಸಿ. ಈ ಚಿತ್ರಾಂಗವು ಇವನು ಬರುವ ದಾರಿಯಲ್ಲಿ ಹೋಗಿ ಯಾವುದಾದರೂ ಒಂದು ಕುಂಟೆಯಂ ಸೇರಿ ಅದರ ದಡದಲ್ಲಿ ಉಸಿರಿಲ್ಲದಂತೆ ಬಿದ್ದಿರಲಿ. ನಾನು ಇವನ ತಲೆಯಮೇಲೆ ಕುಳಿತುಕೊಂಡು ಮೆತ್ತಗೆ ಕೊಕ್ಕಿನಿಂದ ಕುಕ್ಕುತಿರುವೆನು. ಇದಂ ಕಂಡು ಆ ಕೇಡಿಗನಾದ ಬೇಡನು ಇವನಂ ಸತ್ತವನೆಂದು ನಂಬಿ ಮಂಥರಕನಂ ನೆಲದಮೇಲೆ ಬಿಟ್ಟು ಚಿತ್ರಾಂಗನಿಗೋಸ್ಕರ ಸುತ್ತಾಡುವನು. ಇಷ್ಟರಲ್ಲಿ ನೀನು ದರ್ಭಮಯಂಗಳಾದ ಪಾಶಂಗಳಂ ಕಡಿದು ಚೂರುಮಾಡು. ಇದರಿಂದ ಮಂಥರಕನು ಥಟ್ಟನೆ ಕುಂಟೆಯಂ ಪುಗುವನು.

ಚಿತ್ರಾಂಗವೆಂದಿತು:—ಎಲೈ ! ನೀನಾಲೋಚಿಸಿದುದು ಸಮಂಜಸವಾಗಿದೆ. ನಿಶ್ಚಯವಾಗಿ ಮಂಥರಕನಿಗೆ ಬಿಡುಗಡೆಯಾಯಿತೆಂದು ತಿಳಿಯತಕ್ಕುದು. ಏಕೆಂದರೆ—

ಕಂ॥ ಫಲಸುವುದಂ ಫಲಿಸದುದಂ ।

ನೆಲದೊಳ್ ಜಂತುಗೆ ಜನಿಪ್ಪ ಮನದುತ್ಸಾಹಂ ॥

ಸಲೆ ಮುನ್ನಮೆ ತಿಳಿಯಿಸುಗುಂ ।

ದಲವಂ ಬುಧನಱಿವನಂತು ಪೆಱನಱಿತಪನೇ ॥ ೧೩೭ ॥

ಆದಕಾರಣ ಇಂತು ಮಾಡತಕ್ಕುದು.

ಅಂತುಮಾಡಲು, ಆ ಬೇಡನು ಅದೇಪ್ರಕಾರದಿಂದ ದಾರಿಯ ಹತ್ತರಿದ್ದ ಕುಂಟೆಯದಡದಲ್ಲಿ ಕಾಗೆಯೊಡನಿದ್ದ ಜಿಂಕೆಯಂ

ಕಂಡನು. ಕಂಡು ಸಂತೋಷಗೊಂಡು ಇಂತಾಲೋಚಿಸಿದನು:- ಈ ಕೆಟ್ಟ ಜಿಂಕೆ ನಿಶ್ಚಯವಾಗಿ ಬಲೆಯಿಂದ ಬಿಗಿಯಲ್ಪಟ್ಟು ಪ್ರಾಣಬಿಡುವಂತಿದ್ದಿತು. ಯಾವರೀತಿಯಿಂದಲೋ ಬಲೆಯಂ ಕತ್ತರಿಸಿಕೊಂಡು ಈ ಅಡವಿಗೆ ಬಂದು ಸತ್ತುಹೋಗಿದೆ. ಈ ಆಮೆ ಚೆನ್ನಾಗಿ ಬಂಧಿಸಲ್ಪಟ್ಟಿರುವುದರಿಂದ ಸ್ವಾಧೀನವಾಗಿಯೇ ಇದೆ. ಆದಕಾರಣ ಈ ಜಿಂಕೆಯನ್ನೂ ತೆಗೆದುಕೊಳ್ಳುವೆನು.

ಎಂದಾಲೋಚಿಸಿ ಆಮೆಯಂ ನೆಲದಲ್ಲಿ ಇಟ್ಟು ಜಿಂಕೆಯ ಬಳಿಗೆ ಓಡಿದನು. ಇಷ್ಟರಲ್ಲಿ ಹಿರಣ್ಯಕವು ಸುತ್ತಿದ್ದ ಆ ದರ್ಭೆಯಂ ವಜ್ರಕ್ಕೆ ಸಮವಾದ ಕೋರೆಹಲ್ಲಿಂದ ಕಡಿದು ಚೂರುಮಾಡಿತು.

ಮಂಥರಕವೂ ದರ್ಭೆಯ ಕಂತೆಯೊಳಗಣಿಂದ ಹೊರಟು ಹತ್ತಿರಿದ್ದ ಕುಂಟೆಯಂ ಹೊಕ್ಕಿತು. ಜಿಂಕೆಯೂ ಅಲ್ಲಿ ಅವನಿಗೆ ಸಿಕ್ಕದೆ ಕಾಗೆಯೊಡನೆ ಓಡಿತು. ಬೇಡನು ಅಚ್ಚರಿಗೊಂಡು ವ್ಯಸನಪಡುತ್ತ ಹಿಂತಿರುಗಿ ನೋಡುವಷ್ಟರಲ್ಲಿ ಆಮೆ ಹೊರಟು ಹೋಗಿದ್ದಿತು. ಬಳಿಕ ಅಲ್ಲಿ ಕುಳಿತುಕೊಂಡು ಈ ಪದ್ಯವಂ ಪಠಿಸಿದನು:—

ವೃ॥ ಬಲೆಯೊಳ್ ಸಿಲ್ಕಿದದೊಂದು ಪೆರ್ಮೃಗಮುಮಂ ನೀಂ
ಕೊಂಡೆ ನಿನ್ನಾಜ್ಞೆಯಿಂ । ತೊಲಗಿತ್ತೆತ್ತಲೊ ಭೋಂಕನೆನ್ನ
ಬೞಿಯಲ್ಲಿರ್ದ್ದಾಮೆಯುಂ ಕ್ಷುತ್ತುಗೊಂ ॥ ಡಲೆವೇನಕ್ಕಟ
ಮಕ್ಕಳಂ ಮಡದಿಯುಂ ಬಿಟ್ಟಂತು ನಾಂ ಕಾಡೊಳಿಂ ದೆಲೆಕಾಲಾ
ಪೇೞತೇನೊ ಗೆಯ್ಯುದುಮನಾಂ ಸೈಸಲ್ಕೆವೇೞ್ಕುಂ ಗಡಾ ॥೧೭೮॥

ಇಂತು ಬಹುವಿಧವಾಗಿ ವ್ಯಸನಪಟ್ಟು ತನ್ನ ಮನೆಗೆ ಹೊರಟನು. ಅವನು ದೂರ ಹೊರಟುಹೋದಮೇಲೆ ಆ ಕಾಗೆಯಾಮೆ

ಜಿಂಕೆಯಿಲಿಗಳೆಲ್ಲವೂ ಪರಮಾನಂದಭರಿತಂಗಳಾಗಿ ಪರಸ್ಪರಾಲಿಂಗನಂಗೈದು ತಾವು ಮತ್ತೆ ಜನಿಸಿದಂತೆ ಭಾವಿಸಿ ಅದೇ ಸರೋವರವಂ ಸೇರಿ ಮಹತ್ತಾದ ಸುಖದಿಂ ಕೂಡಿ ಸುಭಾಷಿತಕಥಾಗೋಷ್ಠೀವಿನೋದದಿಂದ ಕಾಲವಂ ಕಳೆಯುತಿದ್ದುವು.

ವಿವೇಕಿಯಿಂತುತಿಳಿದು ಮಿತ್ರಸಂಗ್ರಹವಂ ಮಾಡಬೇಕು. ಮಿತ್ರನೊಡನೆ ಕಪಟವೃತ್ತಿಯಿಂದಿರಬಾರದು. ಈ ವಿಷಯವಿಂತು ಹೇಳಲ್ಪಟ್ಟಿರುವುದು:—

ಕಂ|| ಗೆಳೆಯರನದಾವಪುರುಷಂ
ಗಳೆಯಿಪನೋ ಮತ್ತೆ ಕೊಂಕಿನಿಂ ನಡೆಯನೊ ತಾಂ ||
ಕೆಳೆಗೊಂಡವಂದಿರೊಡನವ
ಲಿಳೆಯಲ್ಲೀಳಿದನುನೆಯ್ದ ನೆಲ್ಲಂದದೊಳಂ ||೧೭೯||

ಇಂತು ಮಹಿಶೂರಪುರೀಸೀತಾರಾಮಕವಿಯಿಂ ವಿರಚಿತವಾದ
ಕರ್ಣಾಟಪಂಚತಂತ್ರದೊಳ್ ಮಿತ್ರಸಂಪ್ರಾಪ್ತಿ ಯೆಂಬ
ದ್ವಿತೀಯತಂತ್ರಂ ಸಂಪೂರ್ಣಂ.

ಟಿಪ್ಪಣಿ.

೧. ಬಹುಶ್ರುತರ್-ಬಹುವಾಗಿ ವಿಷಯಗಳನ್ನು ಅವಧರಿಸಿದವರು, ಅಥವಾ ಬಹುವಾದ ಶಾಸ್ತ್ರಪರಿಚಯವುಳ್ಳವರು. ವಿದ್ವಾಂಸರ್ಕಳ್-(ಅರುವಿನಮೇಲೆ ಕಳಾಗಮಬಂದಿದೆ) ವಹಿಲದೆ-ಶೀಘ್ರದಿಂದ. (ಬೇಗನೆ) ಕಜ್ಜಂಗಳ-ಕಾರ್ಯಗಳ. (ಸಂಸ್ಕೃತ) ಕಾರ್ಯ; ದ್ವಿತೀಯಾರ್ಥದಲ್ಲಿ ಷಷ್ಠಿ. ಎರಳ್-ಜಿಂಕೆ. ಆಮೆಗಳಾವ್ರೋಲ್-(ವ್ರೋಲ್ ಪರವಾದಾಗಲೂ ಷಷ್ಠಿಗೆ ದೀರ್ಘವುಂಟು.)

೨. ಮಿಗಂ-(ಸ್ಕೃ) ಮೃಗ. ಜಾತ್ಯೇಕವಚನ ; ಮೃಗಗಳೆಂದರ್ಥ. ಖಗಂ ಮುಂತಾದೆಡೆಗಳಲ್ಲಿಯೂ ಜಾತ್ಯೇಕವಚನ ಹೇಳದೆ. ಕೋಟರಂಗಳೊಳ್-ಪೊಟ್ಟರೆಗಳಲ್ಲಿ. ಕೋಡಗಂ-ಕೋತಿ, ಅಳಿ-ಭ್ರಮರ. (ಅಳಿ-ನಾಶಗೊಳ್) ನಱುವ್ರೂವಂ-ಸುವಾಸನೆಯುಳ್ಳ ಹೂವನ್ನು. ಬಡರ್ಚುವ-ಉಂಟುಮಾಡುವ.

೩. ಅಳವಡೆ-ಹೊಂದಿಕೆಗೊಂಡಿರಲು. ಅಳಿವು-ನಾಶ. ಆಕಸ್ಮಿಕಂ-ಥಟ್ಟನೆ ಉಂಟಾದುದು. ಗಾಂಪರ್ಗೆ-ಮೂಢರಿಗೆ.

೪. ಪೆಣರಾ-(ಷಷ್ಠಿಯಲ್ಲಿ ದೀರ್ಘಬಂದಿದೆ) ಪೆಂಡಿರ-ಮಡದಿಯರನ್ನು. ಪೊಂಮಿಗಂ-ಕಾಂಚನಮೃಗ. ಆರಯ್ದರಿಲ್ಲಂ-ವಿಚಾರ ಮಾಡಲಿಲ್ಲ. ಎಡರ್ಗೆ-ಕಷ್ಟಕ್ಕೆ. ಅಕ್ಷಕ್ರೀಡೆಯಂ ನೆಗಳ್ದು-ಪಗಡೆಯಾಟವಾಡಿ. ಸಾರ್ದಿರೆ-ಸಮೀಪಸ್ಥವಾಗಿರಲು. ಗಾಂಪೇಱಿದ-ಮೂಢತೆಯಿಂದ ಕೂಡಿದ. ನೀಡುಂ-ಅಧಿಕವಾಗಿ. ಕುಂದುಗುಂ-ಕ್ಷೀಣವಾಗುವುದು.

೫ ಪತ್ತಿರೆ-ಸಂಬಂಧಿಸಿರಲು, "ಪತ್ಲು-ಸಂಶ್ಲೇಷೆ" ಎಂದು ಧಾತ್ವರ್ಥ. ಮಿಱ್ತುವಪಾಶಂ-ಮೃತ್ಯುಪಾಶವು, ಮತ್ತಂ-ಮತ್ತು. ಬಿದಿಯಿಂದೆ-ದೈವದಿಂದ (ಸ್ಕ್ರ) ವಿಧಿ. ಕಲುಷವೊಂದಿರೆ-ದೋಷ ಯುಕ್ತವಾಗಿರಲು. ಎತ್ತಂ-ಎಲ್ಲಾ ವಿಷಯದಲ್ಲಿಯೂ, ಕೊಂಕಿಂ-ವಕ್ರತೆಯಿಂದ, ಪಸರಿಕುಂ-ಪ್ರಸರಿಸುವುದು. ಪಿರಿಯರ-ದೊಡ್ಡವರ.

೬. ದುಗುಡಂಗಳೊಳ್-ದುಃಖಗಳಲ್ಲಿ. ನಿಕ್ಕುವಂ-ನಿಶ್ಚಯ ವಾಗಿ. ಅನುಭಾವದಿಂ-ಪ್ರಭಾವದಿಂದ. ಅವಱ-ಆದುಃಖಗಳ. ಅಂತಂ-ಕಡೆಯನ್ನು. (ಇದು ಅಂತು ಶಬ್ದದ ದ್ವಿತೀಯಾವಿಭಕ್ತಿ. ಬಿರುದ-ಬಿರುದು. ರೂಪ-ರೂಪು ಎಂಬಂತೆ ಅಕಾರಾಂತವಾದ ಅಂತ ಶಬ್ದಕ್ಕೆ ಉತ್ಪಬಂದಿದೆ) ಗಡ-ಅಲ್ಲವೆ. (ಇದು ಅವ್ಯಯ; ಗಡ, ಗಡಂ ಗಳ. ಗಳಂ-ಎಂದು ನಾಲ್ಕುರೂಪವುಂಟು).

೭. ಅಹಹಾ-(ಇದು ಆಶ್ಚರ್ಯವಾಚಕವಾದ ಅವ್ಯಯ. ಬೇರೆಡೆಯಲ್ಲಿ ಇದಕ್ಕೆ ಖೇದಾರ್ಥಕತ್ವವೂ ಉಂಟು. ಅಹಹ, ಅಹಹಂ, ಅಹಹಾ-ಎಂದು ಮೂರುತೆರವುಂಟು.) ಪರಿಕಿಸೆ-ಪರೀಕ್ಷಿಸಲು. ತರಣಿ--ಸೂರ್ಯ; (ಬೇರೆಡೆಯಲ್ಲಿ ಅರ್ಥಾಂತರ ಹಡಗು.) ಕೆಚ್ಚನೆ-ಕೆಂಪಗೆ. ನಿರಿಕಿಸೆ-ನೋಡಲು. (ಪರೀಕ್ಷಾ-ಪರಿಕೆಎಂಬಂತೆ ನಿರೀಕ್ಷಾ-ಎಂಬುದರ ಅಪಭ್ರಂಶ ನಿರಿಕೆ-ಎಂದಾಗುವುದು. ಇದಕ್ಕೆ ಇಸು ಪ್ರತ್ಯಯ ಸೇರಿ ಲೋಪವಾಗಿ "ಪರಿಕಿಸು" ಎಂಬಂತೆ ನಿರಿಕಿಸು-ಎಂದು ಧಾತುವಾಗಿರುವುದು.)

೮. ತಂತುಗಳ್—ಎಳೆಗಳು. ಒದಂತೆ--ಬಂದೆ-ಸಮವಾಗಿ. ಅಂತ-ಹೊಂದಲ್ಪಟ್ಟ. ಉಪಟಳಮಂ-ಕಷ್ಟವನ್ನು. ಪೋಲ್ಗಂ-

ಹೋಲುವರು. ಇಲ್ಲಿ ಸತ್ಪುರುಷರಿಗೂ-ಎಳೆಗಳಿಗೂ ಹೋಲಿಕೆ ಹೇಳಲ್ಪಟ್ಟಿದೆ. ಎಳೆಗಳು ಒಂದೇಸಮವಾಗಿ ಹಲವು ಸೇರಿರು ವುದರಿಂದ ಬಿಗಿದುಕಟ್ಟಲ್ಪಟ್ಟರೂ ಆ ನಿರ್ಬಂಧವಂ ಎಂತು ತಾಳುವುವೋ ಅಂತು ಸತ್ಪುರುಷರು ತಾವು ಒಗ್ಗಟ್ಟನಿಂ ಕೂಡಿ ರುವುದರಿಂದ ತಮಗೆ ಎಂತಹ ಕಷ್ಟವೊದವಿದರೂ ಸಹಿಸುವರೆಂದು ತಾತ್ಪರ್ಯ.

೯. ವಲಂ-ಅಧಿಕವಾಗಿ, (ಬೇರೆಡೆಯಲ್ಲಿ ನಿಶ್ಚಯವೆಂದೂ ಅರ್ಥವುಂಟು.) ಒಯ್ಯನೆ-ಬೇಗನೆ, (ಬೇರೆಡೆಯಲ್ಲಿ ಮೆಲ್ಲಗೆ ಎಂದೂ ಅರ್ಥ.)

೧೦. ಆಗದುದು-ಆಗದೆಇರತಕ್ಕುದು. ಅದಾವಗಂ-ಯಾವಾ ಗಲೂ. (ಕನ್ನಡದಲ್ಲಿ ಅಲಂಕಾರಾರ್ಥವಾಗಿ ಎಂದು, ಏನು, ಎಲ್ಲಿ, ಎಂತು-ಮೊದಲಾದವುಗಳಿಗೆ ಹಿಂದೆ "ಅದು" ಎಂಬುದನ್ನು ಸೇರಿಸು ವುದುಂಟು.) ಆಗುವುದು-ಆಗತಕ್ಕುದು.

೧೧. ಬಿದಿ-ವಿಧಿ. ಅನನುಕೂಲಂ-ಪ್ರತಿಕೂಲವು. ಎಂತಾ ನುಂ-ಹೇಗಾದರೂ. (ಸರ್ವನಾಮಕಾಲಾದಿವಾಚಕಗಳಿಗೆ ಕಡೆಯಲ್ಲಿ, ಆದರೂ ಎಂಬ ಅರ್ಥವುಳ್ಳ ಆನುಂ-ಎಂಬ ಅವ್ಯಯವು ಸೇರಿ ಸಲ್ಪಡುವುದು.) ಮುನ್ನಿರ್ದುದುಮಂ-ಮೊದಲಿದ್ದುದನ್ನೂ. ಈಡ್ಚಿ ಕೊಂಡು-ಎಳೆದುಕೊಂಡು.

೧೨. ಎಡರ್ಗಳ್-ಕಷ್ಟಗಳು. (ಇದು ವಿಘ್ನಾರ್ಥಕವೂ ಆಗುವುದುಂಟು. ಅದರಿಂದಲೆ "ಎಡರ್ಗೇಡಿ" ಎಂದು ವಿಘ್ನೇಶ್ವ ರನಿಗೆ ಹೆಸರು.) ಆದಾರ್ಗಮಂ-ಯಾರಿಗಾದರೂ. ಒಲ್ದು-ಪ್ರೀತಿ ಗೊಂಡು. ವಾಙ್ಮಾತ್ರದಿನಾದೊಡಂ-ಬಾಯ್ಮಾತಿನಿಂದಲಾದರೂ.

ಇಂ-ಇನ್ನು. ಪೆಱಂ-ಇತರನು. ಆವೊಂ-ಯಾವನು; (ಪದಾಂತ್ಯ ವಾದ ಅಕಾರಕ್ಕೆ ವಿಕಲ್ಪವಾಗಿ ಒಕಾರಬರುವುದುಂಟು. ಇದ ರಂತೆ ನುಡಿದಂ-ನುಡಿದೊಂ.)

೧೩. ಪಲ್ಲಿಲಿವಾವುಂ-ಹಲ್ಲಿಲ್ಲದಹಾವೂ, (ಪಲ್ಲಿಲ್ಲದುದು-ಪಲ್ಲಿಲಿ. ಬಹುವ್ರೀಹಿಸಮಾಸದಲ್ಲಿ ಇಲ್ಲ ಎಂಬುದು ಇಲಿ ಎಂದಾ ಗುವುದು; ಇದರಂತೆ ನಾಣಿಲಿ ಜಾಣಿಲಿ. ಪಲ್ಲಿಲಿ+ಪಾವು ಎಂಬು ದಕ್ಕೆ ಸಮಾಸದಲ್ಲಿ ವತ್ವ ಬಂದು ಪಲ್ಲಿಲಿವಾವುಂ—ಎಂದಾಗಿದೆ.) ಮಾತಂಗಮುಂ—ಆನೆಯೂ. ಸೊಲ್ಲಿಪುದೇಂ-ಹೇಳುವುದೇನು. ಪೊ ನಱ್ದ-ವಿಶಾಲವಾದ.

೧೪. ಧುರಂ-ಯುದ್ಧ. ನೆರೆದಿರೆ-ಸೇರಿರಲು, ಱಾಂತವಾದ ನೆಱೆ ಎಂಬ ಧಾತು ಪೂರ್ಣತೆ, ಸಾಮರ್ಥ್ಯ-ಎಂಬ ಎರಡರ್ಥಗಳು ಳ್ಳದು. ಪ್ರಯೋಗ:—ನೆಱೆವೆಱೆ: ನೆಱೆದಂ ಭೂತಳರಾಜ್ಯ ಭೂರಿಭರಮಂ ತಾಳಲ್ಕೆ. ರೇಫಾಂತವಾದ ನೆರೆ ಎಂಬ ಧಾತುವಿಗೆ ಸಂಯೋಗ ಎಂದರೆ ಸೇರುವುದು-ಎಂಬರ್ಥವು. ಈ ಅರ್ಥದಲ್ಲಿ ನೆರೆ ಎಂದು ರೇಫಾಂತವೇ ಹೊರತು, ನೆಱೆ ಎಂದು ಱಾಂತವಲ್ಲ. ಪ್ರಯೋಗ.—ನೆರೆದಹಮಿಂದ್ರರ ತನುಪರಿ । ಕರದ ನೆಟಿಲ್ಗಳ್ ಪಳಚ್ಚನೆಸೆದಿರೆ ನೋಟ ॥ ಕ್ಕೆರಡನೆಯ ನಾಕಲೋಕದ । ವಿರ ಚಿಸೆಯನೆ ಪಡೆವುದದಱ ರನ್ನದ ಕೇರ್ಗಳ್ ॥ ಆದಿಪುರಾಣ ಆಶ್ವಾಸ ೬, ಪದ್ಯ ೩೩. ಸಾಸಿರಂ-ಸಹಸ್ರ. ಅರರೇ-ಇದು ಆಶ್ಚರ್ಯ ವಾಚಕಾವ್ಯಯ. ಲಕ್ಕಗುದುರೆಗಳಿರೆಯುಂ--ಲಕ್ಷ ಕುದುರೆಗಳಿ ದ್ದರೂ.

೧೫. ಬರೆಯುಂ-ಬಂದರೂ. ನೂರ್ವರ್-ನೂರುಮಂದಿಗಳು.

ಕೋಂಟೆಯೊಳ್--ಕೋಟೆಯುಲ್ಲಿ. ಎಚ್ಚಪಂ--ಬಾಣವಂಬಿಡು ವನು. (ಬಾಣವಿಮೋಚನಾರ್ಥಕವಾದ ಇಸು ಧಾತುವಿಗೆ ದದಪಪ್ರ ತ್ಯಯುಗಳು ಸೇರಿದರೆ ಆದಿಯ ಇಕಾರಕ್ಕೆ ಎತ್ವವೂ ಸುಕಾರಕ್ಕೆ ವ್ಯಂಜನಚಕಾರವೂ ಬರುವುದು). ತಿರೆಯೊಳ್--ಭೂಮಿಯಲ್ಲಿ. (ಸಂಸ್ಕೃತ) ಸ್ಥಿರಾ. ನೆಱಿ-ಚೆನ್ನಾಗಿ (ಅವ್ಯಯ) ತಿಳವು-ಜ್ಞಾನ.

೧೬. ಬಡರಿಸುವ-ಉಂಟುಮಾಡುವ. ಸೇಹವೊಂದಿದ-ಸ್ನೇಹವನ್ನು ಹೊಂದಿದ. ವಂದಿತರ್-ಸ್ತುತಿಯಿಸಲ್ಪಟ್ಟವರು. (ಶ್ರೇಷ್ಠರು) ಗೃಹಿಗಳ-ಗೃಹಸ್ಥರ. ಬರ್ಪರಲ್ತು-ಬರುವವರಲ್ಲ ಅಡಿಗಡಿಗಂ-ಆಗಾಗ.

೧೭. ವೀಳೆಯುಮುಂ-ತಾಂಬೂಲವೂ. ಭುವಿ(ಸಂ)ಭೂಮಿ. ನೆಗೞ್ದ-ಪ್ರಸಿದ್ಧವಾದ. ಕತೆ (ಸಂ) ಕಥಾ. ಬಳ್ಗೆಳೆಯಂ-ಬಳ್ಳೆಯ ಸ್ನೇಹಿತನು. ನವನವಂ-ಹೊಸಹೊಸತು. ನಿಚ್ಚಂ (ಸಂ) ನಿತ್ಯಂ.

೧೮. ಅನುದಿನಮುಂ-ಪ್ರತಿದಿನವೂ. ಘನ-ಶ್ರೇಷ್ಠವಾದ. ಸಾಟಿ-ಸಮಾನ.

೧೯. ಬದವು-ಪ್ರಾಪ್ತಿ. ಸಮಂತು-ಚೆನ್ನಾಗಿ. ದಲ್-ನಿಶ್ಚಯುವಾಗಿ. ಯಾವುದರದೆಸೆಯಿಂದ, ಯಾವುದರಿಂದ, ಯಾವಾಗ, ಹೇಗೆ, ಯಾವುದು, ಎಷ್ಟು, ಎಲ್ಲಿ ಆಗಬೇಕಾದುದೋ ಅದರದೆಸೆಯಿಂದ, ಅದರಿಂದ, ಆಗ, ಹಾಗೆ, ಅದು, ಅಷ್ಟು ಅಲ್ಲಿ ದೈವಯೋಗವಿಂದಾಗುವುದೆಂದು ಅರ್ಥ.

೨೦. ನೂರಾಱುಂಯೋಜನದಿಂ-ನೂರಾರುಗಾವುದಕ್ಕಿಂತ.(ಇಲ್ಲಿ ನೂರಾರೆಂಬುದು ಸಾವಿರಾರು ಎಂಬಂತೆ ಸಂಖ್ಯೆಯ ಉಪಲಕ್ಷ

ಉ; ಅನೇಕವೆಂದರ್ಥ.) ಪಕ್ಕಿ; (ಜಾತ್ಯೇಕವಚನ ; ಪಕ್ಷಿಗಳೆಂದರ್ಥ.) ಆರಯೆ-ವಿಚಾರಮಾಡಿನೋಡಲು.

೨೧. ರವಿಶಶಿಗಳ್ಗ-ಸೂರ್ಯಚಂದ್ರರಿಗೆ. ಅಪ್ಪ-ಉಂಟಾಗುವ ಉಪರಾಗವಂ--ಗ್ರಹಣವನ್ನು. ಪಾವ--ಹಾವಿನ; (ಇನಾಗಮ ವಿಕಲ್ಪ) ಪಕ್ಕಿಯಾ-(ಷಷ್ಠಿಯಲ್ಲಿ ದೀರ್ಘವುಂಟು) ಇಲ್ಲಿಯೂ ಜಾತ್ಯೇಕವಚನ; ಆನೆಗಳ ಪಾವುಗಳ ಹಕ್ಕಿಗಳ-ಎಂದರ್ಥ. ಕವಿಗಳ-ವಿದ್ವಾಂಸರ. ಬಿದಿ-ದೈವಯೋಗವು. ಬಲ್ಲಿತು-ಬಲಿಷ್ಠ.

೨೨. ಬಾನೊಳ್-ಅಂತರಿಕ್ಷದಲ್ಲಿ. ಪಕ್ಕ-ಆಶ್ರಯ. (ಸಂ) ಪಕ್ಷ. ಪಕ್ಕಿ-ಪಕ್ಷಿಗಳು. ಮೇಣ್-ಮತ್ತು. ಮೀನ್-ಮೀನುಗಳು. ಎಯ್ದಿರ್ದೊಡಂ-ಸೇರಿದ್ದರೂ. ಬಂಧಿಕುಂ-ಬಂಧಿಸಲ್ಪಡುವುವು. ತಾಣ (ಸಂ) ಸ್ಥಾನ. ಜವಂ-ಯಮ; (ತದ್ಭವ) ಗೆಂಟಿಂದೆಯುಂ-ದೂರದಿಂದಲೂ; ಗೆಂಟು ಶಬ್ದಕ್ಕೆ ಸಮೀಪಾರ್ಥಕತ್ವವೂ ಉಂಟು. ಸಂಸ್ಕೃತದಲ್ಲಿ "ಆರಾತ್" ಎಂಬುದಕ್ಕೆ ದೂರ ಮತ್ತು ಸಮೀಪ-ಎಂಬ ಎರಡರ್ಥಗಳಿರುವಂತೆ ಕನ್ನಡದ "ಗೆಂಟು" ಎಂಬುದಕ್ಕೂ ದೂರ ಮತ್ತು ಸಮೀಪ-ಎಂಬ ಅರ್ಥದ್ವಯವುಂಟು.

೨೩. ಅನುವಿಂ-ರೀತಿಯಿಂದ. ಎಯ್ದೆ-ಚೆನ್ನಾಗಿ. ವಿತರಣಂ-ಕೊಡುವಿಕೆ. ಮನವೊಲ್ದರ್-ಮನಸ್ಸಿನಲ್ಲಿ ಪ್ರೀತಿಯುಳ್ಳವರು.

೨೪. ವಿಭವಕೆ-ಐಶ್ವರ್ಯಕ್ಕೆ. ಇಭವುಂ-ಆನೆಯೂ. ಯೂಥಪತಿ-ಗುಂಪಿನ ಅಧಿಪತಿ; (ಸಲಗ.) ಇಭರಿಪು-(ಆನೆಗಳಿಗೆ ಶತ್ರು) ಸಿಂಹ. ಮಿಗಂಗಳ್-ಮೃಗಗಳು. ಇರವು-ಇರುವುದಿಲ್ಲ. (ಇರ್ ಧಾತುವಿನ ನಪುಂಸಕನಿಷೇಧಬಹುವಚನರೂಪ. ಭಾವನಾಮವೂ "ಇರವು" ಎಂದಾಗುವುದು.

೨೫. ದಂದುಗ--ದುಃಖ. ಪರದೊಳ್--ಪರಲೋಕದಲ್ಲಿ. ಬಂದದಿರಂ--ಹೊಂದದೆಇರುವುದಿಲ್ಲ. ಇಹದೆ--ಈಲೋಕದಲ್ಲಿ. (ಸಂಸ್ಕೃತದ ಅವ್ಯಯಗಳಾದ ಇಹ ಪರತ್ರ ಎಂಬಿವೆ ಮುಂತಾದವುಗಳ ಮೇಲೆ ವಿಭಕ್ತಿಗಳು ಹತ್ತುವುವುಂಟು.) ಕೋಟಲೆಗೊಳ್ವಂ-ಸಂಕಟ ಪಡುವನು.

೨೬ ತೊಟ್ಟಿರೊಳ್-ಸೇವಕರಲ್ಲಿ. ಓವಲ್-ರಕ್ಷಿಸಲು. ನೆಱವಂ-ಸಮರ್ಥನಾಗುವನು.

೨೭. ಅರಿದು-ಅಸಾಧ್ಯ. ಅರ್ಥಂಗಳುಮಂ-ಕಾರ್ಯಗಳನ್ನೂ. ಗಳಿಯಿಸವೇೞ್ಕುಂ-ಸಂಪಾದಿಸಬೇಕು.

೨೮. ಅಱಿತರ್-ತಿಳಿದವರು. (ಕೃದಂತ) "ಅಱಿ" ಎಂಬೀ ಧಾತು ಕವಲಾದಿಗಣಪರಿಪಠಿತವಾದುದು. ಕವಲಾದಿಗಣವೆಂದರೆ-ಕವಲ್ ಮುಂತಾದ ಕೆಲವು ಧಾತುಗಳ ಸಮುದಾಯ. ಕವಲಾದಿ ಗಣಪಠಿತವಾದ ಧಾತುಗಳ ಮುಂದಣ ದಕಾರಕ್ಕೆ ತಕಾರಾದೇಶ ಬರುವುದು.) ಪರಿಪೂರ್ಣತೆವಡೆದಿರ್ದುಂ-ಪರಿಪೂರ್ಣತ್ವವನ್ನು ಪಡೆದಿದ್ದರೂ. ಶರನಿಧಿ-ಸಮುದ್ರ. (ಶರಶಬ್ದವಿಲ್ಲಿ ಜಲಾರ್ಥಕವು.)

೨೯. ಕೆಳೆ-ಸ್ನೇಹ. ಕೊಳ್ಕುಡೆ-ತೆಗೆದುಕೊಳ್ಳುವುದು ಕುಡುವುದು; (ಮದುವೆ.) ಸವಸಿಸಲು-ಪ್ರಾಪ್ತವಾಗಲು. ಕಿಱಿಯ ಪಿರಿಯರ್ಗೆ-ಚಿಕ್ಕವರಿಗೂ ದೊಡ್ಡವರಿಗೂ.

೩೦. ಸರಿತನಗೆಂದೆನಿಸದಿರ್ಪನಂ-ತನಗೆ ಸಮನಲ್ಲದವನನ್ನು. ನಾಡೆ-ಚೆನ್ನಾಗಿ. ನಗೆಗೆ-ಹಾಸ್ಯಕ್ಕೆ.

೩೧. ಮಚ್ಚರಿಪ--ದ್ವೇಷಿಸುವ. ಬೆಚ್ಚೊಡಂ--ಸೇರಿಕೊಂಡರೂ; "ಬಿಸು-ಲೋಹಸಂಧಾನೇ" ಎಂಬ ಧಾತ್ವರ್ಥ. ಪಾತ್ರಗಳ

ಬಿಸುಗೆ (ಬೆಸಿಗೆ)-ಎಂದು ರೂಢಿಯುಲ್ಲುಂಟು. ಇದು ಸಾಮಾನ್ಯವಾದ ಸೇರುವಿಕೆಯುಲ್ಲಿಯೂ ಪ್ರಯೋಗಿಸಲ್ಪಡುವುದು. "ಎಚ್ಚಪಂ" ಎಂಬಂತೆ ಈ ಬಿಸುಧಾತುವಿಗೂ ದದಪಗಳು ಪರವಾದಾಗ ಆದಿಯ ಇತ್ವಕ್ಕೆ ಎತ್ವವೂ ಕಡೆಯ ಸುಕಾರಕ್ಕೆ ವ್ಯಂಜನಚಕಾರವೂ ಬರುವುದು. ಬೆಚ್ಚಸೆ-ಬೆಚ್ಚಗೆ. ಕಾಸಿದ, "ಕಾಸುದಾಹೇ" ಎಂದು ಧಾತ್ವರ್ಥ. ಚೆಚ್ಚರದಿಂ-ಶೀಘ್ರದಿಂದ "ಚೆಚ್ಚರಂ" ಎಂದು ಅವ್ಯಯುವೂ ಉಂಟು. ಬೆಂಕೆ-ಬೆಂಕಿ.

೩೦. ಅಸವಸದಿಂ-ಥಟ್ಟನೆ. ನಶಿಪುದು-ನಾಶಹೊಂದುವುದು. (ನಶನ ಎಂಬ ಸಂಸ್ಕೃತಭಾವನಾಮಕ್ಕೆ ಇಸುಪ್ರತ್ಯಯು ಸೇರಿ "ನಶಿಸು" ಎಂದು ಧಾತುವಾಗಿದೆ) ಅಸುದೆಱುವುದು-ಪ್ರಾಣವೊಪ್ಪಿಸುವುದು. ಸಹಜ-ತನಗೆ ತಾನೇ ಉಂಟಾದುದು.

೩೩. ಪಗೆಯಂ-ಶತ್ರುತ್ವವನ್ನು. (ಪಗೆಯೆಂಬುದು ಶತ್ರುವಾಚಕವೂ ಶತ್ರುತ್ವವಾಚಕವೂ ಆಗುವುದು.) ಆಂಪಂ-ಹೊಂದುವನು. (ಆನ್-ಎಂದು ಧಾತುಸ್ವರೂಪವು.) ವಿಸ್ತರಿಪುದು-ಹೆಚ್ಚಿಸಬೇಕು. (ವಿಸ್ತರಶಬ್ದದಮೇಲೆ ಇಸುಪ್ರತ್ಯಯ ಸೇರಿದೆ: ವಿಸ್ತರಶಬ್ದದಮೇಲೆ ಇಸುಪ್ರತ್ಯಯ ಸೇರಿದರೆ ವಿಸ್ತರಿಸು-ಎಂದು ರೂಪವಾಗುವುದು.) ಅನುಗೊಳಿಸಬಾರದು-ಸಾಧಿಸಬಾರದು.

೩೪. ಅದೊಮ್ಮೆ-ಒಂದಾವೃತ್ತಿ. ನಲವಿಂ-ಪ್ರೀತಿಯಿಂದ. ಬಯುಪಂ-ಬಯುಸುವನು. ಮಿೞ್ತುವ-ಮೃತ್ಯುವನ್ನು. ಬಸಿಱೊಂಡಿದ-ಗರ್ಭವಂ ಧರಿಸಿದ. ಅಶ್ವತರಿಯವೊಲ್-ಹೇಸರಗತ್ತೆಯಂತೆ.

೩೫. ವ್ಯಾಕೃತಿಗೈದ-ವ್ಯಾಕರಣಶಾಸ್ತ್ರವಂ ರಚಿಸಿದ. ಪಾಣಿನಿಯು-ಪಾಣಿನಿಮಹರ್ಷಿಯನ್ನು. ಕೊಂದಿಕ್ಕಿತ್ತು-ಕೊಂದುಹಾಕಿತು.

ಸಿಂಗಂ-ಸಿಂಹವು. ಈಱ್ದಿಟ್ಟತ್ತು-ಎಳೆದು ಬಿಸಾಡಿತು. ನೆಗೞ್-ಮೊಸಳೆ. ಇಱಿದತ್ತು-ಭೇದಿಸಿತು. ಛಂದಮಂ-ಛಂದಶ್ಶಾಸ್ತ್ರವನ್ನು ನೆಗೞ್ದಿನಂ-ಮಾಡಿದ; ತತ್ಪಿಂಗಳಾಚಾರ್ಯನಂ-ಪ್ರಸಿದ್ಧನಾದ ಪಿಂಗಳಾಚಾರ್ಯನನ್ನು. ಅವ್ವಳಿಪ-ಮೇಲೆ ಬೀಳುವ. ತಿರ್ಯಕ್ಕು-ತಿರ್ಯಗ್ಜಂತುಗಳು. ಗುಣಂಬಲ್ಲುದೇ-ಗುಣಗಳನ್ನು ತಿಳಿದಿರುವುವೇ.

೩೬. ನೆಗೞ್ವ-ಮಾಡಲ್ಪಡುವ. ಲೋಕಂ-ಜನವು. ನಿಮಿತ್ತದಿಂದಂ-ಕಾರಣದಿಂದ. ಬೆಗಡಿಂ-ಭಯದಿಂದ. ಲೋಭದೆ-ಆಸೆಯಿಂದ. ಬಗೆವೊಡೆ-ಆಲೋಚಿಸಲು.

೩೭. ಸುಖಭೇದ್ಯಂ-ಸುಲಭವಾಗಿ ಭೇದಿಸಲು ಸಾಧ್ಯವು. ಬಂದುಗೊಳಿಸಲ್-ಸೇರಿಸಲು. ಪೊಂಗೊಡದಂತಿರೆ-ಚೆನ್ನದಕೊಡದಹಾಗೆ. ಬಂದಿಸಲ್ ಸೇರಿಸಲು.

೩೮. ತರದಿಂ-ಕ್ರಮದಿಂದ. ನೆರೆದಿರ್ಕುಂ-ಸೇರಿರುವುದು. ಅಂತುಟು-ಅಂತಹುದು, ವಿಪರೀತಂ-ವ್ಯತ್ಯಸ್ತವು; ಮೇಲೆ ಹೇಳಿದುದಕ್ಕೆ ಬೇರೆಯಾದುದೆಂದರ್ಥ. ಕಬ್ಬಿನ ಜಲ್ಲೆಯಲ್ಲಿ ಮೇಲಣಿಂದ ಅಡಿಯಗಿಣ್ಣಿನವರೆಗೆ ಬರುಬರುತ ರಸವು ಎಂತು ಹೆಚ್ಚೋ, ಅಂತು ಸಜ್ಜನರ ಸ್ನೇಹವು ಬರುಬರುತ ಹೆಚ್ಚುವುದು. ಕಬ್ಬಿನ ಅಡಿಯಗಿಣ್ಣಿನಿಂದ ತುದಿಯವರೆಗೆ ಬರುಬರುತ ರಸವು ಎಂತು ಕಡಿಮೆಯಾಗುವುದೋ ಅಂತು ದುರ್ಜನರ ಸ್ನೇಹವು ಮೊದಮೊದಲಲ್ಲಿ ಹೆಚ್ಚು, ಬರುಬರುತ ಕಡಿಮೆಯಾಗುವುದು-ಎಂದು ತಾತ್ಪರ್ಯ.

೩೯. ಪಗಲ ಮುಂದುಪಿಂದಣ ನೆೞಲಂತಿರೆ—ಪೂರ್ವಾಹ್ಣದ ಮತ್ತು ಅಪರಾಹ್ಣದ ನೆಳಲಹಾಗೆ. ದುಷ್ಟರ ಸ್ನೇಹವು ಪೂರ್ವಾಹ್ಣದ ನೆಳಲಂತೆ ಮೊದಮೊದಲು ದೊಡ್ಡದಾಗಿಯೂ ಬರುಬರುತ

ಹ್ರಸ್ವವಾಗಿಯೂ ಇರುವುದು. ಸುಜನರ ಸ್ನೇಹವು ಅಪರಾಹ್ಣದ ನೆಳಲಂತೆ ಮೊದಮೊದಲು ಕಡಿಮೆಯಾಗಿಯೂ ಬರುಬರುತ ದೊಡ್ಡದಾಗಿಯೂ ಇರುವುದು. ಸುಜನರು ಸ್ನೇಹವನ್ನು ಕ್ರಮವಾಗಿ ಬಳೆಯಿಸುತ ಬರುವರು. ದುರುಳರು ಮೊದಲಲ್ಲಿ ವಿಶೇಷ ಸ್ನೇಹವುಳ್ಳವರಂತೆ ತೋರುತ್ತ ಬರುಬರುತ ಸ್ನೇಹವಂ ಬಿಟ್ಟು ಬಿಡುವರು—ಎಂದು ತಾತ್ಪರ್ಯ.

೪೦. ಶಪಥಂಗೆಯ್ಯುತೆ-ಪ್ರತಿಜ್ಞೆ ಮಾಡುತ್ತ. (ಅರಯ್ ಧಾತುವಿಗೂ ಗೆಯ್ ಧಾತುವಿಗೂ ಯಕಾರದ್ವಿತ್ವ ವಿಕಲ್ಪವಾದುದರಿಂದ ಗೆಯ್ಯುತೆ, ಗೆಯುತೆ-ಎಂದು ಎರಡುರೀತಿಯಲ್ಲಿಯೂ ಹೇಳಬಹುದು.) ಪಗೆಯುಂ-ಶತ್ರುವನ್ನು. ಮಿಗೆ-ಅಧಿಕವಾಗಿ. ನೆಗೞ್ದಂ-ಮಾಡಿದನು. ಪಿರಿಯರ್-ದೊಡ್ಡವರು. ಎಂಗುಂ-ಹೇಳುವರು.

೪೧. ಬಸಂ-ವಶನು. ಬಗೆಗೊಳಿಸುತೆ-ಮನಸ್ಸಿನಲ್ಲಿ ಉಂಟುಮಾಡುತ್ತ. ಸಗ್ಗಗರೊಡೆಯಂ-ದೇವೇಂದ್ರನು. ಗಬ್ಬಮಂ-ಗರ್ಭವನ್ನು.

೪೨. ಪೆರ್ಚ್ಗೆಯುಂ-ಅಭಿವೃದ್ಧಿಯೂ. ಆಯುಂ-ಆಯುಸ್ಸೂ. ಸೊಗಮುಂ-ಸುಖವೂ; (ಸಂ) ಸುಖ. ಸಮನಿಸುಗೆ-ಪ್ರಾಪ್ತವಾಗಲಿ. ನೆಗೞ್ದ-ಪ್ರಸಿದ್ಧನಾದ. ಬೃಹಸ್ಪತಿಯಿಂ-ಬೃಹಸ್ಪತಿಗಿಂತ. ಅಱಿತಂ-ತಿಳಿದವನು.

೪೩. ನೀಡುಂ-ವಿಶೇಷವಾಗಿ. ವಿಪಕ್ಷಂ-ಶತ್ರು. ಬಳವೊಕ್ಕು-ಬಳಗೆಹೊಕ್ಕು. ನಾಡೆ-ಚೆನ್ನಾಗಿ. ಓಡಮಂ-ದೋಣಿಯನ್ನು. ನೀರ್ವೊನಲ್-ನೀರಪ್ರವಾಹ

೪೪. ನಂಬಿದನುಮಂ-ನಂಬಿದವನನ್ನೂ. ಮೂಲಂಗಳುಮಂ-ಸಾಧನಂಗಳಾದ ಅಡಿಗಟ್ಟುಗಳನ್ನೂ.

೪೫. ಅದಟಿಗಂ-ಪರಾಕ್ರಮಶಾಲಿ. ಅವಧ್ಯಂ-ಕೊಲಲ್ಪಡಲು ಆಗದವನು.

೪೬. ಕೃತಿ-ಕೆಲಸವಮಾಡುವುದು. ವಿಷ್ಣುಗುಪ್ತಮತಂ-ವಿಷ್ಣುಗುಪ್ತನೆಂಬ ನೀತಿಶಾಸ್ತ್ರಜ್ಞನಿಗೆ ಇಷ್ಟವಾದುದು. ಕೆಳೆಯರೊದವು-ಮಿತ್ರಪ್ರಾಪ್ತಿ. ಮೂದೆಱಂ-ಮೂರುಬಗೆಯುಳ್ಳದು.

೪೭. ಐಸಿರಿ--ಐಶ್ವರ್ಯ. ಪಗೆವರುಮಂ--ದ್ವೇಷಿಸುವವರನ್ನೂ. ಒಲ್ಲದರ್-ಪ್ರೀತಿಮಾಡದ. ಪೆಂಡಿರುಮಂ-ಮಡದಿಯರನ್ನೂ. (ಒಲ್ಲದರೆಂಬುದು ಪೆಂಡಿರುಮಂ-ಎಂಬುದಕ್ಕೆ ವಿಶೇಷಣ; ವಿಶೇಷಣವು ಪ್ರಥಮಾವಿಭಕ್ತಿಯೇ ಇದ್ದು ವಿಶೇಷ್ಯದ ವಿಭಕ್ತಿಯಲ್ಲಿ ಅನ್ವಯಿಸುವುದುಂಟು.) ಬಾೞ್ಕೆಗೆ-ಬಾಳುವಿಕೆಗೆ.

೪೮. ಒರೆವರ್-ಹೇಳುವರು. ಸಾಪ್ತಪದೀನಂ-ಏಳುಹೆಜ್ಜೆಗಳಿಂದ ಹೊಂದಲ್ಪಡತಕ್ಕುದು; ಯಾರಿಬ್ಬರು ಒಟ್ಟಿಗೆ ಸೇರಿ ಏಳು ಹೆಜ್ಜೆನಡೆಯುವರೋ ಸಜ್ಜನರಾದ ಅವರು ಅಷ್ಟುಮಾತ್ರದಿಂದಲೇ ತಾವು ಪರಸ್ಪರಸಖರೆನಿಸುವರು; ಆದಕಾರಣ ಸಖ್ಯಕ್ಕೆ "ಸಾಪ್ತಪದೀನಂ" ಎಂಬ ಪರ್ಯಾಯನಾಮವು ಬಂದಿದೆ.

೪೯. ಕೊಳ್ವುದು-ತೆಗೆದುಕೊಳ್ಳುವುದು. ಮಾಂಜದೆ-ಮರೆಮಾಚದೆ. ಕೇಳ್ವುದು-ಪ್ರಶ್ನೆಮಾಡುವುದು. ಉಣಲಿಡುವುದು-ಭೋಜನಮಾಡಿಸುವುದು. ಅಱುದೆಱಂ-ಆರುಬಗೆಯುಳ್ಳದು.

೫೦. ನಿಯತಂ-ನಿಶ್ಚಯವಾಗಿ. ಉಪಕೃತಿಯನಾನದೆ-ಉಪ

ಕಾರವನ್ನು ಹೊಂದದೆ. ಒಲ್ಲಂ-ಪ್ರೀತಿಸುವುದಿಲ್ಲ. ಈಯಲೊಡಂ-ಕೊಡಲು. ದೇವರುಂ-ದೇವತೆಗಳೂ.

೫೧. ಎನ್ನೆವರಂ-ಎಲ್ಲಿಯವರೆಗೆ. ಅನ್ನೆವರಂ--ಅಲ್ಲಿಯವರೆಗೆ. ಲೋಕಂ-ಜನವು. ಒಲ್ವುದು-ಪ್ರೀತಿಮಾಡುವುದು. ಕನ್ನಂ-ಅತ್ಯಂತವಾಗಿ.

೫೨. ಅಮಮಾ-(ಆಶ್ಚರ್ಯವಾಚಕವಾದ ಅವ್ಯಯ.) ಪೊಡವಿಯೊಳ್-ಭೂಮಿಯಲ್ಲಿ (ಸಂ) ಪೃಥಿವಿ. ಅದಱ-ಆ ಕುಡುವುದರ. ಅನುಭಾವದೆ-ಪ್ರಭಾವದಿಂದ. ಕಡುನೇಹಿಗಂ-ದೃಢವಾದಸ್ನೇಹವುಳ್ಳವನು. ಚಣದೊಳ್-ಕ್ಷಣದಲ್ಲಿ (ಸಂ) ಕ್ಷಣ.

೫೩. ಅಱಿವು-ವಿವೇಕ. ಪಸುಳೆಯತ್ತಣಿಂ-ತನ್ನ ಕರುವಿಗಿಂತ. ಇರೆಯುಂ-ಹತ್ತಿರಿದ್ದರೂ. ಎಲ್ಲಪಾಲಂ-ಹಾಲೆಲ್ಲವನ್ನೂ. ತೊರೆದು-ಮೊಲೆಯಲ್ಲಿ ತುಂಬಿಕೊಂಡು. (ಬಿಡುವುದು ಮತ್ತು ಸದಿ-ಎಂಬ ಅರ್ಥವಾದಾಗ "ತೊಱೆ" ಎಂದು ಱಾಂತವು.) ಎರ್ಮೆ-ಎಮ್ಮೆ.

೫೪. ನೆಲೆ-ಸ್ಥಾನ. ನಿರಂತರವಾದ-ಎಡೆವಿಡದ. ಉಗುರಡಗುಗಳವೊಲ್-ಉಗುರೂ ಮಾಂಸವೂ ಎಂತೋ ಅಂತು. ಪಗಿಲ್ತ-ಅಂಟಿದ. (ದೃಢವಾಗಿ ಸೇರಿದ) ಸಲೆ-ಸಲ್ಲುವಂತೆ.

೫೫. ಅನಾವೃಷ್ಟಿ--ಸ್ವಲ್ಪವೂ ಮಳೆಬಾರದಿರುವುದು.

೫೬. ನೆಱೆಬಲ್ಲಿದರ್ಗೆ-ಪೂರ್ಣಬಲಿಷ್ಠರಿಗೆ. ಬಲ್ಪೆಱೆ-ಮಹಾಭಾರ. ವ್ಯವಸಾಯಿಗಳ್ಗೆ-ದೃಢವಾಗಿ ಕೆಲಸಮಾಡುವರಿಗೆ.

೫೭. ವಿದ್ವತ್ತ್ವಮುಂ-ವಿದ್ವಾಂಸನಭಾವವೂ ರಾಜತ್ವಮುಂ-ಅರಸುತನವೂ. ಎಂತುಂ-ಹೇಗೂ. ಎಣೆವಾರವು-ಸಮವೆನಿಸವು.

ನಾಡೊಳ್-ದೇಶದಲ್ಲಿ. ರಾಜಂ ತನ್ನಯ ನಾಡೊಳ್ ಪೂಜಿತನೆಂದೆನಿಪಂ ; ವಿದ್ವಾಂಸಂ ಎಲ್ಲಿಯುಂ ಪೂಜಿತನೆಂದೆನಿಪಂ—ಎಂದು ಪೂಜಿತನೆಂದೆನಿಪಂ ಎಂಬುದು ಎರಡುಕಡೆಯಲ್ಲಿಯೂ ಅನ್ವಯಿಸುವುದು.

೫೮. ಪೆಱತು--ಇತರವಾದುದು. ಪೆಱವು--ಇತರವಾದವುಗಳು. ಎಂಬರ್-ಎಂದುಹೇಳುವರು. ಸಂಪಾತ, ವಿಪ್ರಪಾತ, ಮಹಾಪಾತ, ನಿಪಾತ, ವಕ್ರ, ತಿರ್ಯಕ್ಕು, ಊರ್ಧ್ವ, ಲಘು—ಎಂದು ಎಂಟುಗತಿಗಳು.

೫೯. ನಱುಗಪ್ಪುರದಿಂ-ಸುವಾಸನೆಯುಳ್ಳ ಪಚ್ಚಕರ್ಪೂರದಿಂದ. ವರಚಂದನದಿಂದೆ-ಉತ್ತಮವಾದ ಶ್ರೀಗಂಧದಿಂದ. ಕುಳಿರ್ಮಂಜೆಸಿಂ-ತಣ್ಣಗಿರುವ ಹಿಮದಿಂದ. ಸರಿವಾರವು-ಸಮವೆನಿಸುವುದಿಲ್ಲ.

೬೦. ಕಾವುದಂ-ರಕ್ಷಿಸುವ. ಇಡಿದ-ವ್ಯಾಪ್ತವಾದ; ಅದವೞಲುರಿಗೆ-ದುಃಖಜ್ವಾಲೆಗೆ. ಮರ್ದೆನಿಸುವುದಂ--ಔಷಧವೆನಿಸುವ; (ನಾಶಕವಾದ) ವರ್ಣಯುಗ್ಮದ-ಎರಡಕ್ಷರದ. ಸುಧೆಯಂ-ಅಮೃತವನ್ನು. ಪಡೆದನೊ-ನಿರ್ಮಿಸಿದನೊ.

೬೧. ಬೀರಮುಂ--ಶೌರ್ಯವೂ. ಎಸಕಂ--ಉದ್ಯೋಗ. ಸಮಂತು-ಚೆನ್ನಾಗಿ. ತಿಳಿಯದೊ-ತಿಳಿಯಲ್ಪಡದೊ. ಆರಯಲ್-ವಿಚಾರಮಾಡಲು. ಸುರಗುರು-ಬೃಹಸ್ಪತಿ.

೬೨. ಮಲವುಳ್ಳ-ಕಶ್ಮಲವುಳ್ಳ. ಸಲುತಿರ್ಪ-ಉಪಯುಕ್ತವಾಗಿರುವ. ಅಮೃತ-ಅಮೃತರಸ, ಮತ್ತು ನೀರು. ಏವುದೊ-

ಪಿಸುಪ್ರಯೋಜನವುಳ್ಳುದೊ. ಸುಲಲಿತಂ-ಅತ್ಯಂತಮನೋಹರ. ತೞ್ಕೆಗೆ--ಆಲಿಂಗನಕ್ಕೆ. ಅಮೂಲ್ಯವಾದ ಮಿತ್ರನ ಅಂಗಾಲಿಂಗನವು ಅಮೃತಕ್ಕಿಂತ ಅತಿಶಯಿತವಾದುದೆಂದು ಭಾವವು.

೬೩. ಮೞೆವನಿವೊಲ್-ಮಳೆಹನಿಯಂತೆ. ತಾಱಗೆ-ನಕ್ಷತ್ರ; (ಸಂ) ತಾರಕಾ. ಅಳವಲ್ತು-ಸಾಧ್ಯವಲ್ಲ. ಅೞಲಿಂ-ವ್ಯಸನದಿಂದ.

೬೪. ನಡೆತಾರ-ಬಾ. ಪಡೆಮಾತು-ಸುದ್ದಿ. ಪದುಳಂ-ಕ್ಷೇಮ. ಮೋದಂಬಡುವೇಂ + ಅಂ—ಎಂದು ಪದವಿಭಾಗ. (ಉತ್ತಮಪುರುಷದ ಆಖ್ಯಾತಪ್ರತ್ಯಯವಾದ ಎಂ ಎಂಬುದರ ಎಕಾರಕ್ಕೆ ದೀರ್ಘವೂ ಉಂಟು. ಪ್ರಯೋಗ:—"ನಿನಗೀವೇನಂಚೆಕಂಪಂ" ಇತ್ಯಾದಿ) ಕೂರ್ತು-ಸ್ನೇಹಗೊಂಡು. ಬೞಲ್ದು-ಸ್ನೇಹಿಸಿ. ಪೋಗಲಕ್ಕುಂ-ಹೋಗಬಹುದು.

೬೫. ಎಯ್ದುವರ್--ಸೇರುವವರು. ಆನದ--ಹೊಂದದ. ಎೞ್ತುಗಳ್-ಎತ್ತುಗಳು.

೬೬. ಇದಿರ್ಗೊಂಡು-ಎದುರಿಗೆಹೋಗಿ. ಪರೆಪಿಂ--ಪ್ರೀತಿಯಿಂದ. ಗುಣದೋಷದ-ಗುಣಗಳ ಮತ್ತು ದೋಷಗಳ. ಕಥೆಯುಂ-ಹೇಳಿಕೆಯೂ, ಸೌಧಂ-ಉಪ್ಪರಿಗೆ.

೬೭. ನಾರಕದೊಳ್-ನರಕದಲ್ಲಿ. ಆದೊಂದುಬರಿಸಂ-ಒಂದು ವರ್ಷ. ಗೆಯ್-ಮಾಡು. ಪೆಱತಱಿಂ-ಇತರವಾದುದರಿಂದ. ಪರಿಚಿಂತನಮಂ-ಕಾರ್ಯಾಲೋಚನೆಯನ್ನು.

೬೮. ಏಗಂ-ನಿಶ್ಚಯ; (ಅವ್ಯಯ.) ಈಗುಂ-ಕೊಡುವುದು. ಬಿಸುಪುಂ-ಶಾಖವೂ. ಚಾಗಂಗೆಯ್ಯುತ್ತೆ-ತ್ಯಾಗಮಾಡುತ್ತ. ಉಱೆ—ಅಧಿಕವಾಗಿ. ಭೋಗಿಸೆ-ಅನುಭವಿಸಲು. ಮೈಮೆ-ಮಹಿಮೆ.

೬೯. ಶಾಂಡಿಲಿ-ಶಾಂಡಿಲಿಯೆಂಬವಳು. ನಿರ್ನೆರಂ-ನಿಷ್ಕಾರಣ ವಾಗಿ. ಆರಯ್ಯಲೊಡಂ-ವಿಚಾರಮಾಡಿನೋಡಲು. ವಲಂ-ನಿಶ್ಚ ಯ. ಇರವೇಳ್ಕುಂ-ಇರಬೇಕು.

೭೦. ಅರೆದುತ್ತಂ-ಅರ್ಧತುತ್ತನ್ನು. ಎರೆವರ್ಗೆ-ಯಾಚಿಸುವ ರಿಗೆ ಒಲವಿಂದೆ-ಪ್ರೀತಿಯಿಂದ. ತಕ್ಕಂತಿರೆ-ತಕ್ಕಹಾಗೆ. ಅದೆಂದು ಗತ-ಯಾವಾಗತಾನೇ. ಸಮನಿಸುಗುಂ-ಪ್ರಾಪ್ತವಾಗುವುದು.

೭೧. ಕಡುಚಾಗದೆ--ಮಹಾತ್ಯಾಗದಿಂದ; ಕಡಿದು + ಚಾಗ. ಪಡೆಗುಂ—ಪಡೆಯುವರೋ.

೭೨. ಕುಡುವಂ-ಉದಾರನಾದವನು. ಲಘುವಾದೊಡಂ— ಬಡತನದಿಂದ ಅಲ್ಪನಾದರೂ. ಸೇವ್ಯಂ-ಸೇವಿಸಲ್ಪಡತಕ್ಕವನು. ಲೋಭಿ-ಲೋಭಗುಣವುಳ್ಳವನು; ಯಾರಿಗೂ ಕುಡದೆ ಧನವನ್ನು ಕೂಡಿಸುವುದರಲ್ಲಿಯೆ ಆಸೆಯುಳ್ಳವನೆಂದರ್ಥ. ಅರ್ಥದೆ-ದ್ರವ್ಯ ದಿಂದ. ಪೆಂಪುವಡೆದುಂ-ಪೆರ್ಮೆಯುಂ ಪಡೆದಿದ್ದರೂ. ಪೆಂಪು-(ಭಾ ವನಾಮ) ಹಿರಿಯನಭಾವ. ಅಸೇವ್ಯಂ-ಸೇವಿಸಲ್ಪಡತಕ್ಕವನಲ್ಲ.

೭೩. ನೆಱೆಚಾಗದ--ಪೂರ್ಣವಾದ ತ್ಯಾಗದ. ಬಱಿದು-- ವ್ಯರ್ಥ. ಒರೆಯರ್-ಹೇಳರು. ವಿಬುಧರ್-ವಿದ್ವಾಂಸರು.

೭೪. ದಾನಮಂ-ದಾನಗುಣವನ್ನೂ, ಮದೋದಕವನ್ನೂ. ಸಿಂ ಧುರಂ-ಆನೆ (ಸಂ) ಸಿಂಧುರ. ಅಭಿನಂದ್ಯಮೇಗಡಾ—ಹೊಗಳ ತಕ್ಕುದೇಅಲ್ಲವೆ. ಪೆರ್ಮೆಯ್ಯಂಬಂದಿದೊಡಂ-ದೊಡ್ಡಶರೀರವನ್ನು ಹೊಂದಿದರೂ. ಕಟ್ಟಿ-ಕತ್ತೆ. ಕತದಿಂ-ಕಾರಣದಿಂದ.

೭೫. ಪಡೆದುದಂ—ತನ್ನಲ್ಲಿರುವುದನ್ನು ಕೊಡಂ-ಬಿಂದಿಗೆ.

ಲಸದ್ವೃತ್ತಂ-ಚೆನ್ನಾಗಿ ಗುಂಡಗಿರುವುದು. (ಅರ್ಥಾಂತರ; ಒಳ್ಳೆಯ ನಡತೆಯುಳ್ಳುದು. ಕರಂ-ಅಧಿಕವಾಗಿ. ಕೀೞ್-ಅಲ್ಪ. ಇರ್ದುದಂ-ತನ್ನಲ್ಲಿದ್ದುದನ್ನು. ಇತ್ತುದೂಸಱಿಂ-ಕೊಟ್ಟಕಾರಣದಿಂದ. ಲೋಕದಲ್ಲಿ ಇತರವಾದ ಎಷ್ಟೇಸುಗುಣಗಳಿದ್ದರೂ ದಾನಗುಣವಿಲ್ಲದಿದ್ದರೆ ವ್ಯರ್ಥ. ದಾನಗುಣವು ಸರ್ವೋತ್ತಮವಾದುದು. ಸುಶೀಲನಾದರೂ ದಾನಮಾಡದವನು ಕಡೆಗೆ ಅಧೋಗತಿಯನ್ನೈದುವನು; ಎಂತೆಂದರೆ:—ಕೆರೆ ಕುಂಟೆ ಮುಂತಾದ ಜಲಾಶಯಂಗಳಲ್ಲಿ ಜಲಪರಿಪೂರ್ಣವಾದ ಬಿಂದಿಗೆ ನೋಡಲು ಸುವೃತ್ತವಾಗಿ ಶೋಭಿಸುತಿದ್ದರೂ ಅದು ತನ್ನಲ್ಲಿರುವ ನೀರನ್ನು ಇತರರಿಗೆ ದಾನಮಾಡದುದರಿಂದ ಮೇಲಿರದೆ ಕೆಳಗೆ ಮುಳುಗಿಹೋಗುವುದು. ಸಣ್ಣದಾದ ಕುಡಿಕೆಯಾದರೂ ತನ್ನಲ್ಲಿರುವನೀರನ್ನು ದಾನಮಾಡಿ ಬರಿದಾದುದರಿಂದ ಮೇಲೆಯೇ ಶೋಭಿಸುತಿರುವುದು—ಎಂದು ತಾತ್ಪರ್ಯ.

೭೬. ಮುಗಿಲುಂ-ಮೇಘವೂ. ಒಲ್ಮೆಗೆ-ಪ್ರೀತಿಗೆ. ಅಲಸದೆ-ಆಲಸ್ಯಪಡದೆ. ನಿಚ್ಚಂ-ನಿತ್ಯವೂ.

೭೭. ಸಡ್ಡೆಯಿಂ-ಶ್ರದ್ಧೆಯಿಂದ. (ಸಂ) ಶ್ರದ್ಧಾ. ಉತ್ತಮದೊಳ್ ದೇಶಕಾಲಪಾತ್ರದೊಳ್-ಪುಣ್ಯಕ್ಷೇತ್ರಗಳಲ್ಲಿಯೂ ಪುಣ್ಯಕಾಲಗಳಲ್ಲಿಯೂ ಯೋಗ್ಯರಾದ ಜನಗಳಲ್ಲಿಯೂ. ಏನಂ-ಯಾವುದನ್ನು. ಇತ್ತಪರೊ-ಕುಡುವರೊ. ಬಿತ್ತರಮಂ-ವಿಸ್ತರವನ್ನು; (ಸಂ) ವಿಸ್ತರ. ಅನಂತ-ಅಪರಿಮಿತ.

೭೮. ಮಾನಸಂ-ಮನುಷ್ಯ; (ಸಂ) ಮಾನುಷ. ಅಳುಂಬಂ-ಅಧಿಕವಾಗಿ. ಅನಲ್‌ಬಾರದು-ಹೊಂದಬಾರದು. ಮಾನಸದ—ಮನಸ್ಸಿನ. ಅವಮಾನಿತಂ-ತಿರಸ್ಕೃತನು.

೭೯. ಅನುಗೊಳಿಸದೊಡೆ-ಮಾಡದಿದ್ದರೆ. ಮುನ್ನಿನ-ಹಿಂದಣ. ಅನುವಿಂ-ಕ್ರಮದಿಂದ. ನಿಯಮನದಿಂದಂ-ವಿಧಿಸುವುದರಿಂದ

೮೦. ಹರಯದೆ-ವಯಸ್ಸಿನಲ್ಲಿ. ಒಡರಿಸಿದನೊ-ರಚಿಸಿದನೊ. ಉಣ್ಗುಂ-ಅನುಭವಿಸುವನು.

೮೧. ಇನಿತಿನಿತು-ಸ್ವಲ್ಪಸ್ವಲ್ಪವಾಗಿ. ಸುರಸಾಯನವಂ-ಉತ್ತಮವಾದ ಲೇಹ್ಯವನ್ನು. ಇಟ್ಟಿವಂದವೋಲ್-ತೋರಿದಂತೆ.

೮೨. ಆಯಿಸಂ-ಆಯುಸ್ಸು. (ಸಂ) ಆಯುಷ್ಯ. ಎಸಕಂ-ಉದ್ಯೋಗ. ಬಿಜ್ಜೆ-ವಿದ್ಯೆ. ಸಾವು-ಮರಣ; (ಸಾ ಎಂಬ ಧಾತುವಿನ ಭಾವನಾಮ.) ನಿಸದಂ--ನಿಶ್ಚಯ. ಬಸಿಱೊಳಗೆ-ಗರ್ಭದೊಳಗೆ. ಇರ್ಪಂದೆ-ಇರುವಾಗಲೆ. ವಿಧಾತ್ರಂ-ಬ್ರಹ್ಮನು; (ಧಾತೃ ಕರ್ತೃಮುಂತಾದಕೆಲವುಋಕಾರಾಂತಶಬ್ದಗಳು ಧಾತಾರ, ಕರ್ತಾರ-ಎಂಬಿವಾದಿಯಾದ ರೂಪವಂ ಪಡೆವುವು; ವಿಧಾತೃ ಶಬ್ದವು "ವಿಧಾತ್ರಂ" ಎಂಬ ರೂಪವಂ ಹೊಂದುವುದು.

೮೩. ಸಾರವಂ-ಜೀವಾಳವನ್ನು. ಪಲದ-(೩೨೦ ಗುಲಗುಂಜಿ) ತೂಕದ. ಪವಣಂ-ಪ್ರಮಾಣವನ್ನು; (ಸಂ) ಪ್ರಮಾಣ.

೮೪. ಸಂದ-ಕೂಡಿದ. ಬರೆಗುಂ-ಹೇಳುವುದು ನಡೆಗಳ್—ಪಾದವಿನ್ಯಾಸಗಳ್. ಅಂದದ-ಸೊಗಸಿನ. ಮೂಡದಿರ್ದೊಡಂ—ಹುಟ್ಟದಿದ್ದರೂ. ಮಱನವಿಲಂ-ನವಿಲ್ಮರಿಯನ್ನು.

೮೫. ಸೇಱಿಯುಮಂ-ಜೋನನ್ನೂ. ಪಱದಿಕ್ಕಿ--ಧ್ವಂಸಮಾಡಿ, ಬಲ್ಪಿನಿಂದೆ-ಬಲದಿಂದ. ವಿದೂರಮಂ ಐದಿ-ಬಹುದೂರ ಹೋಗಿ. ಕೆಲದೆ-ಸಮೀಪದಲ್ಲಿ. ದಳ್ಳುರಿವೆರ್ಚಿದ-ಮಹಾಜ್ವಾಲೆ

ಹೆಚ್ಚಿದ ವ್ಯಾದರ-ಜೇಡರ. ವೇಗದಿನೋಡುವ, ವೇಗದಿಂ+ ಓಡುವ—ಎಂದು ಪದವಿಭಾಗ. ಬರ್ಮಿಗಂ-ಬಂದು ಮೃಗವು ಬಿಬ್ದು-ಬಿದ್ದು. (ಬೀಳ್ ಧಾತುವಿಗೆ ದದಪಗಳು ಪರವಾದಾಗ ಆದಿದೀರ್ಘವು ಹ್ರಸ್ವವಾಗುವುದು.) ಕೂಪ-ಕುಂಟೆ, ಕೊಂಕಿರೆ-ವಕ್ರವಾಗಿರಲು. ಏವುದೋ-ಏತಕ್ಕೆ ಬಂದೀತೋ.

೮೬. (ಸುಲಭವಾಗಿದೆ)

೮೭. ಬಲ್ಲಿದರ್-ಬಲಿಷ್ಠರು. ಪರಿವರ್ಜಿತಂ-ಬಿಡಲ್ಪಟ್ಟುದು. ನಾಡಾಡಿ-ಸಾಮಾನ್ಯವು.

೮೮. ದಾಡೆ-ಕೋರೆಹಲ್ಲು. (ಸಂ) ದಂಷ್ಟ್ರಾ. ಉಂತೆ-ಸುಮ್ಮನೆ.

೮೯. ಅಣಮಿಲ್ಲದ-ಸ್ವಲ್ಪವೂ ಇಲ್ಲದ. ಗೆಯ್ಮೆಗಳ್-ಕೆಲಸಗಳು. ಕಿಱುದೊಱೆಗಳ್-ಕ್ಷುದ್ರನದಿಗಳು.

೯೦. ಎಂತುಟು—ಹೇಗೆ. ಕಾಕಯುವಂಗಳ್-"ಕಾಕಯವ" ಎಂಬ ಧಾನ್ಯಗಳು. ಬಱಿದೆ-ವ್ಯರ್ಥವಾಗಿ.

೯೧. ಅರುಹಂಗಳಪ್ಪ-ಯೋಗ್ಯಗಳಾದ ; (ಸಂ) ಅರ್ಹ. ಮತ್ತಿನ--ಇತರವಾದ; (ಅವ್ಯಯ) ನಳಿನಸಖಂ--ಸೂರ್ಯನು; (ತಾವರೆಗೆಳೆಯ.) ಬೆಳಗುಗುಂ-ಪ್ರಕಾಶಪಡಿಸುವುದು.

೯೨. ಸಿರಿಯುಂ-ಸಂಪತ್ತನ್ನು. (ಸಂ) ಶ್ರೀ. ಮಱುಗುವಂ-ವ್ಯಸನಪಡುವನು. ಸಾಜಂ-ಸಹಜ.

೯೩. ಮರುಭೂಮಿಯೊಳ್-ಬೆಳೆಯಾಗದ ನಿರ್ಜಲಪ್ರದೇಶದಲ್ಲಿ. ಅವತರಿಸಿದ-ಹುಟ್ಟಿದ ಪಿರಿದುಂ-ಹೆಚ್ಚಾಗಿ; (ಅವ್ಯಯ.) ಪುೞುಗೊಳೆದ-ಹುಳುಗಳಿಂದ ಕೊರೆಯಲ್ಪಟ್ಟ. ಭರದಿಂ-ಅತಿಶಯ

ದಿಂದ. ಕಾಟ್ಕಿಚ್ಚುರಿಪಿದ-ಕಾಡುಕಿಚ್ಚಿನಿಂದ ಸುಡಲ್ಪಟ್ಟ; (ಸಮಾಸ ದಲ್ಲಿ ಆದಿಷ್ಟವಾದ ಱಟಕ್ಕೆ ಪರನಾದ ಕತಪಗಳಿಗೆ ಗದಬಗಳು ಬರುವುದಿಲ್ಲವಾದುದರಿಂದ-ಕಾಟ್ಕಿಚ್ಚೆಂದು ಕಕಾರವೇ ಇದೆ.

೯೪. ಅರ್ಪಿಲ್ಲದುದು-ಪೌರುಷವಿಲ್ಲದುದು. ಎಲ್ಲೆಡೆಯೊಳಂ-ಎಲ್ಲಾ ಸ್ಥಳಗಳಲ್ಲಿಯೂ. ತಕ್ಕುದು-ಯೋಗ್ಯವು. ನಡೆತಂದೊಡಂ-ಬಂದರೂ. ಪೋಕುಂ-ಹೋಗುವುದು.

೯೫. ಕಡುವೆಳಗಿನ-ಬಹುಪ್ರಕಾಶದ. ಕರ್ಗತ್ತಲೆಯಿಂ-ಕಗ್ಗತ್ತಲೆಯಿಂದ (ಗಾಢಾಂಧಕಾರ) ಅಡಸಿದ-ವ್ಯಾಪಿಸಲ್ಪಟ್ಟ. ಇದಿರೆಡೆಯೊಳ್-ಎದುರುಭಾಗದಲ್ಲಿ. ಗೋಚರನೆನಿಸಂ-ಕಾಣಿಸು ವುದಿಲ್ಲ.

೯೬. ಲಾಭಂ--ಇಷ್ಟಾರ್ಥ. ಒಡೆಯನನವನಂ---ಅವ್ರೊಡೆಯ ನನ್ನು.

೯೭. ಬಱುವಂ-ವ್ಯರ್ಥನು. ಅಶ್ರೋತ್ರಿಯಮುಂ ತಿಥಿ-ಶ್ರೋತ್ರಿಯರಿಲ್ಲದ ಶ್ರಾದ್ಧವೂ. ದಕ್ಷಿಣಾವಿಹೀನಂ-ದಕ್ಷಿಣೆಯಿಂ ದ ಬಿಡಲ್ಪಟ್ಟ (ದಕ್ಷಿಣೆಯಿಲ್ಲದ). ಜನ್ನಂ- (ಸಂ) ಯಜ್ಞ.

೯೮. ಮೃತಿವಡೆದರಂ-ಸತ್ತವರನ್ನು. ಅಪಮಾನಮುಮಂ-ತಿರಸ್ಕಾರವನ್ನೂ. ಬರಿಕ್ಕುಂ-ಬರಿಸುವುದು.

೯೯. ಕಡುದೈನ್ಯಕೆ-ಮಹಾದೀನತೆಗೆ ಭಾಜನಂ-ಆಶ್ರಯ. ಧಿಕ್ಕಾರಕೆ-ತಿರಸ್ಕಾರಕ್ಕೆ. ನೆಲೆದಾಣಂ-ವಾಸಸ್ಥಾನ. ಅಡಿಗಡಿಗೆ-ಆಗಾಗ. ಎಡೆ-ಆಶ್ರಯ. ಕಂದುವಡೆದ-ಕಳಂಕವನ್ನು ಹೊಂದಿದ.

೧೦೦. ನಾಣ್ಚಿದಪರ್-ನಾಚಿಕೊಳ್ಳುವರು. ಮಱೆಗೈದಪರ್-ಮರೆಮಾಡುವರು. ಅನುಬಂಧಮಂ-ಸಂಬಂಧವನ್ನು. ಆದಪರ್-

ಆಗುವರು ; (ಆಗುಹೋಗುಧಾತುಗಳಿಗೆ ದದಪಗಳು ಪರವಾದಾಗ ಅವುಗಳ ಅಂತ್ಯವಾದ ಗುವರ್ಣಕ್ಕೆ ಲೋಪವುಂಟಾಗುವುದು.)

೧೦೧. ಪರಿಜುವಡೆದ_ಆಕಾರವನ್ನುಹೊಂದಿದ. ಲಾಘುವವು ವಲಂ_ಚಿಕ್ಕತನವೇಸರಿ. ಅಪಾಯುಂಗಳ_ಬಾಧೆಗಳ. ಪರ್ಯಾಯ ನಾಮಂ_ಒಂದೇಸಮವಾದ ಹೆಸರು.

೧೦೨. ಪುದಿದ__ವ್ಯಾಪ್ತವಾದ ಪದಧೂಳಿಯಂ__ಪಾದರಜ ಸ್ಸನ್ನು. ಕಸಕಿಲ_ಕಸಪರಿಕೆಯು. ರಜಸ್ಸುಮಂ_ಧೂಳಿಯನ್ನೂ. ದೀವಿಗೆಮಂಚದ_ದೀಪದಿಂದ ಕೂಡಿದ ಮಂಚದ. ಪಡಿನೆಳಲಂ_ ಪ್ರತಿಚ್ಛಾಯೆಯನ್ನು. ವಿದಿಗೆ_ನಿಯಮಕ್ಕೆ. "ಅಜಾರಜಃ ಖರ ರಜಃ ತಥಾ ಸಂಮಾರ್ಜನೀರಜಃ ಸ್ತ್ರೀಣಾಂ ಪಾದರಜಶ್ಚೈವ ಶಕ್ರ ಸ್ಯಾಪಿ ಶ್ರಿಯಂ ಹರೇತ್" ಎಂಬಿದೆ ಮೊದಲಾದ ಶಾಸ್ತ್ರದಲ್ಲಿ ಹೇಳಿ ರುವ ವಿಧಿಗೆ ಅನುಸಾರವಾಗಿ ನಡೆಯದಿದ್ದರೆ ಏನಾಗುವುದೋ ಎಂದು ಹೆದರುವ ಆಸ್ತಿಕರು ನಿಷಿದ್ಧವಾದ ಆಡಿನ ಕಾಲಧೂ ಳನ್ನೂ ಕಸಪರಿಕೆಯಧೂಳನ್ನೂ ರಾತ್ರಿವೇಳೆಯಲ್ಲಿ ದೀಪ ಯುಕ್ತವಾದ ಮಂಚದ ಪ್ರತಿಚ್ಛಾಯೆಯನ್ನೂ ತಮಗೆ ಸಂಬಂಧ ಗೊಳಿಸದೆ ಬಿಡುವಂತೆ, ಜನಗಳು ಬಡವನನ್ನು ಸೇರದೆಬಿಡುವರು- ಎಂದು ತಾತ್ಪರ್ಯ.

೧೦೩. ಎಂದಾನುಂ—ಯಾವಾಗಲಾದರೂ. ಆವುದಾನುಂ— ಯಾವುದಾದರೂ. ಎಸಕಕೆ_ಕೆಲಸಕ್ಕೆ. ಉಳಿದ ಶೌಚದಮಣ್ಣುಂ_ ಕೈಕಾಲುಗಳನ್ನು ಶುದ್ಧಿಗೊಳಿಸುವುದಕ್ಕೆ ಉಪಯೋಗಿಸಿ ಮಿಕ್ಕ ಮಣ್ಣೂ. ಎಳ್ಳನಿತುಂ_ಎಳ್ಳಷ್ಟೂ. ಪೆಱರ್ಗೆ_ಇತರರಿಗೆ.

೧೦೪. ಧನಿಗೃಹಕೆ_ದ್ರವ್ಯವಂತರಮನೆಗೆ. ತಿರಿಯಲ್_ಬೇ

ಡಲು. ಇರವು-ಸ್ಥಿತಿ. ಅದೇಂನಿಂದಿತವೋ-(ಬಹುನಿಂದಾಸ್ಪದವೆಂದರ್ಥ.)

೧೦೫. ಅಪಹರಣವಂ-ಅಪಹಾರವನ್ನು. ತನತ್ತು-ತನ್ನದಾದ ಹರಣವಂ-ಪ್ರಾಣವನ್ನು. (ಸಂ) ಪ್ರಾಣ. ಜಲಾಂಜಲಿಯ-ತಿಲೋದಕವನ್ನು. ಪಿತರರುಂ-ಸ್ವರ್ಗಸ್ಥರಾದ ಪಿತೃಗಳೂ.

೧೦೬. ತುಱುಗಳ್ಗಂ-ಹಸುಗಳಿಗೋಸ್ಕರವೂ. ಪಾರ್ವರ್ಗಂ-ಬ್ರಾಹ್ಮಣರಿಗೋಸ್ಕರವೂ. ಪೆಱರಿಂಕಳ್ದುಯ್ವ-ಅನ್ಯರು ಕದ್ದು ತೆಗೆದುಕೊಂಡುಹೋಗುವ. ಪೆಣ್ಬಾೞ್ಗಳ್ಗಂ-ಸ್ತ್ರೀಧನಂಗಳಿಗೋಸ್ಕರವೂ. ಹರಣಂದೆಱುವಂ-ಪ್ರಾಣವಂನೀಗುವನೋ. ಅಕ್ಷಯಂ-ಶಾಶ್ವತಂಗಳಾದ.

೧೦೭. ಆವಗಂ-ಯಾವಾಗಲೂ, ವಿಕೃತಿಯಂ-ವಿಕಾರವನ್ನು.

೧೦೮. ಸಂತರ್-ಸತ್ಪುರುಷರು. ಸಂದೆಗಂ-ಸಂದೇಹ. ನೇಹಿಗನಂ-ಸ್ನೇಹವುಳ್ಳವನನ್ನು. ನೇಹ (ಸಂ) ಸ್ನೇಹ, ಇದರ ಮೇಲೆ "ಅದನಿವನಾಚರಿಸುವನು" ಎಂಬರ್ಥದಲ್ಲಿ "ಇಗ" ಎಂಬ ತದ್ಧಿತಪ್ರತ್ಯಯ ಹತ್ತಿ "ನೇಹಿಗ" ಎಂದಾಗಿದೆ. ಹೋಮವಹ್ನಿಯಂ-ಹೋಮಾಗ್ನಿಯನ್ನು. ಪರಿಕಿಪವೋಲ್-ಪರೀಕ್ಷಿಸುವಂತೆ.

೧೦೯. ಸಂದಣಿಸಿರೆ-ಕೂಡಿರಲು, ಕಟ್ಟೆಸಿರಿ-ಮಹೈಶ್ವರ್ಯ. ಅಂದು + ಏಂ-ಆಗೇನು.

೧೧೦. ಕೇವಲರಿಪು-ಅತ್ಯಂತವಾದ ದ್ವೇಷಮಾತ್ರವೇ ಉಳ್ಳವನು. ಕೇವಲಸನ್ಮಿತ್ರಂ-ಅತ್ಯಂತವಾದ ಸ್ನೇಹಮಾತ್ರವೇ ಉಳ್ಳವನು. ಎಸಪ-ಮಾಡುವ. ಎಸಕಂಗಳಿಂದೆ-ಕಾರ್ಯಗಳಿಂದ. (ಅವರವರ ಕಾರ್ಯವಿಶೇಷಂಗಳಿಂದ ದ್ವೇಷಸ್ನೇಹಗಳುಂಟಾಗುವುವೆಂದು ಫಲಿತಾರ್ಥವು.)

೧೧೧. ಜಲದದ-ಮೇಘದ. ಖಲಜನದ-ದುಷ್ಟರ. ಒಲವುಂ-ಪ್ರೀತಿಯೂ. ಸಂಸಿದ್ಧಂ, ಅನ್ನಮುಂ-ಸಿದ್ಧಾನ್ನವೂ. ಪೆಂಡಿರುಂ-ಮಡದಿಯರೂ. ಅತ್ಯಲ್ಪಕಾಲಭೋಗ್ಯಂ-ಬಹುಸ್ವಲ್ಪಕಾಲದವರೆಗೆ ಅನುಭವಿಸತಕ್ಕುವು.

೧೧೨. ಕಡು-ಹೆಚ್ಚಾಗಿ; (ಅವ್ಯಯ) ಪೊರೆದ-ರಕ್ಷಿಸಲ್ಪಟ್ಟ. ಚಣಮುಂ-ಬಂದುಕ್ಷಣವೂ. ಅಗಲಿಸದ-ಬಿಡದ. ಅರ್ಥಂ-ದ್ರವ್ಯವು. ಜವನ-ಯಮನ. ಸಾರ್ವಂದು-ಸೇರುವಾಗ. ಬೆನ್ನನೆ-ಹಿಂದೆ. ಐವಜ್ಜೆಯುಮಂ ನಡೆತಾರದು-ಎಂದನ್ವಯ; ಐದು ಹಜ್ಜೆಯೂ ಬರುವುದಿಲ್ಲವೆಂದರ್ಥ. ಕಾಲಾಧ್ವವಾಚಿಗಳಿಗೆ ದ್ವಿತೀಯೆ ಬರುವುದರಿಂದ ಐವಜ್ಜೆಯುಮಂ-ಎಂದು ಪ್ರಯೋಗಿಸಿದೆ.

೧೧೩. ವಿಹಗಂಗಳ್-ಪಕ್ಷಿಗಳು. ಪಲಮಂ-ಮಾಂಸವನ್ನು ಧನಿಯಂ-ಧನವುಳ್ಳವನನ್ನು. ಎತ್ತಂ-ಎಲ್ಲಿಯೂ.

೧೧೪. ಅವನೀಪಾಲಂ-ಅರಸು. ಅದೋಷನುಮಂ, ಧನಮುಳ್ಳವನಂ-ನಿರ್ದೋಷನಾದ ಧನಿಕನನ್ನೂ. ಇರದೆ-ಸುಮ್ಮನಿರದೆ. ದೋಷಂಗೊಳಿಪಂ-ದೋಷವುಳ್ಳವನನ್ನಾಗಿ ಮಾಡುವನು. ತವೆ-ಅಧಿಕವಾಗಿ (ಅವ್ಯಯ) ನಿರಾಳಮಿರ್ಪಂ-ನಿಶ್ಚಿಂತನಾಗಿರುವನು. ನಿರಾಳದಿಂ+ಇರ್ಪಂ ನಿರಾಳಮಿರ್ಪಂ-ಎಂದು ಕ್ರಿಯಾಸಮಾಸ.

೧೧೫. ಗಳಿಪುದು-ಸಂಪಾದಿಸುವುದು; (ಗಳಿಸು, ಗಳಿಯಿಸು-ಎಂದು ಎರಡು ತೆರವೂ ಉಂಟು.) ಕಾಪಿಡುವುದು-ಕಾಪಾಡುವುದು. ಅದು ನಷ್ಟಮಾದೊಡೆ-ಎಂದು ಅನ್ವಯ. ವ್ಯಯಿಸಿದೊಡೆ-ವೆಚ್ಚಮಾಡಲ್ಪಟ್ಟರೆ.

೧೧೬. ಆರ್ಜಿಸಲ್-ಸಂಪಾದಿಸಲು. ಆವಾವುವಂ ಎಡರ್ಗಳಂ-ಯಾವಯಾವ ಕಷ್ಟಗಳನ್ನು. ಎಗ್ಗಂ-ಮೂಢವಾದ. ಈ

ಜನಂ-ಪ್ರಪಂಚದಲ್ಲಿರುವ ಜನವು. ಸೈಸುಗುಮೋ-ಸಹಿಸುವುದೋ. ಅವಱೊಳ್-ಅವುಗಳಲ್ಲಿ. ಒಂದಂಶಮಂ-ಒಂದು ಭಾಗವನ್ನು. ಒಂದಿದೊಡಂ-ಹೊಂದಿದರೂ. ಮುಮುಕ್ಷು-ಮೋಕ್ಷವನ್ನಪೇಕ್ಷಿಸುವವನು. ಮೋಕ್ಷಂಬಡೆವಂ-ಮೋಕ್ಷ ಹೊಂದುವನು.

೧೧೭. ವರಧೃತಿಗೆ-ಉತ್ತಮವಾದ ಧೈರ್ಯವುಳ್ಳವನಿಗೆ. ವಿದೇಶಮುಂ-ಪರದೇಶವೂ. ಬಸಮಾಗಿಪಂ-ವಶಮಾಡಿಕೊಳ್ಳುವನು. ಒಯ್ಯನೆ-ಬೇಗನೆ. ಆರ್ಪಿನಿಂ-ಪೌರುಷದಿಂದ; (ಆಱುಧಾತುವಿನ ಭಾವನಾಮ.) ಸ್ಫುರಿಸುವ-ಪ್ರಕಾಶಿಸುವ. ಕೂರುಗುರ್ಗಳ್-ಕ್ರೂರವಾದ ಉಗುರುಗಳು. ಆಂತ-ಧರಿಸಲ್ಪಟ್ಟ. ಆಯುಧಂ ಆಗಲ್-ಆಯುಧವೆನಿಸಲು. ಹರಿ-ಸಿಂಹ. ಆನೆಯಂ ಇಱಿದು-ಎಂದು ಅನ್ವಯ.

೧೧೮. (೫೬ ನೆಯ ಪದ್ಯದ ಟಿಪ್ಪಣಿಯಂ ನೋಡಿ)

೧೧೯. ಪರಮೋತ್ಸಾಹನಂ-ಮಹತ್ತಾದ ಉತ್ಸಾಹವುಳ್ಳ, ಎಸಕದ ಪರಿಯಱಿದನಂ-ಕಾರ್ಯದರೀತಿಯನ್ನು ತಿಳಿದ; ಅಲಸದೆಸಪನಂ-ಆಲಸ್ಯಗೊಳ್ಳದೆ ಕೆಲಸಮಾಡುವ. ಧುಗುಡದೆ-ದುಃಖದಲ್ಲಿ. ಸಿಲ್ಕಿರದನಂ-ಸಿಕ್ಕದಿರುವ. ಅದಟಿಗನಂ-ಪರಾಕ್ರಮಶಾಲಿಯಾದ. ಅಱಸಿದಪಳ್-ಹುಡುಕುವಳು.

೧೨೦. ಗಾಂಪಂ-ಮೂಢನು. ಅತಿಘನಮುಂವನಮಂ-ಎಂದನ್ವಯ. ಅತಿಘನಮುಂ-ಬಹುನಿಬಿಡವಾದ. ಸೋಮಿಲಕನವೋಲ್-ಸೋಮಿಲಕನೆಂಬ ನೇಯಿಗೆಯವನಂತೆ.

೧೨೧. ಚಡುಪುಡನೆ-ಥಟ್ಟನೆ. (ಶೀಘ್ರಾರ್ಥಕವಾದ ಅವ್ಯಯ) ಬಾಂಗೆ-ಆಕಾಶಕ್ಕೆ. ಪಡೆವನಿತಂ-ಪಡೆಯುವಷ್ಟನ್ನು

೧೨೨. (೧೦ ನೆಯ ಪದ್ಯದ ಟಿಪ್ಪಣಿಯಂ ನೋಡಿ.)

೧೬೩. ಸಾಸಿರಾಕಳ_ಸಾವಿರಾರುಹಸುಗಳ. ಬೃಂದದೆ_ಗುಂಪಿನಲ್ಲಿ. ಕುಂದದೆ_ಕ್ಷೀಣವಾಗದೆ. ಕರ್ತಾರನಂ_ಮಾಡಿದವನನ್ನು. ದಲ್_ನಿಶ್ಚಯ. (ಅವ್ಯಯ)

೧೬೪. ಮಲಗುವುದುಂ–ಮಲಗುತ್ತಲೂ. ನಿಲೆ–ಸಿಲ್ಲಲು. ಬಡನಿಲ್ಲುಗಂ_ಬಡನೆಸಿಲ್ಲುವುದು.

೧೬೫. ಎಂತುಟು_ಹೇಗೆ. ಸಂತತಂ_ಯಾವಾಗಲೂ. ಪರಸ್ಪರಂ_ಒಂದಕ್ಕೊಂದು. ಪಿಂಗದೆ_ಹಿಂಮೆಟ್ಟದೆ.

೧೬೬. ಕರತಲವೆರಡುಂ_ಎರಡು ಅಂಗೈಗಳೂ. ನೆಱೆದ-ಪೂರ್ಣವಾದ. ಉಜ್ಜುಗಂ-(ಸಂ) ಉದ್ಯೋಗ.

೧೬೭. ದೊರೆಕೊಂಡೊಡಂ-_ಪ್ರಾಪ್ತವಾದರೂ. ಉಣ್ಬ-ಊಟಮಾಡುವ. ಉಣಿಸು_ಆಹಾರ. ಮಾಣ್ದಿರೆ_ಬಿಡಲ್ಪಟ್ಟಿರಲು ಬಾಯೊಳಗಣ್ಗೆ_ಬಾಯೊಳಕ್ಕೆ. ಅದೆಂತುಂ_ಹೇಗಾದರೂ.

೧೬೮. ಪೊರ್ದುಗುಂ ಸೇರುವಳು. ಎಸಗುವ_ಉದ್ಯೋಗಿಸುವ. ನರವರನಂ_ಪುರುಷಶ್ರೇಷ್ಠನನ್ನು ಬಿದಿ_ದೈವವು. ಈಯವೇೞ್ಕುಂ-ಕುಡಬೇಕು. ಎಂಗುಂ-ಎನ್ನುವರು. ಕುಜನರ್-ಕುತ್ಸಿತರು. ಇರದೆ_ಸುಮ್ಮನಿರದೆ. ಇಕ್ಕಿ-ಹೊಡೆದು, ಅಣ್ಮು-ಪೌರುಷವಂ ಮಾಡು_ಎಂದರೆ ಕೆಲಸವಂ ಮಾಡೆಂದರ್ಥ. ಎಲೆ_ಎಲೈ ಮನುಷ್ಯನೆ. ಯತ್ನಿಪೊಡಂ_ಪ್ರಯತ್ನಿಸಿದರೂ. ಆಗದಿರ್ದೊಡೆ_ಸಿದ್ಧಿಸದಿದ್ದರೆ.

೧೬೯. ನಿಜಮನೋರಥದಿಂದಂ–ತನ್ನ ಕೋರಿಕೆಯಿಂದ. ಮಿಗಂಗಳ್_ಮೃಗಗಳು.

೧೭೦. ಭೂರಮಣನೆ_ಎಲೆ ರಾಜನೆ. ಈಡೇಱವು-ಕೈಗೂಡುವುದಿಲ್ಲ. ಧೀರತೆಯಿಲ್ಲದರ್_ಧೈರ್ಯವಿಲ್ಲದವರು. ಧಾರಿಣಿ

ಯಲ್ಲಿ-ಭೂಮಿಯಲ್ಲಿ. ಅದು ಅಕ್ಕುಂ-ಎಂದನ್ವಯ. ಅಕ್ಕುಂ-ಆಗುವುದು.

೧೩೧. ಸ್ವಶಕ್ತಿಯಿಂದ-ತನ್ನ ಶಕ್ತ್ಯನುಸಾರದಿಂದ. ಉಜ್ಜುಗಿಪನ-ಉದ್ಯೋಗಿಸುವನ. ಕೃತಿ-ಕಾರ್ಯವು. ತತ್ಪೌರುಷಮುಂ-ಅವನಶಕ್ತಿಯನ್ನು. ಕತದಿಂ-ಕಾರಣದಿಂದ. ಲೋಕದಲ್ಲಿ ಮನುಷ್ಯನು ತನ್ನ ಶಕ್ತ್ಯನುಸಾರವಾಗಿ ಕಾರ್ಯವನ್ನು ಮಾಡಬೇಕು. ಆದರೂ ಅವನು ಮಾಡಿದ ಕಾರ್ಯವು ಫಲಿಸದಿದ್ದರೆ ಆವಿಷಯದಲ್ಲಿ ಅವನನ್ನು ನಿಂದಿಸಬಾರದು. ಏಕೆಂದರೆ, ದೈವವು ಅವನ ಪೌರುಷವನ್ನು ಕೆಂದರಹಾಗೆ ಮಾಡಿಬಿಟ್ಟಿರುವುದು. ದೈವವು ಆರೀತಿ ಮಾಡಿದುದಕ್ಕೆ ಅವನ ತಪ್ಪೇನು?-ಎಂದು ತಾತ್ಪರ್ಯ.

೧೩೨. ನೆಲಕಲಂ-ಲೋಭಿ. ಅಕುಲೀನಂ-ಸತ್ಕುಲಪ್ರಸೂತನಲ್ಲದವನು. ಸಾಧುಲೋಕಸಂತ್ಯಕ್ತಂ-ಸಜ್ಜನರಿಂದ ಬಿಡಲ್ಪಟ್ಟವನು. ಸೇವಿತಂ-ಸೇವಿಸಲ್ಪಟ್ಟವನು.

೧೩೩. ಶ್ರುತಿಪಠನಕೆ-ವೇದಾಧ್ಯಯನಮಾಡಿದುದಕ್ಕೆ. ಅಗ್ನಿಹೋತ್ರಂ-ನಿಯಮದಿಂದ ಅಗ್ನಿಯಲ್ಲಿ ಹೋಮಮಾಡುವುದು. ಶ್ರುತವಿಜ್ಞಾನಕ್ಕೆ-ಶಾಸ್ತ್ರಜ್ಞಾನಮಂ ಪಡೆದುದಕ್ಕೆ. ಶೀಲಂ-ಸದಾಚಾರವು ಸಿರಿಗೆ-ಸಂಪತ್ತು ಇದ್ದುದಕ್ಕೆ. ದಾನಂ-ಕೊಡುವುದೂ. ಭೋಗಂ-ತಾನು ಅನುಭವಿಸುವುದೂ.

೧೩೪. (೧೨೦ ನೆಯ ಪದ್ಯದ ಟಿಪ್ಪಣಿಯಂ ನೋಡಿ)

೧೩೫. ನಡುವೆಡೆಯುಲ್ಲಿ-ಮಧ್ಯದೇಶದಲ್ಲಿ. ಪೂಱ್ದು-ಹೂಳಿ. ಅದಱಿನೆ ಧನದಿಂ-ಆ ಧನದಿಂದಲೆ. ಇತರರಿಗೆ ಕೊಡದೆ ತಾವೂ ಅನುಭವಿಸದೆ ಮನೆಯೊಳಗೆ ಸುಮ್ಮನೆ ಹೂಳಿಟ್ಟ ಹಣದಿಂದ ಅವರಿಗೆ ಏನುಪ್ರಯೋಜನ ? ಅವರು ದಾನಭೋಗವಿಲ್ಲದ ಅಂತಹ ಧನ

ದಿಂದ ಧನವಂತರೆನಿಸಿಕೊಳ್ಳುವುದಾಗರೆ, ಅದೇ ಧನದಿಂದ ನಾವೂ ಧನವಂತರೆನಿಸಿಕೊಳಲಾರೆವೇ ? ಅನುಪಯುಕ್ತವಾದ ಆ ಧನ ದಿಂದ ಅವರಿಗೆ ಎಷ್ಟು ಪ್ರಯೋಜನವೋ ನಮಗೂ ಅಷ್ಟೇ ಪ್ರಯೋಜನವೆಂದು ತಾತ್ಪರ್ಯ.

೧೩೬. ಸಲಿಲಕ್ಕೆ-ನೀರಿಗೆ. ಪೊನಲಂತೆ-ಪ್ರವಾಹದಹಾಗೆ. ನಿಚಯಕೆ-ಸಮೂಹಕ್ಕೆ. ಚಾಗಮೇ-ತ್ಯಾಗವೇ: (ಸಂ) ತ್ಯಾಗ. ಕಾಪು-ರಕ್ಷೆ; (ಕಾ ರಕ್ಷಣೆ-ಎಂಬ ಧಾತುವಿನ ಭಾವನಾಮ.)

೧೩೭. ಎಣಿಸದೆ-ಲಕ್ಷ್ಯಮಾಡದೆ. ದಣಿವಿಂ-ಶ್ರಮದಿಂದ ಜೇಂನೊಳಂಗಳ-ಜೇನುನೊಣಗಳ.

೧೩೮. ಈವುದು-ದಾನ; (ಈ ಪ್ರದಾನೇ ಎಂಬ ಧಾತುವಿಗೆ ಭಾವಾರ್ಥಕವಾದ ಉದು ಪ್ರತ್ಯಯ ಸೇರಿದೆ.) ಭೋಗಿಪುದು-ಭೋಗ. ಅೞಿವು-ನಾಶ. ಮೂಱನೆಯದು-ಮೂರನೆಯ ಗತಿ.

೧೩೯. ಎಗ್ಗರ್-ಮೂಢರು. ಬಗೆವೊಡೆ-ಪರಿಶೀಲಿಸಿ ನೋಡಿದರೆ. ಅವಂದಿರ್-ಅವರು. ಬೆಟ್ಟಿತು + ಬೇಸಗೆ = ಬಿರುವೇಸಗೆ; ಬೆಟ್ಟಿತು-ಕಠಿನ. ಬೇಸಗೆ-(ಸಂ) ವೈಶಾಖ. ತಣ್ಪಿಂದಲ್-ಶೈತ್ಯವಂ ಹೊಂದುವುದಕ್ಕೆ; (ತಣ್ಣಿತು ಎಂಬ ಗುಣವಚನದ ಭಾವನಾಮ; ಹೊಸಗನ್ನಡದಲ್ಲಿ ತಂಪು.) ಕಠಿನವಾದ ಬೇಸಗೆಯ ಕಾಲದಲ್ಲಿ ಅಗ್ನಿಯಂ ಸೇವಿಸುವುದರಿಂದ ಮತ್ತಷ್ಟು ತಾಪ ಹೆಚ್ಚುವುದೇ ಹೊರತು ಎಂತು ತಂಪಾಗುವುದಿಲ್ಲವೋ ಅಂತು ಧನಾದಿಗಳಿಂದ ಮತ್ತಷ್ಟು ಕಷ್ಟವೊದವುವುದಲ್ಲದೆ ಸುಖವುಂಟಾಗುವುದಿಲ್ಲವೆಂದು ತಾತ್ಪರ್ಯ; ಧನಾದಿಗಳು ಸುಖಕರವೆಂಬುದು ಭ್ರಾಂತಿ. ಆದಕಾರಣ ವಿವೇಕಿಗಳು ಅದರಲ್ಲಿ ಆಶೆಯಂ ಮಾಡುವುದಿಲ್ಲವೆಂದು ಭಾವವು.

೧೪೦. ಅಹಿಗಳ್-ಸರ್ಪಗಳು. ಈಂಟುಗುಂ-ಆಸ್ವಾದಿಸುವುವು. ಬಲಂಗುಂದಿ-ಕ್ಷೀಣಬಲಗಳಾಗಿ. ಇರ್ಪುವಲ್ತು-ಇರುವಂತವುಗಳಲ್ಲ. ಬಹುನಿಸ್ಸಾರತೃಣಂಗಳಂ-ಸ್ವಲ್ಪವೂ ಸಾರವಿಲ್ಲದ ಹುಲ್ಲುಗಳನ್ನು. ತಿನುತೆ-ತಿನ್ನುತ್ತ. ಶೋಭಿಕುಂ-ಶೋಭಿಸುವುವು. ಕಂದಫಲಮುಂ-ಗೆಡ್ಡೆಗೆಣಸುಗಳನ್ನೂ ಹಣ್ಣುಗಳನ್ನೂ. ನೋೞ್ಪಡೆ-ವಿಚಾರಮಾಡಿ ನೋಡಿದರೆ. ಅದಕ್ಕೆರ್ಲ್ಲಂ-ಅದಕ್ಕೆಲ್ಲಾ. ಸಂತಸಂ-(ಸಂ) ಸಂತೋಷ.

೧೪೧. ಸುಶಾಂತಿ-ಉತ್ತಮವಾದ ಪ್ರಸನ್ನಭಾವವು. ಪುದಿದು-ವ್ಯಾಪ್ತವಾಗಿ. ಮುದಮೃತದಿಂ-ಸಂತೋಷವೆಂಬ ಅಮೃತದಿಂದ. ತಣಿವವರ್ಗೆ-ತೃಪ್ತಿಹೊಂದುವವರಿಗೆ ಅತಿಲೋಭದೆ-ಅತ್ಯಾಶೆಯಿಂದ. ಅತ್ತಿತ್ತ-ಅಲ್ಲಿ ಇಲ್ಲಿ.

೧೪೨. ಸುದೆಯುಂ-ಅಮೃತವನ್ನು. ಅಗ್ಗಳಂ-ಅಧಿಕ. ಅದವೞಲ್-ದುಃಖ.

೧೪೩. ಚಿತ್ತಮನೊಂದಂ-ಮನಸ್ಸೊಂದನ್ನು. ಮತ್ತಿನ-ಇತರವಾದ. ತಡೆವಡೆಗುಂ-ತಡೆಯುಂ ಹೊಂದುವುವು; (ತಡೆಯಲ್ಪಡುವುವು.) ಮುಗಿಲ್ಗಳ್-ಮೇಘಗಳು. ನೇಸಱಂ-ಸೂರ್ಯನನ್ನು. ಎತ್ತಂ-ಎಲ್ಲಾಕಡೆಯಲ್ಲಿಯೂ. ಮುಸುಕಿದೊಡೆ--ಆವರಿಸಿದರೆ. ಮುಸುಕಂ-ಆವರಣವನ್ನು. ಆನವೆ-ಹೊಂದುವುದಿಲ್ಲವೆ. ಕದಿರ್ಗಳ್-ಕಿರಣಗಳು.

೧೪೪. ತಱಿದಿಕ್ಕುವುದೇ-ಛೇದಿಸಿಹಾಕುವುದೇ. ಸಚ್ಚಿತ್ತಸ್ವಾಸ್ಥ್ಯಂ-ಉತ್ತಮವಾದ ಮನಸ್ಸ್ವಸ್ಥತೆ ಎಂದಪರ್-ಎನ್ನುವರು. (ವರ್ತಮಾನದಲ್ಲಿ ದಪಪ್ರತ್ಯಯ ಬಂದಿದೆ.) ಮಾರಿಸಿಗಳ್-ಮ.

ಹರ್ಷಗಳು. ಇಚ್ಛೆ (ಸಂ) ಇಚ್ಛಾ. ಕಿಚ್ಚಿನ-ಅಗ್ನಿಯ. ತೃಷೆ-ಬಾಯಾರಿಕೆ.

೧೪೫. ಪೞಿಯಲ್-ನಿಂದಿಸಲ್ಪಡುವುದಕ್ಕೆ. ತಗದನಂ-ತಕ್ಕವನಲ್ಲದವನನ್ನು. ಅದೇನೇನೆಸಗರ್-ಏನೇನು ಅಕಾರ್ಯವನ್ನು ತಾನೇ ಮಾಡುವುದಿಲ್ಲ.

೧೪೬. ಸಮನಿಪೊಡಂ-ಸಂಭವಿಸುವುದಾದರೂ. ಒಳ್ಳಿತಲ್ಲದುವುಂ-ಅದೂ ಒಳ್ಳೆಯದಲ್ಲ. ಕ್ಷಾಳನದತ್ತಣಿಂ-ತೊಳೆದು ಕೊಳ್ಳುವುದಕ್ಕಿಂತ ಪಂಕಮುಂ-ಕೆಸರನ್ನು ಇನಿಸುಂ-ಸ್ವಲ್ಪವೂ ದೂರವಿರ್ಪುದು-ದೂರದಲ್ಲಿರುವುದು. ತಗುಗುಂ-ಯುಕ್ತವೆನಿಸುವುದು.

೧೪೭. ಸಾಟಿವರ್ಪ-ಸರಿಬರುವ. ಉಜ್ಜೃಂಭಿಸುತಿರ್ಪ-ಮೆರೆಯುತಿರುವ. ರಾರಾಜಿಪ-ವಿಶೇಷದಿಂ ಪ್ರಕಾಶಿಸುವ. ಪೆಱತು-ಇತರವಾದುದು. ಆಪರಿತೋಷಕ್ಕೆ-ಆ ಸಂತೋಷಕ್ಕೆ; ಅಥವಾ ಇಲ್ಲಿ, ಆಪರಿ+ತೋಷಕ್ಕೆ-ಎಂದಾದರೂ ಪದವಿಭಾಗವಾಗಬಹುದು. ಆಪರಿ-ಆರೀತಿ. ತೋಷಕ್ಕೆ-ಸಂತೋಷಕ್ಕೆ. ಎಣೆವರ್ಪುದು-ಸರಿಬರುವಂತಹುದು.

೧೪೮. ಘನಸುಧಿ-ದೊಡ್ಡ ವಿದ್ವಾಂಸನು. ಪೊಡೆಸೆಂಡು ಪುಟಹೊಡೆವ ಚೆಂಡು. ನಿರ್ಭರದಿಂ-ಅತಿಶಯದಿಂದ. ಮೇದಿನಿಯೊಳ್-ಭೂಮಿಯಲ್ಲಿ. ಬೀೞ್ಗುಂ-ಬೀಳುವನು.

೧೪೯. ಪ್ರಿಯವೆಂದರೆ, ತತ್ಕಾಲದಲ್ಲಿ ಮಾತ್ರವೇ ಸಂತೋಷವನುಂಟುಮಾಡುವುದು. ಹಿತವೆಂದರೆ, ತತ್ಕಾಲದಲ್ಲಿ ಸಂತೋಷವನುಂಟುಮಾಡದಿದ್ದರೂ ಕಡೆಯಲ್ಲಿ ಒಳ್ಳೆಯದೆನಿಸುವುದು. ಬಾಲಕನನ್ನು ಕುರಿತು "ಓದಬೇಡ; ಆಟವಾಡು" ಎಂದರೆ ಆ

ಮಾತು ಅವನಿಗೆ ಸದ್ಯಃ ಸಂತೋಷವನುಂಟುಮಾಡುವುದಾದರೂ ಆಮೇಲೆ ಅದು ಬಾಧಕವಾಗುವುದು ; ಇದು ಪ್ರಿಯ. "ಆಟವಾಡಬೇಡ ; ಓದು" ಎಂದರೆ ಅದು ಅವನಿಗೆ ಸದ್ಯಃ ಸಂತೋಷವನುಂಟುಮಾಡದಿದ್ದರೂ ಆಮೇಲೆ ಫಲಕಾರಿಯೆನಿಸುವುದು ; ಇದು ಹಿತ. ಲೋಕದಲ್ಲಿ ಪ್ರಿಯವಾದ ಮಾತನ್ನು ಆಡುವವರು ಎಲ್ಲೆಲ್ಲಿಯೂ ದೊರೆಯುವರು. ತತ್ಕಾಲದಲ್ಲಿ ಮನಸ್ಸಿಗೆ ಅಪ್ರಿಯವಾಗಿದ್ದರೂ ಮುಂದೆ ಇವನಿಗೆ ಒಳ್ಳೆಯದಾಗಬೇಕೆಂದೆಣಿಸಿ ಅಂತಹ ಹಿತವಾದ ಮಾತನ್ನು ಆಡುವರು ಬಹುವಿರಲರು-ಎಂದರೆ, ಎಲ್ಲಿಯೋ ಕೆಲವರು ಮಾತ್ರವೇ ದೊರೆಯುವರೆಂದು ತಾತ್ಪರ್ಯ.

೧೫೦. ಬಗೆಗೆ-ಮನಸ್ಸಿಗೆ. ಉಂತೆ-ವ್ಯರ್ಥವಾಗಿ. ನೇಹಿಗವೆಸರಂ-ಸ್ನೇಹಿತನೆಂಬ ಹೆಸರನ್ನು.

೧೫೧. ಮಸಗಿದ—ತೀವ್ರವಾದ. ಅಡಸಿದಂ—ವ್ಯಾಪ್ತನಾದವನು. ನೀಡುಂ-ಹೆಚ್ಚಾಗಿ. ಸುಯ್ಗುಂ—ಉಸಿರುಬಿಡುವನು. ಅವಲೋಕಿಸುವಂ-ನೋಡುವನು. ಸ್ವಸ್ಥತೆಯಂ--ಮನಸ್ಸ್ವಾಸ್ಥ್ಯವನ್ನು.

೧೫೨. ಇರ್ಕ್ಕುಂ-ಇರುವುವು. ಪರಿಪಂಥಿಯ-ಶತ್ರುವನ್ನು ಕರಯುಗಮಲ್ಲಾಡಿಪ್ಪುದು-ಕರಯುಗಮಂ + ಅಲ್ಲಾಡಿಪುದು-ಎಂದು ಕ್ರಿಯಾಸಮಾಸ. ಕರಯುಗಮಂ-ಎರಡುಕೈಗಳನ್ನು.

೧೫೩. ಸವನಿಪ-ಸಂಭವಿಸುವ. ಪೊಂಪುಳಿಯ ಸವಗಮಂ-ರೋಮಾಂಚವೆಂಬ ಕವಚವನ್ನು. ತೊಟ್ಟವರ್-ಧರಿಸಿದ. ಅಱಿತರ್-ವಿವೇಕಿಗಳು. ಸೊಗಯಿಪರ್-ಸುಖದಿಂದಿರುವರು. ವಿಷಯಭೋಗದೊಳ್-ಸ್ರಕ್ಚಂದನವನಿತಾದಿಸೌಖ್ಯದಲ್ಲಿ. ಬೆರೆಯದೊಡಂ-ಸೇರದಿದ್ದರೂ.

೧೫೩. ಸುಭಾಷಿತಧನಮಂ-ಸುಭಾಷಿತವೆಂಬ ದ್ರವ್ಯವನ್ನು ಆವುದುದಕ್ಷಿಣೆಯುಂ--ಯಾವದಕ್ಷಿಣೆಯನ್ನು ; (ವಿಶೇಷಣವಾದ ಆವುದು-ಎಂಬ ಪ್ರಥಮೆ ವಿಶೇಷ್ಯವಾದ ದಕ್ಷಿಣೆಯುಂ-ಎಂಬ ದ್ವಿತೀಯೆಯಲ್ಲಿ ಅನ್ವಯಿಸುವುದು) ಪ್ರಸ್ತಾವಂ-ಪ್ರಸಕ್ತಿ. ಜನ್ನದೊಳ್-ಯಜ್ಞದಲ್ಲಿ.

೧೫೫. ತವಕದಿಂ--ಕುತೂಹಲದಿಂದ. ಅವಧರಿಸಂ--ಗ್ರಹಿಸನು. ಭುವನದೊಳ್—ಲೋಕದಲ್ಲಿ. ಅದೇಂ—ಅದೇನು ಪ್ರಯೋಜನ ?

೧೫೬. ಮನೆದೋಂಟಕೆ-ಮನೆಗೆ ಸೇರಿದ ತೋಟಕ್ಕೆ. ಮನವೊಲ್ದರ್-ಮನಸ್ಸಿನಲ್ಲಿ ಪ್ರೀತಿಯುಳ್ಳವರು. ಪೊಲ್ಲೆಣಿಸುವರ್-ಪೊಲ್ಲಮಂ + ಎಣಿಸುವರ್--ಕೆಟ್ಟುದನೂಹಿಸುವರು. ಪುಚ್ಚಱಿಗಳ್ಗೆ-ಕೇಡುಗಳಿಗೆ. ಅಗುರ್ವಿಸುವ-ಭಯವನುಂಟುಮಾಡುವ. ಪಱುವೊಳ್-ಕಾಡಿನಲ್ಲಿ.

೧೫೭. ಭೋರನೆ-ಥಟ್ಟನೆ. ಎನಸುಂ-ಅಧಿಕವಾಗಿ. ಕೆರಳ್ದಪ್ಪುದು-ವಿಜೃಂಭಿಸುವುದು.

೧೫೮. ಹರಣಂ ಅೞಿವೆಯ್ದುವಂದು-ಎಂದನ್ವಯ; ಪ್ರಾಣವು ನಾಶವನ್ನು ಹೊಂದುವಾಗ. ಸಮುದ್ಭವಿಸಲೊಡಂ-ಪ್ರಾಪ್ತವಾಗಲು. ಬರ್ದುಂಕುವಾತಂಗೆ-ಬದುಕುವವನಿಗೆ. ಅೞಿದಂಗೆ-ಸತ್ತವನಿಗೆ. ಪ್ರಾಣಕ್ಕೆ ಅಪಾಯವುಂಟಾದ ಕಾಲದಲ್ಲಿ ಮಿತ್ರದರ್ಶನವಾವಶ್ಯಕ. ಮಿತ್ರದರ್ಶನವಾಗುವುದೂ, ಬಂದುವೇಳೆ ತಾನು ಬದುಕಿಕೊಂಡರೆ ಆತನು ಮಾಡಿದ ಉಪಚಾರಾದಿಗಳನ್ನು ನೆನೆದು ಸಂತೋಷಿಸುವನು ; ಬಂದುವೇಳೆ ಸತ್ತರೂ ತನ್ನ ಕುಟುಂಬವರ್ಗವನ್ನು ಸಂತೈಸಿ ಆತನು ತನಗೆಮಾಡಿದ ಸಾಹಾಯ್ಯದಿಂದ ಸದ್ಗತಿಯಂ ಪಡೆಯುವನು.

೧೫೯. ದುರುಕ್ತಿಯಂ-ಕೆಟ್ಟಮಾತನ್ನು. ಬರೆದೆನೋ-ಹೇಳಿದೆನೋ. ನಲ್ಮೆಯಂ-ಪ್ರೀತಿಯನ್ನು. ನಿಱಿಸುತ್ತುಂ-ಇಡುತ್ತ. ಎಂತಾನುಂ-ಹೇಗಾದರೂ.

೧೬೦. ಬೀಗದ-ಉಬ್ಬದಿರುವ. ಮಱುಗದ-ದುಃಖಪಡದ. ಭೀತಿಗೊಳ್ಳದ-ಭಯಪಡದ. ಜಗದಾಭರಣಂ-ಇಲ್ಲಿ ಜಗದ+ಆಭರಣಂ-ಎಂದಾದರೂ, ಜಗದಾಭರಣಂ-ಎಂದು ಒಟ್ಟಿಗಾದರೂ ಪದ ವಿಭಾಗ ಮಾಡಬಹುದು. ಲೋಕಕ್ಕೆ ಅಲಂಕಾರವಾದವನೆಂದರ್ಥ. ವಿರಲಂ ಪಡೆಗುಂ-ಅನೇಕಪುತ್ರರನ್ನು ಪಡೆವವಳಾದರೂ ಅಂತಹ ಗುಣವಂತರಾದ ಕೆಲವರು ಪುತ್ರರನ್ನು ಮಾತ್ರವೇ ಪಡೆವಳು—ಎಂದರೆ, ಹುಟ್ಟಿದ ಮಕ್ಕಳೆಲ್ಲರೂ ಅಂತಹ ಗುಣಾಢ್ಯರಾಗಿರುವುದಿಲ್ಲ. ಯಾವನೋ ಒಬ್ಬನು ಮಾತ್ರವೇ ಅಂತವನಾಗಿರುವನೆಂದಭಿಪ್ರಾಯ.

೧೬೧. ಕೆಳೆಯರ್ಕಳಂ-ಸ್ನೇಹಿತರನ್ನು. ಅರ್ಜಿಸವೇೞ್ಕುಂ-ಸಂಪಾದಿಸಬೇಕು. ದಾಂಟಂ-ದಾಟನು.

೧೬೨. (೫೯ ನೆಯ ಪದ್ಯದ ಟಿಪ್ಪಣಿಯನ್ನು ನೋಡಿ)

೧೬೩. ಆವುದಂ ಅಕ್ಕರಂಗಳ್ ಸಾಲಂ ಆರಚಿಸಿರ್ಪಂ—ಎಂದು ಅನ್ವಯ; ಯಾವ ಅಕ್ಷರಪಙ್ಕ್ತಿಯನ್ನು ನಿರ್ಮಿಸಿರುವನೋ ಕೋವಿದವರರೆನಿಪವರುಂ-ಶ್ರೇಷ್ಠರಾದ ವಿದ್ವಾಂಸರೆಂದು ಪ್ರಖ್ಯಾತರಾದವರೂ.

೧೬೪. ಜಯವೀವೌಷಧಂ-ಜಯವನುಂಟುಮಾಡುವ ಮದ್ದು. ಸುಹೃಜ್ಜನವದು--ಆ ಸ್ನೇಹಿತರು. ಅಗಲ್ಕೆ-ಅಗಲಿಕೆ. ಮತ್ತೆ--ಮತ್ತು. ಆರಯೆ-ವಿಚಾರಮಾಡಲು.

೧೬೫. ಲೇಸು-ಮೇಲು. ವಿಭಾವಿಸೆ-ಪರಿಶೀಲಿಸಲು. ನಿಮ್ಮನ್ನರದು-ನಿಮ್ಮಂತವರದು. ರಸೆಯೊಳ್-ಭೂಮಿಯಲ್ಲಿ. ಮಱುಮೆಯ್ಯೊಳ್-ಜನ್ಮಾಂತರದಲ್ಲಿ. ಅಸುಗಳ್-ಪ್ರಾಣಗಳು. ದೊರೆತಪ್ಪುವು-ದೊರೆಯುವುವು. ನಿಮ್ಮನ್ನರ್-ನಿಮ್ಮಂತವರು. ದೊರೆವರೇ-ದೊರೆಯುತ್ತಾರೆಯೇ.

೧೬೬. ಜಳಧಿಯ-ಸಮುದ್ರದ. ಪಾರಮಂ--ಆಡಿಯನು ಅಱಲೊಂದಱ-ಬಂದುದುಃಖದ. ಎಯ್ದದನಿತಱೊಳೇ-ಹೊಂದದೆ ಇರುವಷ್ಟರಲ್ಲಿಯೇ. ಸಂಗಳಿಸಿತು-ಒದವಿತು. ಅಗ್ಗಳಿಪ್ಪವು-ಹೆಚ್ಚುವುವು. ಅಗ್ಗಳಶಬ್ದದಮೇಲೆ ಇಸುಪ್ರತ್ಯಯ ಸೇರಿ ಧಾತುವಾಗಿದೆ.

೧೬೭. ಸ್ಖಲನಂ-ಎಡವುವಿಕೆ ಮತ್ತು ಭಂಗ. ಸುಪಥದಲ್ಲಿ-ಒಳ್ಳೆಯದಾರಿಯಲ್ಲಿ. ಒನ್ನಂ-ಭಂಗವು. ಅಡಿಗಡಿಗಂ-ಆಗಾಗ.

೧೬೮. ಬಾಗಿದ-ಬಗ್ಗಿದ, ಮತ್ತು ತಲೆವಾಗಿದ. ಚೆನ್ನನೆ-ಚೆನ್ನಾಗಿ. ಸವಲತೆವಡೆದ-ಸರಲವಾಗಿರುವ. ಧೃತಿಗೆ-ಧೈರ್ಯಕ್ಕೆ. ಘನವಂಶದೆ-ಶ್ರೇಷ್ಠವಾದ ಬಿದಿರಿನಲ್ಲಿ ಮತ್ತು ಸತ್ಕುಲದಲ್ಲಿ. ಸರಿಯಾದ ರೀತಿಯಲ್ಲಿ ಬಗ್ಗಿದುದೂ, ಸರಲವೂ, ಉಪಹತಿಯುಂಟಾದಾಗ ಧೈರ್ಯವಂತಾಳಲು ಆಶ್ರಯವೂ, ಉತ್ತಮವಾದ ಬಿದಿರಿಂದ ಮಾಡಿದುದೂ ಆದ ಬಿಲ್ಲು; ಮತ್ತು ವಿನಯದಿಂದ ತಲೆವಾಗಿಯೂ, ಸಾರಳ್ಯದಿಂದ ಕೂಡಿಯೂ, ಕಷ್ಟಕಾಲದಲ್ಲಿ ಧೈರ್ಯವಂ ತಾಳಿಯೂ, ಸತ್ಕುಲದಲ್ಲಿ ಹುಟ್ಟಿಯೂ ಇರುವ ಮಿತ್ರನೂ ಮಡದಿಯೂ ಲೋಕದಲ್ಲಿ ದೊರೆಯುವುದು ವಿರಳ; ಗುಣಹೀನವಾದ ಬಿಲ್ಲೂ, ಗುಣಹೀನನಾದ ಮಿತ್ರನೂ, ಗುಣಹೀನೆಯಾದ ಮಡದಿಯೂ ವಿಶೇಷವಾಗಿ ದೊರೆಯಬಹುದು. ಮೇಲೆ ನಿರವಿಸಿದ

ಗುಣಗಳುಳ್ಳ ಬಿಲ್ಲೂ, ಮಿತ್ರನೂ, ಮಡದಿಯೂ ದೊರೆಯು ವುದು ಅಪೂರ್ವವೆಂದು ತಾತ್ಪರ್ಯ.

೧೬೯. ಬೇರ್ಪಡಿಸದ—ಭೇದವುಳ್ಳವನೆಂದೆನಿಸದಿರುವ. ಎಂತ ಪ್ಪುದು-ಎಂತಹುದು. ತನಯನೊಳಂ-ಮಗನಲ್ಲಿಯೂ; ಭ್ರಾತೃ ವಿನೊಳಂ-ಸಹೋದರನಲ್ಲಿಯೂ.

೧೭೦. ಮಹಾಲಾಭಂಬಡೆವುದು-ಹೆಚ್ಚಾದ ಅರ್ಥಸಿದ್ಧಿಯಂ ಪಡೆಯುವುದು. ಕಳೆವುದುಂ-ಪರಿಹರಿಸಿಕೊಳ್ಳುವುದೂ, ಕಳೆಯೊಂ ದಿದಂಗೆ-ಸ್ನೇಹಹೊಂದಿದವನಿಗೆ.

೧೭೧. ತನುವಿಂಗೆ-ಶರೀರಕ್ಕೆ. ಅಪಾಯಂ-ನಾಶವು. ಸನಿಹ ದೊಳ್-ಸಮೀಪದಲ್ಲಿ. ಚಣದೆ-ಕ್ಷಣದಲ್ಲಿ. ಅನುಬಂಧಂಗಳ್-ಸಂಬಂಧಗಳು.

೧೭೨. ಪುಣ್ಣೊಳ್—ಗಾಯದಲ್ಲಿ. ಜಠರಾಗ್ನಿ—ಹೊಟ್ಟೆ ಯಲ್ಲಿರುವ ಅಗ್ನಿ. ಚುರ್ಚುಗುಂ ದಹಿಸುವುದು ; ಹಸಿವಿನಿಂದ ಉದ್ದೀಪಿಸುವುದೆಂದರ್ಥ. ಪಗೆ-ದ್ವೇಷಂಗಳು. ಎಡೆಯೊದವಿದ ಪ ದದೆ-ಅವಕಾಶಸಿಕ್ಕಿದಾಗ. ಪೆರ್ಚಳಿಕುಂ-ಅತಿಶಯಿತವಾಗುವುದು.

೧೭೩. ಬೆಂಬಲಂ-ಆಶ್ರಯ. ಎನಿಸುವುದಂ, ಇಂಬಾದುದಂ_ ಎಂಬಿವೆರಡೂ ಮಣಿಯುಂ—ಎಂಬುದಕ್ಕೆ ವಿಶೇಷಣ. ಅಕ್ಕರದ— ಅಕ್ಷರದ.

೧೭೪. ಸಂದಿಸೆ--ಸೇರಲು. ಗೋಳಿಡುವಂ--ಗೋಳಾಡು ವನು. ಎಲ್ಲಂದದೆ--ಸರ್ವಪ್ರಕಾರದಿಂದ. ಅದಂ ವೃದ್ಧಿಯಂ ಬಂದಿಪಂ-ಎಂದು ಅನ್ವಯ ; ಆ ದುಃಖವನ್ನು ಹೆಚ್ಚಿಸುವನೆಂ ದರ್ಥ. ಅದಱ-ಆದುಃಖದ.-ಬಂದಂ-ಹೊಂದನು.

೧೭೫. ದಂದುಗಕೆ-ದುಃಖಕ್ಕೆ. ಮದ್ದು-ಔಷಧ. ಪಂಬಲಂ-

ಹಂಬಲವನ್ನು. ಸಂತವಿರ್ಪುದೆಗಡ—ಸಮಾಧಾನಗೊಂಡಿರುವುದೇ ಅಲ್ಲವೆ.

೧೭೬. ಉಜ್ಜಿತ-ವಿಶೇಷವಾಗಿ. ಎಡರಡಸಿದನಂ ಪೊರೆಯಲುಂ-ಕಷ್ಟಪಡುವವನನ್ನು ರಕ್ಷಿಸುವುದಕ್ಕೂ. ನೆಪೆ-ಚೆನ್ನಾಗಿ. ಮಂತ್ರಿಪುದು-ಆಲೋಚಿಸುವುದು.

೧೭೭. ಜಂತುಗೆ-ಪ್ರಾಣಿಗೆ. ಜನಿಪ್ಪ—ಹುಟ್ಟುವ. ಸಲೆ--ಚೆನ್ನಾಗಿ. ಮುನ್ನಮೆ-ಮುಂಚೆಯೆ. ಅಱಿತಪನೇ—ತಿಳಿಯುವನೇ.

೧೭೮. ಪೆರ್ಮಗಮುಮಂ-ದೊಡ್ಡಜಿಂಕೆಯನ್ನೂ. ತೊಲಗಿತ್ತು—ತೊಲಗಿತು. ಭೋಂಕನೆ—ಥಟ್ಟನೆ. ಕ್ಷುತ್ತುಗೊಂಡು—ಹಸಿವಿನಿಂದ ಕೂಡಿ. ಇಂದು--ಈದಿವಸ. ಎಲೆಕಾಲಾ--ಎಲೆ ಯಮನೆ. ಪೇೞತೇನೊ-ಮಾಡತಕ್ಕುದಿನ್ನೇನುಂಟೋ. ಗೆಯ್--ಅದಂ ಮಾಡು. ಆಂ-ನಾನು. ಅದುಮಂ-ಅದನ್ನೂ. ಸೈಸಲ್ಕೆವೇಱ್ಕುಂಗಡಾ-ಸಹಿಸಬೇಕಲ್ಲವೆ.

೧೭೯. ಕೊಂಕಿನಿಂ—ಕೌಟಿಲ್ಯದಿಂದ. ಇಳೆಯುಲ್ಲಿ—ಭೂಮಿಯಲ್ಲಿ. ಏಳಿದಮುಂ-ತಿರಸ್ಕಾರವನ್ನು. ಎಯ್ದಿಂ-ಹೊಂದನು.